

ಭಾರತೀಯ ದೇವಾಲಯಗಳ ಜಾನಪದ ಮೂಲ

ವಿದ್ಯಾಲಂಕಾರ. ಪ್ರೊ. ಎಸ್. ಕೆ. ರಾಮಚಂದ್ರ ರಾವ್

ಭಾರತೀಯ ದೇವಾಲಯಗಳ ಜಾನಪದ ಮೂಲ

ಭಾರತೀಯ ದೇವಾಲಯಗಳ ಜಾನಪದ ಮೂಲ

ವಿದ್ಯಾಲಂಕಾರ

ಪ್ರೊ॥ ಎಸ್. ಕೆ. ರಾಮಚಂದ್ರರಾವ್

ಐಬಿಎಚ್ ಪ್ರಕಾಶನ

ಗಾಂಧಿನಗರ ಬೆಂಗಳೂರು 560 009

BHARATEEYA DEVALAYAGALA JANAPADA MOOLA : —
A book on folk origin of Indian Temples by Prof. S. K. Ramachandra Rao, in Kannada and Published by G. K. Ananthram IBH Prakashana Gandhinagar Bangalore 560 009

ಸರ್ವಸ್ವಾಮ್ಯ © 1981 ಗ್ರಂಥಕರ್ತರದು

ಬೆಲೆ ರೂ. 15-00

ರೇಖಾಚಿತ್ರಗಳು : ಲೇಖಕರು

ಮೊದಲನೆಯ ಮುದ್ರಣ : 1981 ಪ್ರಕಾಶಕರು : ಜಿ. ಕೆ. ಅನಂತರಾಮ್ ಐಬಿಎಚ್ ಪ್ರಕಾಶನ ಐದನೆಯ ಮುಖ್ಯರಸ್ತೆ, ಗಾಂಧಿನಗರ ಬೆಂಗಳೂರು 560 009. ಮುದ್ರಕರು : ಎಚ್. ಎಸ್. ಎನ್. ರಾವ್ ಐಬಿಎಚ್ ಪ್ರಕಾಶನ ಪ್ರಿಂಟರಿ ರಾಮಯ್ಯ ಇಂಡಸ್ಟ್ರಿಯಲ್ ಎಸ್ಟೇಟ್ ಬೆಂಗಳೂರು 560 054.

ಮೊದಲ ಮಾತು

ದೇಶದ ಧರ್ಮದ, ದೇವಾಲಯಗಳ ಹಿಂಬದಿಯಲ್ಲೂ ಅಡಿಪಾಯದಲ್ಲೂ ಅಡಗಿರುವ ಜಾನಪದ ಚೌಕಟ್ಟನ್ನು ಸಾಮಾನ್ಯವಾಗಿ ಜನ ಗಮನಿಸಲಾರರು. ಹೊರಪದರವನ್ನೇ ಒಳಮೈಯೆಂದು ಬಗೆಯುವವರೇ ಬಹುಮಂದಿಯಲ್ಲವೆ ? ಆದರೆ ದಿಟವಾಗಿ, ಜಾನಪದವೆಂಬ ಕಳೆ ನಮ್ಮ ನಾಡ ಸಂಸ್ಕೃತಿಯ ಈ ವಿವರದಲ್ಲಿ ಎದ್ದು ಕಾಣುತ್ತದೆ ; ಸ್ವಲ್ಪ ಆಳವಾಗಿ ನೋಡಬೇಕಷ್ಟೆ.

ದೇವಾಲಯಗಳ ರಚನೆಯನ್ನು ಕುರಿತು ಮೊದಲ ಸಂಪುಟದಲ್ಲಿ ಹೇಳಿಯಾದ ಮೇಲೆ, ಇಲ್ಲಿ ದೇವಾಲಯಗಳ ಸ್ವಭಾವವನ್ನು ವಿವೇಚನೆ ಮಾಡಲಾಗಿದೆ. ದೇವಾಲಯಕ್ಕೆ ಜಾನಪದ ನೆಲೆ ಹೇಗೆ ಒದಗಿತೆಂದೂ, ಮಾನವಸ್ವಭಾವದ ಹಂದರದ ಮೇಲೆ ಕಲ್ಪನೆ – ಕಟ್ಟಳೆಗಳು ಹೇಗೆ ಮೂಡಿಕೊಂಡು ಬಂದುವೆಂದೂ, ದೈವದ ನೆಲೆಗಟ್ಟು ಏನೆಂಬುದನ್ನೂ ಈ ಸಂಪುಟದಲ್ಲಿ ವಿವರಿಸಲಾಗಿದೆ.

ಮುಂದಿನ ಸಂಪುಟದಲ್ಲಿ ಮುಖ್ಯವಾಗಿ ಬರುವ ದೇವತಾಮೂರ್ತಿ ಕಲ್ಪನೆಗೆ ಈ ವಿವೇಚನೆ ಸಾಕಷ್ಟು ನೆರವಾಗುತ್ತದೆ. ಆಗಮ ಸಂಪ್ರದಾಯವು ಜಾನಪದ ಕಲ್ಪನೆ – ಕಟ್ಟಳೆಗಳ ಮಡಿಲಿಂದಲೇ ಎದ್ದುದು ; ಅದೇ ಬೇರೆಯದೊಂದು ಸಂಸ್ಕೃತಿಯ ಅವಶೇಷವಲ್ಲ. ಯಾವುದೇ ಆಗಮವಾಗಲಿ, ಅದರಲ್ಲಿ ಜಾನಪದವು ಹಾಸುಹೊಕ್ಕಾಗಿ ಸೇರಿಕೊಂಡುಬಂದಿರುವುದನ್ನು ಗುರುತಿಸಬಹುದು. ಜಾನಪದದ ಅರಿವು ಮರೆಯಾದರೇ ಆಗಮವು ಬಲಗುಂದುವುದು. ಆಗಮವು ಈ ಕಾಲದಲ್ಲಿ ಸಾರ್ಥಕ್ಯವನ್ನು ಕಳೆದುಕೊಳ್ಳುತ್ತ ಹಿಂದೆ ಸರಿಯುತ್ತಿರುವುದು ಈ ಕಾರಣದಿಂದಲೇ.

ಇಲ್ಲಿ ವಿವರಣೆಗೆ ಬಂದಿರುವ ವಿವರಗಳು ಆಗಮದ ಮೇಲೆ ಹೊಸ ಬೆಳಕನ್ನು ಚೆಲ್ಲಲು ನೆರವಾಗಬಲ್ಲುವು ; ಹಲವಾರು ತೊಡಕಿನ ಸಮಸ್ಯೆಗಳಿಗೆ ಪರಿಹಾರವನ್ನು ಸೂಚಿಸಬಲ್ಲುವು.

ಸಾ. ಕೃ. ರಾಮಚಂದ್ರ ರಾವ್

ವಿಷಯ ಸೂಚಿ

		ಪುಟ
ಜಾನಪದ ಚೌಕಟ್ಟು	...	1
ಹಿಂದಣ ಗುಡಿಗಳು, ಮುಖವಾಡಗಳು	...	15
ಹಾವು ಮತ್ತು ಬೆಟ್ಟ	...	41
ಮಾತೃದೇವತೆಗಳು	...	72
ದೈವಗಳ ಪ್ರಪಂಚ	...	95

ಜಾನಪದ ಚೌಕಟ್ಟು

ನಮ್ಮ ದೇಶವು ಗುಡಿಗಳ ದೇಶವೆಂದು ಜಗತ್ತಿನಲ್ಲೆಲ್ಲ ಪ್ರಸಿದ್ಧವಾಗಿದೆ. ಆದರೆ ಜಗತ್ತಿನ ಪರಿಚಯಕ್ಕೆ ಬಂದಿರುವ ಗುಡಿಗಳು ದೊಡ್ಡದೊಡ್ಡವಷ್ಟೆ. ಹೀಗೆ ಹೆಸರಾಗಿರುವ ಗುಡಿಗಳ ಹರವು ಹೆಚ್ಚಿನದು, ಅದರಲ್ಲಿ ಹಲವಾರು ಕಟ್ಟಡಗಳು ಕೂಡಿಕೊಳ್ಳುತ್ತವೆ. ಈ ಕಟ್ಟಡಗಳಲ್ಲಿ ಬಹುಭಾಗ ಈ ಕಾಲಕ್ಕೆ ಯಾವ ಬಳಕೆಗೂ ಬಾರದೆ ಇರುವುದನ್ನು ಕಾಣುತ್ತೇವೆ. ಪಾಳುಬಿದ್ದ ಮಂಟಪಗಳು, ಖಾಲಿ ಅಂಕಣಗಳು, ಬಾಗಿಲು ಮುಚ್ಚಿದ ಕೋಣೆಗಳು, ಏನನ್ನೂ ಒಳಗೊಳ್ಳದ ಗೂಡುಗಳು ಇವನ್ನು ಯಾವ ದೊಡ್ಡ ಗುಡಿಯಲ್ಲಾದರೂ ಕಾಣಬಹುದು. ಈ ಕಟ್ಟಡಗಳನ್ನು ಕಟ್ಟಿದ ಸಮಯದಲ್ಲಿ ಏನಾದರೂ ಪ್ರಯೋಜನದ ಅರಿವು ಇದ್ದಿರಬಹುದೇನೋ ; ಈಗಂತೂ ಕಾಣದು. ಮನುಷ್ಯಪ್ರಯತ್ನ ಹೀಗೆ ವ್ಯರ್ಥವಾಗಿರುವುದನ್ನು ಕಂಡಾಗ ಗುಡಿಯಲ್ಲಿ ಉಪಯೋಗದ ಅಂಶಕ್ಕಿಂತ ಅಲಂಕರಣದ ಅಂಶವೇ ಹೆಚ್ಚೆಂದು ಅನಿಸುವುದೂ ಸಹಜವೇ. ಗುಡಿಗಳಲ್ಲಿ ಪೂಜೆ ನಡೆಯುವುದಕ್ಕಿಂತ ಹೆಚ್ಚಾಗಿ ಅವುಗಳ ನೋಟ ಮುಖ್ಯವೆನಿಸುತ್ತದೆ ; ಪ್ರವಾಸಿಗಳಿಗೆ ಅಲ್ಲಿ ದೊರೆಯುವ ಸಮಾಧಾನವೇ ಹೆಚ್ಚು. ಅರಸರ ಔದಾರ್ಯ, ಶ್ರೀಮಂತರ ಆದರ, ಕೆಲಸಗಾರರ ಕೌಶಲ, ಊರವರ ಸಂಪತ್ತು ಇವನ್ನೆಲ್ಲ ಅವಲಂಬಿಸಿ ಈ ದೊಡ್ಡದೊಡ್ಡ ಗುಡಿಗಳು ಕಾಣಿಸಿಕೊಳ್ಳುತ್ತವೆ. ಸಾಮಾನ್ಯ ಜನರಿಗೆ ಇವುಗಳಿಂದ ಆಗುವ ಉಪಯೋಗ ಅಷ್ಟಕ್ಕಷ್ಟೇ. ಅವರ ದಿನನಿತ್ಯದ ಅಗತ್ಯಗಳನ್ನು ಈ ಗುಡಿಗಳೇನು ಪೂರೈಸುವುದಿಲ್ಲ, ಅವರ ಸಾಮಾನ್ಯ ಕಲ್ಪನೆಗಳನ್ನೇನು ಇವು ಪ್ರತಿಬಿಂಬಿಸುವುದಿಲ್ಲ. ಗುಡಿಯ ಶ್ರೀಮಂತಿಗೆ, ಸೌಂದರ್ಯ, ವೈಶಾಲ್ಯ, ಉತ್ಸವಗಳ ವೈಭವ, ದೇವರ ಜವಾಹಿರಿ ಮೊದಲಾದುವಕ್ಕೂ ಜನರ ಭಕ್ತಿಗೂ ಸಂಬಂಧವಿರದು.

ದೂರದ ಹಳ್ಳಿಗಳಲ್ಲಿ ಕಾಣಸಿಗುವ, ಊರ ದಾರಿಯ ಬದಿಯಲ್ಲಿ ಸಣ್ಣದಾಗಿ ಮೈದೋರಿಕೊಂಡಿರುವ ಸಣ್ಣಪುಟ್ಟ ಗುಡಿಗಳು ಜನರ ಅಗತ್ಯಗಳನ್ನೂ

ಬಯಕೆಗಳನ್ನೂ ಪೂರೈಸಲೆಂದೇ ಸಿದ್ಧವಾದುವು. ಇಂಥ ಗುಡಿಗಳೇ ದಿಟವಾಗಿ ಗುಡಿಗಳು ; ಉಳಿದವು ಆಡಂಬರದವು. ಜನಜೀವನದಲ್ಲಿ ಗುಡಿಯ ಅಥವಾ ಸಾರ್ವಜನಿಕ ಪೂಜೆಯ ಅಗತ್ಯ ಇರುವುದಾದರೆ ಅವು ಈ ಗುಡಿಗಳಿಂದಲೇ ತೀರುವುವು. ಜನರ ಆದರ ನಿಜವಾಗಿ ಊರಿಕೊಳ್ಳುವುದು ಈ ಗುಡಿಗಳಲ್ಲೇ. ಈ ಸಣ್ಣಪುಟ್ಟ ಗುಡಿಗುಂಡಾರಗಳಲ್ಲಿ ಕಲೆಯ ಪಾಲು ಕಡಮೆಯುದಿರಬಹುದು, ಅದರ ಅಚ್ಚುಕಟ್ಟು ಅಷ್ಟಾಗಿ ಇಲ್ಲದಿರಬಹುದು, ಅದರ ಕಟ್ಟಡ ಒರಟು-ಒರಟಾಗಿರಬಹುದು, ಗುಡಿಯೊಳಗಣ ಮೂರ್ತಿ ಕುರೂಪವಾಗಿರಬಹುದು. ಆದರೆ ಸಹಜವಾದ ಬಯಕೆಯಿಂದ ನೇರವಾಗಿ ತೋರಿಕೊಂಡ ವಿವರ ಈ ಗುಡಿ ಎನ್ನುವುದನ್ನು ಮರೆಯುವಹಾಗಿಲ್ಲ.

ಈ ಗುಡಿಗೆ ಬಂದು ಅದರ ಪ್ರಯೋಜನವನ್ನು ಪಡೆದುಕೊಳ್ಳುವ ಜನ ಕಪಟವರಿಯದ ಸರಳ ಮನಸ್ಸಿನವರು ; ಸಭ್ಯತೆಯ ಸುಳಿಯಲ್ಲಿ ಸಿಕ್ಕು ತಮ್ಮತನವನ್ನು ಕಳೆದುಕೊಂಡಿರುವವರಲ್ಲ. ಗುಡಿಗೂ ಅವರಿಗೂ ತೀರದ, ಹತ್ತಿರದ ನಂಟು. ಈ ನಂಟು ಸಂಕುಚಿತವಾದುದೆಂದು ಹೇಳಬಹುದು, ಆದರೆ ಅದು ಆಳವಾದುದು ಎಂದೂ ಹೇಳಬೇಕು. ದೊಡ್ಡ ಊರಿನ ದೊಡ್ಡಗುಡಿಗೆ ಹೋಗುವ ಜನರಲ್ಲಿ ಮುಕ್ಕಾಲುಪಾಲು ಮಂದಿ ಬರಿಯ ಪ್ರವಾಸಿಗಳು, ಹವ್ಯಾಸಿಗಳು ; ಕಚೇರಿಗೆ ಹೋಗುವಂತೆಯೇ ವಿಹಾರಕ್ಕೆ ಹೋಗುವಂತೆಯೇ, ಮಾರುಕಟ್ಟೆಗೆ ಹೋಗುವಂತೆಯೇ ಗುಡಿಗೂ ಹೋಗುವವರು. ಅಲ್ಲಿ ಮಾಡಬೇಕಾದುದಕ್ಕಿಂತ ನೋಡುವುದು ಹೆಚ್ಚಾಗಿರುತ್ತದೆ ಅವರ ಪಾಲಿಗೆ. ಹಳ್ಳಿಯ ಸಣ್ಣಗುಡಿಯಲ್ಲಿ ನೆರೆಯುವ ಜನರ ಶ್ರದ್ಧೆ, ಭಕ್ತಿ, ಮನೋವೃತ್ತಿಗಳನ್ನು ಇವರಲ್ಲಿ ಕಾಣುವುದು ಕಷ್ಟ.

ನಗರದ ದೊಡ್ಡಗುಡಿಯು ಪಾಳುಬೀಳುವುದು ಸುಲಭ, ವಾಡಿಕೆಯೂ ಹೌದು. ಗುಡಿಯು ಶ್ರೀಮಂತರ ಆದರದ ಮೇಲೇ ನಿಂತಿರುವುದರಿಂದ, ಶ್ರೀಮಂತರ ಶ್ರೀಮಂತಿಗೆಯೂ ಆದರವೂ ತೋರಿ ಮರೆಯಾಗುವಂಥದಾಗಿರುವುದರಿಂದ, ಗುಡಿಯ ವಹಿವಾಟು ಭಾರಿ ಪ್ರಮಾಣದ್ದಾದುದರಿಂದ ಇಂಥ ಗುಡಿಯು ಒಂದೇ ರೀತಿಯಾದ ಏಳ್ಗೆಯನ್ನು ಅನುಭವಿಸಲಾರದು. ಕೆಲಕಾಲ ವೈಭವದಲ್ಲಿ ಓಲಾಡಿ, ಕಾಲ ಬದಲಾದಂತೆ ಹೇಳುವವರು ಕೇಳುವವರು ಇಲ್ಲದೆ ಪಾಳು ಬೀಳುತ್ತದೆ. ನಮ್ಮ ದೇಶದಲ್ಲಿ ಹೀಗೆ ಪಾಳುಬಿದ್ದಿರುವ ಸಾವಿರಾರು ಗುಡಿಗಳು 'ಪ್ರಾಚೀನಮಂದಿರಗಳ ರಕ್ಷಣೆ'ಯ ಆಯಕಟ್ಟಿನೊಳಗೆ ಮಾತ್ರ ಉಳಿದಿವೆ. ಪರಕೀಯರ ದಾಳಿ ಇದಕ್ಕೆ ಕಾರಣವಲ್ಲ ; ನಮ್ಮ ಜನರ ಅಸಡ್ಡೆಯೇ

ಬಹುವೇಳೆ ಕಾರಣ. ಜನರ ಅನಾದರಕ್ಕೆ ಕಾರಣ ಈ ಗುಡಿಗಳು ಮೂಡಿಕೊಂಡ ಸಂದರ್ಭ, ಗುಡಿಯು ಮೂಡಿಸಿಕೊಂಡ ಆಡಂಬರ. ಹೊರದೇಶದಿಂದ ಬಂದ ಪ್ರವಾಸಿಗಳಿಗೆ ಮಾತ್ರ ಈ ಸ್ಮಾರಕಗಳು ಸೊಗಯಿಸುತ್ತವೆ ; ಪೂಜೆ, ಪುನಸ್ಕಾರಗಳು ನಡೆಯುವುದಿಲ್ಲ.

ಹಳ್ಳಿಯ, ಬೀದಿಯ ಪಕ್ಕದ ಗುಡಿಗಳು ಹೀಗಲ್ಲ. ಎಲ್ಲ ಕಾಲಕ್ಕೂ ನಿಂತಿರುವ ಸ್ವಭಾವ ಅವುಗಳದ್ದು. ಯಾವ ಕಾಲಕ್ಕೂ ಅವುಗಳ ವೈಭವವೆಂಬುದಿಲ್ಲ ; ಹಾಗೆಂದು ಪಾಳುಬೀಳುವುದೂ ಇಲ್ಲ. ಎಂದಿನಂತೆಯೇ ತಗ್ಗಿ, ಬಗ್ಗಿ ಮುಂದೆ ಸಾಗುತ್ತಲೇ ಇರುತ್ತವೆ. ಇಂದಿಗೂ ಇಂಥ ಸಣ್ಣ ದೇಗುಲಗಳಲ್ಲಿ ಪೂಜೆ ನಡೆಯುವುದು ನಿಲ್ಲುವುದಿಲ್ಲ, ಜನರು ಕಾಲಕಾಲಕ್ಕೆ ನೆರೆಯುವುದು ನಿಲ್ಲುವುದಿಲ್ಲ, ಅಕ್ಕಪಕ್ಕದವರು ಅಲ್ಲಿನ ದೈವಗಳಿಗೆ ನಡೆದುಕೊಳ್ಳುವುದು ನಿಲ್ಲುವುದಿಲ್ಲ. ಇದು ಜಾನಪದ ಗುಡಿಗಳ ಸ್ವಾರಸ್ಯ.

ಇದನ್ನು ಅರಿತುಕೊಳ್ಳಬೇಕೆಂದರೆ ನಮ್ಮ ದೇಶದ ಜನಜೀವನದ ಕೆಲವು ವಿವರಗಳನ್ನು ಗಮನಿಸಬೇಕು. ಇತಿಹಾಸದ ಆರಂಭಕಾಲದಿಂದ ಹಲವಾರು ಬುಡಕಟ್ಟುಗಳ ಜನರು ಇಲ್ಲಿಗೆ ಬಂದು ಬೆರೆತುಹೋಗಿದ್ದಾರೆ. ಈಗ ನಮ್ಮ ದೇಶದ ಜನರಲ್ಲಿ ಪ್ರಪಂಚದ ಎಲ್ಲ ಜನಾಂಗಗಳ ಶಾರೀರಕ ಲಕ್ಷಣಗಳನ್ನೂ ಗುರುತಿಸಬಹುದು. ಆ ಜನರೆಲ್ಲ ಇಲ್ಲಿಗೆ ಬಂದಾಗ ಆಯಾ ಸಂಸ್ಕೃತಿಗಳೂ ಜೊತೆಗೇ ಬಂದುವು ; ಈ ದೇಶದ ಸಂಸ್ಕೃತಿ ಬಹುಮುಖವಾಗಿರುವುದು ಹೀಗೆ. ನಮ್ಮ ಆಹಾರ, ಉಡುಗೆ–ತೊಡುಗೆ, ಆಚಾರ, ವಿಚಾರ, ಪದ್ಧತಿ, ವ್ಯವಹಾರ, ಸಾಧನೆ, ಸಿದ್ಧಿಗಳಲ್ಲಿ ವೈವಿಧ್ಯವಿರುವುದನ್ನು ಕಾಣಬಹುದು. ಯಾವುದೂ ಒಮ್ಮುಖವಾಗಿಲ್ಲ, ಒಂದೇ ನಿರ್ದಿಷ್ಟವಾದ ಸಂಕುಚಿತವಾದ ಚೌಕಟ್ಟೆಂಬುದಿಲ್ಲ, ಎಲ್ಲೆಲ್ಲಿ ಸಲ್ಲುವುದೂ ಇಲ್ಲಿ ಸಲ್ಲುತ್ತದೆ. ಭೌತಿಕವಾಗಿಯೂ ಸಾಂಸ್ಕೃತಿಕವಾಗಿಯೂ ಹಲವಾರು ಎಳೆಗಳನ್ನು ಹೊಸೆದು ಸಿದ್ಧಪಡಿಸಿದ ಬಲವಾದ ಹಗ್ಗ ಈ ದೇಶದ ಬದುಕು. ಜನಜೀವನದಲ್ಲಿ ಈ ಸಮಷ್ಟಿಯ ಸಂಘಟನೆಯ ಗುಣವಿದೆ.

ನಮ್ಮ ಧರ್ಮವನ್ನು ನೋಡಿ ಹೊರದೇಶದಿಂದ ಹೊಸದಾಗಿ ಬಂದವರು ಬೆರಗಾಗುವುದು ಸಹಜ. ಎಷ್ಟೊಂದು ದೇವತೆಗಳು, ಎಷ್ಟು ಬಗೆಯ ರೂಪಗಳು, ಎಷ್ಟು ವಿಭಿನ್ನವಾದ ಆರಾಧನೆಯ ಪದ್ಧತಿಗಳು, ಎಷ್ಟು ಬಗೆಯಾದ ಭಾವನೆಗಳು, ಎಂಥೆಂಥ ಕಲ್ಪನೆಗಳು, ಎಷ್ಟು ಸೋಜಿಗವೆನಿಸುವ ಮಂದಿರಗಳು! ಇವೆಲ್ಲ ಅವರಿಗೆ ಅರ್ಥವಾಗುವುದು ಕಷ್ಟ. ಇಷ್ಟೊಂದು ವೈವಿಧ್ಯ ಇದ್ದೀತೆಂದು ಅವರು ಬಗೆದಿರಲು ಕಾರಣವಿಲ್ಲ; ಬೇರೆ ಯಾವ ದೇಶದಲ್ಲಿಯೂ ಹೀಗಿಲ್ಲವಲ್ಲ?

ಇಲ್ಲಿಗೆ ಬಂದು ನಮ್ಮ ಧಾರ್ಮಿಕವ್ಯವಹಾರವನ್ನು ನೋಡಿದರೆ ಅವರಿಗೆ ಗೊಂದಲವೆನಿಸುತ್ತದೆ ; ಕಲಸುಮೇಲೋಗರದಲ್ಲಿ ಸೇರುವ ರಸಗಳ ಬಿರುಸು ಅವರ ಬುದ್ಧಿಯನ್ನು ಮಂಕುಮಾಡುತ್ತದೆ. ಇಷ್ಟೊಂದು ವಿರೋಧಗಳ ನಡುವೆ ಈ ಜನ ಬದುಕಿರುವುದಾದರೂ ಹೇಗೆ ಎಂದು ಅವರಿಗೆ ಬಿಡಿಸಲಾಗದ ಒಗಟು!

ಆದರೆ ನಮ್ಮ ಜನರಿಗೆ ಇವೆಲ್ಲ ವಿರೋಧವೆಂಬ ಅರಿವೇ ಇಲ್ಲವೆಂದರೆ ಅವರು ಬೆದರಿ ಬೆಚ್ಚಿಬೀಳುತ್ತಾರೆ! ನಮ್ಮಲ್ಲಿ ಯಾರಿಗೂ ದೇವತೆಗಳ, ಅವರ ರೂಪಗಳ, ಆರಾಧನೆಯ ಪ್ರಕಾರಗಳ, ಕಲ್ಪನೆಗಳ ಬಗ್ಗೆ ಗೊಂದಲವಿರುವುದಿಲ್ಲ. ಹಲವು ಎಳೆಗಳಿಲ್ಲದೆ ಬಟ್ಟೆಯಾಗುವುದೇ ? ಹಲವು ಭಾವನೆಗಳಿಲ್ಲದೆ ದೇಶದ ಧರ್ಮ ಇರುವುದು ಹೇಗೆ ? 'ಅವರವರ ಭಾವನೆಗೆ, ಭಕ್ತಿಗೆ ಅನುಗುಣವಾಗಿ ಧರ್ಮದ ಬಗೆ'ಯೆನ್ನುವ ಅರಿವು ನಮ್ಮಲ್ಲಿ ಎಲ್ಲರಿಗೂ ಇರುತ್ತದೆ. ದೇವರು ಹೀಗೆಯೇ ಇರಬೇಕು, ಪೂಜೆ ಹೀಗೆಯೇ ನಡೆಯಬೇಕು, ಇಂಥ ಕಟ್ಟಡವೇ ಗುಡಿ ಎಂಬ ಹಟವಿಲ್ಲ ನಮಗೆ. ಹೇಗಾದರೂ ನಡೆದೀತು ಎನ್ನುವ ಸಮಾಧಾನ ಜನಜೀವನದ ನೈರಂತರ್ಯದ ಗುಟ್ಟು.

ಮತ್ತೊಂದು ವಿವರವೆಂದರೆ ನಮ್ಮ ದೇಶದ ಜಾಯಮಾನ ಪ್ರಮುಖ ವಾಗಿ ಗ್ರಾಮೀಣವಾದುದು ಎನ್ನುವುದು. ನಮ್ಮ ನಾಡಿನಲ್ಲಿ ಹಳ್ಳಿಗಳೇ ಹೆಚ್ಚು; ಸಾವಿರಾರು ವರ್ಷಗಳಿಂದ ನಮ್ಮ ಸಂಸ್ಕೃತಿ ಬೆಳೆದುಬಂದಿರುವುದು ಹಳ್ಳಿಗಳ ಪರಿಸರದಲ್ಲಿಯೇ. ಜನಜೀವನದ ಚೌಕಟ್ಟು ಹಳ್ಳಿಯದೇ. ನಗರಗಳೇನೋ ತುಂಬ ಹಿಂದಿನಿಂದ ಇವೆ, ಆದರೆ ಅವುಗಳ ಸಂಖ್ಯೆಯೂ ಸಣ್ಣದು, ಪ್ರಭಾವವೂ ಕಡಮೆಯೇ. ಈಚೆಗೆ ಪಟ್ಟಣಗಳ ಸಂಖ್ಯೆ ಹೆಚ್ಚುತ್ತಿದೆ ; ಹಳ್ಳಿಗಳಿಂದ ಜನರು ಪಟ್ಟಣಗಳಿಗೆ ಬಂದು ಸೇರುತ್ತಿರುವುದೂ ಹೆಚ್ಚಿದೆ. ಹಳ್ಳಿಗಳಲ್ಲಿಯೂ ಮೊದ ಲಿನ ಬದುಕು ಮರೆಯಾಗಿ, ಸಭ್ಯತೆಯ ಗೊಂದಲ ಕಾಣಬರುತ್ತಿದೆಯೆನ್ನಿ. ಹಳ್ಳಿಗಳ ಮೇಲೆ ಪಟ್ಟಣದ ಗಾಳಿ ಬೀಸುತ್ತಿರುವುದು ದಿಟವಾದರೂ ಪಟ್ಟಣ ಗಳು ಬಹುಮಟ್ಟಿಗೆ ಬೆಳೆದ ಹಳ್ಳಿಗಳಂತೆಯೇ ಇರುವುದನ್ನು ಗಮನಿಸಬಹುದು.

ಹಳ್ಳಿಗಳ ಬದುಕಿನಲ್ಲಿ ವ್ಯಕ್ತಿ-ವ್ಯಕ್ತಿಗಳ ನಡುವೆ ನೇರವಾದ ನೆಂಟು ಇರು ವುದು ಸಹಜವೇ. ಹಳ್ಳಿಯೆಂದರೆ ಹರಡಿಕೊಂಡ ಕುಟುಂಬದಂತೆ ಎನ್ನುವುದೂ ಸರಿಯೇ. ಈ ತೆರನಾದ ಮನೋಧರ್ಮವು ಧಾರ್ಮಿಕವ್ಯವಹಾರದಲ್ಲಿಯೂ ಒದಗಿಬರುತ್ತದೆ. ಹಳ್ಳಿಯ ಗುಡಿಗಳಲ್ಲಿಯೂ ಅಲ್ಲಿನ ಪೂಜಾವಿಧಾನಗಳಲ್ಲಿಯೂ ಗ್ರಾಮೀಣವೆನ್ನಬಹುದಾದ ಸರಳತೆ, ವೈಯಕ್ತಿಕತೆ, ಆತ್ಮೀಯತೆಗಳನ್ನು ಗುರುತಿಸಬಹುದು. ಆದರೆ ನಗರದಲ್ಲಿರುವ ದೊಡ್ಡ ದೇವಾಲಯದ ಕಳೆಯೇ

ಬೇರೆ. ಅದರಲ್ಲಿ ಎದ್ದು ಕಾಣುವ ಮನೋಧರ್ಮ ನಗರಜೀವನದ್ದು, ಸಭ್ಯತೆಯದು. ಅದರಲ್ಲಿ ಕಲೆ, ಕೈಕೆಲಸ, ಕಟ್ಟಡ, ಸಾಮಾಜಿಕ ವ್ಯವಸ್ಥೆ, ರಾಜಕೀಯ ಪ್ರಭಾವ ಇವೆಲ್ಲವೂ ಮೂಡಿಕೊಂಡು ಧಾರ್ಮಿಕಪ್ರಕ್ರಿಯೆ ಹಿಂದೆ ಉಳಿಯುತ್ತದೆ. ನಗರಜೀವನದ ಅಗತ್ಯಗಳನ್ನೂ ಆತಂಕಗಳನ್ನೂ ಓರೆಕೋರೆಗಳನ್ನೂ ಅಳವಡಿಸಿಕೊಂಡು ಸಿದ್ಧವಾದುವು ಈ ದೊಡ್ಡ ದೊಡ್ಡ ಗುಡಿಗಳು. ಅವುಗಳಲ್ಲಿ ಪ್ರಾದೇಶಿಕವಿವರಗಳೂ ಸಂದರ್ಭದ ಒತ್ತಡಗಳೂ ವಿಧಿಯಿಲ್ಲದೆ ಸೇರಿಕೊಳ್ಳುತ್ತವೆ.

ಹೀಗಾಗಿ ದೊಡ್ಡ ದೇವಾಲಯವೆಂದರೆ ಯಾವುದಾದರೊಂದು ಕಾಲವನ್ನು, ಸಂದರ್ಭವನ್ನು, ಪ್ರದೇಶದ ಮನೋಧರ್ಮವನ್ನು ಪ್ರತಿಬಿಂಬಿಸುತ್ತದೆ. ಕಾಲ ಬದಲಾದರೆ, ಸಂದರ್ಭ ಬೇರೆಯಾದರೆ ಪ್ರದೇಶದ ಮನೋಧರ್ಮ ಮರೆಯಾದರೆ ಈ ದೇವಾಲಯದ ಅಗತ್ಯವೂ ಬದಲಾಗುವುದು ಅನಿವಾರ್ಯವಲ್ಲವೆ? ಬರುಬರುತ್ತ ಅದರ ಜನಪ್ರೀತಿಯೂ ಇಂಗಿಹೋಗುವುದು ಸಹಜವೇ. ನಗರದ ದೊಡ್ಡ ಗುಡಿಗಳು ಹಲವು ಪಾಳುಬಿದ್ದಿರುವುದು ಹೀಗೆ. ಹಳ್ಳಿಯ ಸಣ್ಣ ಗುಡಿಗೆ ಈ ಬಗೆಯ ಆತಂಕವಿರದು. ಅದರ ಜನಪ್ರೀತಿ ನಿರಂತರವಾದುದು ; ಯುಗಧರ್ಮವನ್ನಾಗಲೀ ಸಂದರ್ಭಶುದ್ಧಿಯನ್ನಾಗಲೀ ಪ್ರಾದೇಶಿಕ ಪ್ರಭಾವವನ್ನಾಗಲೀ ಅದು ಅವಲಂಬಿಸುವುದಿಲ್ಲ. ಮೂಲಭೂತವಾದ ಮಾನವಸ್ವಭಾವವನ್ನಷ್ಟೇ ಅವಲಂಬಿಸುತ್ತದೆ ಅದು.

ಜಾನಪದ ಪ್ರವೃತ್ತಿಗಳು ಬಹುಕಾಲ ಉಳಿಯುವಂಥವು; ನಾಗರಸಂಸ್ಕೃತಿಯಂತೆ ಮತ್ತೆ ಮತ್ತೆ ಮಾರ್ಪಡುವಂಥವಲ್ಲ. ಈ ನೆಲೆಯಲ್ಲಿ ನಿಂತ ಗುಡಿಗೆ ಬಹುಕಾಲದ ಜನಪ್ರೀತಿ ಇರುವುದು ಸರಿಯೇ. ಕಾಲವನ್ನು ಮೆಟ್ಟಿನಿಂತಂತೆಯೇ, ಪ್ರಾದೇಶಿಕಚೌಕಟ್ಟನ್ನೂ ಮೀರಿ ಅದು ನಿಲ್ಲುತ್ತದೆ. ಜಾನಪದ ಸ್ವಭಾವವು ಮಾನವಜೀವನದ ಹರವಿನಲ್ಲಿ ಒಳಪದರವಾಗಿ ಸೇರಿದೆ. ದೇಶ, ಭಾಷೆ, ಕಾಲ, ಸಂದರ್ಭಗಳ ವೈವಿಧ್ಯವನ್ನು ಮೀರಿ ನಿಲ್ಲುತ್ತದೆ ಅದು. ಆದುದರಿಂದಲೇ ಜಗತ್ತಿನ ಬೇರೆ ಬೇರೆ ದೇಶಗಳ ಜಾನಪದ ಸಾಹಿತ್ಯ, ಸಂಸ್ಕೃತಿ, ಧರ್ಮಗಳಲ್ಲಿ ಏಕತಾನತೆಯನ್ನು ಕಾಣುತ್ತೇವೆ, ಆಕಸ್ಮಿಕವೆನ್ನಲಾಗದ ಸಾದೃಶ್ಯವನ್ನು ಕಂಡುಕೊಳ್ಳುತ್ತೇವೆ. ಬಹುಕಾಲದ ಉಳಿವಿಗೆ ಇದೂ ಒಂದು ಕಾರಣ.

ಯಾವ ಗುಡಿಯೂ, ಸಣ್ಣದಾಗಲೀ ದೊಡ್ಡದಾಗಲೀ ಹಳ್ಳಿಯದಾಗಲೀ ಪಟ್ಟಣದ್ದಾಗಲೀ ಅದರ ಸುತ್ತಮುತ್ತ ಬದುಕಿ ಬಾಳುವ ಜನರಿಗೆ ನೇರವಾಗಿ ಸಂಬಂಧಿಸುವುದು. ದೂರದ ಗುಡಿಯ ಹೆಸರನ್ನೋ ಹಿರಿಮೆಯನ್ನೋ ಕೇಳಿ



ದಕ್ಷಿಣಕನ್ನಡ ಜಿಲ್ಲೆಯ ಧರ್ಮಸ್ಥಳದಲ್ಲಿ ಗುಡ್ಡದ ಮೇಲೆ ಭೂತಾಲಯ

ಕೊಂಡು ಯಾವಾಗಲಾದರೊಮ್ಮೆ ಅಲ್ಲಿಗೆ ಹೋಗಿಬರುವುದು ಬಳಕೆಯಲ್ಲಿದ್ದರೂ ದಿನದಿನದ ಅಗತ್ಯಗಳಿಗೆ ಬರುವುದು ಮನೆಯ ನೆರೆಯಲ್ಲಿರುವ ಗುಡಿಯೇ. ಗುಡಿಯ ಅಗತ್ಯವಿರುವುದು, ಆಕರ್ಷಣೆಯಿರುವುದು ಹೆಚ್ಚಾಗಿ ಅದರ ಪರಿಸರ ದಲ್ಲಿರುವ ಜನರಿಗೇ ಅಲ್ಲವೇ ? ಗುಡಿಯ ನೆರೆಯಲ್ಲಿ ಜನವಸತಿ ಇಲ್ಲವಾದಾಗ ಗುಡಿಯ ಜನಪ್ರೀತಿ ಎಲ್ಲಿ ಬಂದೀತು ? ದೇಶದಲ್ಲಿ ಅಡ್ಡಾಡುವಾಗ ದೊಡ್ಡ ದೊಡ್ಡ ದೇವಾಲಯಗಳು ನಿರ್ಜನ ಪ್ರದೇಶಗಳಲ್ಲಿರುವುದನ್ನು ಕಾಣಬಹುದು. ದೇವಾಲಯಗಳನ್ನು ಕಟ್ಟುವ ಕಾಲಕ್ಕೆ ಇದ್ದ ಜನವಸತಿ ಕಾರಣಾಂತರಗಳಿಂದ ಉಳಿದುಬರಲಿಲ್ಲ, ಜನರು ಊರನ್ನೇ ಬದಲಾಯಿಸುವಾಗ ಗುಡಿಯನ್ನು ತಮ್ಮೊಂದಿಗೆ ಒಯ್ಯುವುದು ಹೇಗೆ ? ಆದರಿಸುವ ಜನ ದೂರವಾದಮೇಲೆ ಗುಡಿ ಪಾಳುಬೀಳದೆ ಏನಾಗುತ್ತದೆ ?

ಈ ಭೀತಿಯೂ ಹಳ್ಳಿಯ ಸಣ್ಣ ಗುಡಿಗಿಲ್ಲ. ಅದರ ನೆರೆಯಲ್ಲಿ ಜನ ವಸತಿ ಯಾವ ಕಾಲಕ್ಕೂ ಪೂರಾ ಮರೆಯಾಗುವ ಸಂಭವವಿಲ್ಲ. ಸಣ್ಣ ಹಳ್ಳಿಯ ಗುಡಿಯ ಸುತ್ತಮುತ್ತ ಸಣ್ಣದೊಂದು ಜನವಸತಿ ಇದ್ದರೆ ಸಾಕು. ನಗರದ ದೊಡ್ಡ ಗುಡಿಗಾದರೆ ದೊಡ್ಡ ವಸತಿಯೇ ಬೇಕಾದೀತು, ದೊಡ್ಡ ಗುಡಿಯ ನಿರ್ವಹಣೆಗೆ ಒಂದು ಜಟಿಲವಾದ ವ್ಯವಸ್ಥೆಯೇ ಬೇಕು, ಧನಸಂಪತ್ತಿ ಬೇಕು, ಶ್ರದ್ಧಾಳುಗಳ ಕಾಯಕ ಬೇಕು, ಭಕ್ತರ ಆದರ ಬೇಕು. ಜಾನಪದ ಗುಡಿಗೆ ಇಷ್ಟೆಲ್ಲ ಸಂಭ್ರಮ, ಸಡಗರ, ಪರಿಷೆ ಬೇಕಾಗಿಲ್ಲ.

ನಮ್ಮ ಧರ್ಮ ಬೆಳೆದುಬಂದ ದಾರಿಯಲ್ಲಿ ಹಲವು ಹಂತಗಳಲ್ಲಿ ಸಭ್ಯತೆಯು ತನ್ನ ಪ್ರಭಾವವನ್ನು ಬೀರಿದೆ. ಆದರೆ ಸಭ್ಯತೆಯ ತೆಳುಪದರದ ಅಡಿಯಲ್ಲಿ ಪ್ರಾಚೀನವಾದ ಜಾನಪದ ಮನೋಧರ್ಮವೂ ಪ್ರವೃತ್ತಿಗಳೂ ಅಡಗಿರುತ್ತವೆ. ಸಭ್ಯತೆಯ ವಿವರಗಳನ್ನಳವಡಿಸಿಕೊಂಡ ಧಾರ್ಮಿಕ ಕಲ್ಪಗಳನ್ನು ರಚನೆಗಳನ್ನು ಒಡೆದು ನೋಡಿದರೆ ಜಾನಪದವೆನ್ನಬಹುದಾದ ಬಯಕೆಗಳೂ ಭಾವನೆಗಳೂ ಕಂಡುಬಂದಾವು. ಈ ತಿರುಳಿಲ್ಲದಿದ್ದರೆ ಸಭ್ಯತೆಯ ವಿವರಗಳು ಉಳಿಯಲಾರವು. ಅತ್ಯಾಧುನಿಕನಾದ ಮನುಷ್ಯ ಉಳಿಯಬುವುದೂ ಅತಿಪ್ರಾಚೀನವಾದ ದೈಹಿಕ ಪ್ರವೃತ್ತಿಗಳು ಪೂರೈಸಿದಾಗಲೇ ಅಲ್ಲವೆ ? ಅವನ ಸಮಸ್ಯೆಗಳಿಗೆ ಪರಿಹಾರ ಬಹುಮಟ್ಟಿಗೆ ಪ್ರಾಚೀನವಾದುದೇ ಅಲ್ಲವೆ ?

ಪ್ರಾಚೀನ ಅಥವಾ ಪುರಾತನವೆಂದರೆ ಬಾಲಿಶ, ಬರ್ಬರ, ಅಸಭ್ಯವೆನ್ನ ಲಾಗದು ; ಕಾಲಮಾನದಿಂದ ಹಿಂದಣದ್ದಾದರೂ ಮೌಲ್ಯದಿಂದ ಹಿಂದುಳಿದಿರು ವುದಲ್ಲ. ಮುಂದೆ ಒದಗಿದ ಮಾರ್ಪಾಟುಗಳಿಗೂ ಬೆಳವಣಿಗೆಗಳಿಗೂ ಮೂಲ

ಸಾಮಗ್ರಿ ಎಂದಷ್ಟೇ ಅರ್ಥ. ಇದು ಸ್ವಾಭಾವಿಕವಾದ, ಆದಿಮವಾದ ಮತ್ತು ನೈಜವಾದ ಒಂದು ಸ್ಥಿತಿ. ಆದುದರಿಂದಲೇ ಅದು ಸರಳವಾಗಿರುವುದು ; ಕಾಲ ಕಾಲಕ್ಕೆ ತೋರಿಯುಡಗುವ ಸಭ್ಯತೆಯ ಹೊರಪದರಗಳಿಂದ ಮುಕ್ತವಾದುದು. ಮಾನವಸ್ವಭಾವದ ಮೂಲಭೂತ ಪ್ರವೃತ್ತಿಗಳನ್ನೂ ಸಹಜ ಮನೋವೃತ್ತಿಗಳನ್ನೂ ನೇರವಾಗಿ ಅವಲಂಬಿಸಿರುವುದೇ ಪ್ರಾಚೀನತೆಯ ಸ್ವಾರಸ್ಯ. ಸಮುದಾಯ ಜೀವನದ ಒತ್ತಡದಲ್ಲಿ, ಅಗತ್ಯಗಳಲ್ಲಿ ಹೊಸಹೊಸ ಪರಿಕರಗಳೂ ಸಂವಿಧಾನಗಳೂ ಉಪಾಯಗಳೂ ಹವಣಿಕೆಗಳೂ ಮೂಡಿಕೊಳ್ಳುತ್ತವೆ. ಇವು ಮೂಲಸಾಮಗ್ರಿಯನ್ನು ಅಷ್ಟಿಷ್ಟು ಮರೆಮಾಡಿ ನಿಲ್ಲುತ್ತವೆ. ಸಭ್ಯತೆಯ ಗಡಿಬಿಡಿಯಲ್ಲಿ ಸರಳತೆಗೆ ಬೆಲೆ ಕಡಮೆಯಾಗುತ್ತದೆ.

ಹೀಗಾಗಿ ಪ್ರಾಚೀನ, ಪುರಾತನ ಎನ್ನಬಹುದಾದನ್ನು ನಾವು ನಮ್ಮ ಸಭ್ಯತೆಯ ನೆಲೆಯಿಂದ ನೋಡಿದಾಗ 'ಮೂಢನಂಬಿಕೆಗಳು', 'ಹರಿತವಾದ ವಿಮರ್ಶೆಗೆ ಒಳಗಾಗದವು', 'ಬೆಳವಣಿಗೆಯ ಪ್ರಯೋಜನವನ್ನು ಕಾಣದವು' ಎನಿಸುತ್ತದೆ. ಆದರೆ ಪ್ರಾಚೀನನೆಲೆಯಿಂದ ನಮ್ಮ ಸಭ್ಯತೆಯನ್ನು ಅಳೆದು ನೋಡಿದಾಗ, 'ಕೃತ್ರಿಮ', 'ಕ್ಷುಲ್ಲಕ', 'ತಾತ್ಕಾಲಿಕ' ಎನಿಸುವುದು ಸಹಜವೇ. ಪ್ರಾಚೀನವಾದುದನ್ನು ಮೂಢ, ಮುಗ್ಧ ಎನ್ನದೆ ಆದಿಮ, ಸಹಜ, ಸರಳ ಎನ್ನುವುದು ಸರಿಯಾದೀತು. ಅದರಲ್ಲಿ ಕುಂದನ್ನಾಗಲೀ ದೋಷವನ್ನಾಗಲೀ ಲೋಪವನ್ನಾಗಲೀ ಎಣಿಸಬೇಕಾದುದಿಲ್ಲ. ಬೆಳವಣಿಗೆಗೆ ಮೊದಲ ಹಂತ, ವಿಮರ್ಶೆಗೆ ಹಿಂದಿನಸ್ಥಿತಿ ಇದು ; ಬೆಳವಣಿಗೆಗೆ ವಿರುದ್ಧವಾದುದಲ್ಲ, ವಿಮರ್ಶೆಯನ್ನು ಮೀರಿದುದಲ್ಲ. ಜಾನಪದ ನೆಲೆಯಲ್ಲಿ ಇದು ಮುಖ್ಯವಾದುದು. ಜಾನಪದ ಚೌಕಟ್ಟು ಸಂಕುಚಿತವಾದುದೇನೋ ಹೌದು ; ಆಯಾ ಪರಿಸರಕ್ಕೆ ಸೀಮಿತವಾದುದು. ಆದರೆ ಹರವಿನಲ್ಲಿ ಇಲ್ಲದುದು ಆಳದಲ್ಲಿ ಒದಗುತ್ತದೆ. ಜಾನಪದವೆಂಬಂಥ ಒಂದೊಂದು ಪ್ರಸಂಗದಲ್ಲಿಯೂ ಪರಿಸರದ ಎಲ್ಲರೂ ಪಾಲ್ಗೊಳ್ಳುವರು. ಪ್ರಾಚೀನವೆನ್ನುವ ಈ ಕಲ್ಪನೆ – ಕ್ರಿಯೆಗಳ ಬಲೆಯಲ್ಲಿ ಒಬ್ಬೊಬ್ಬ ವ್ಯಕ್ತಿಗೂ ಸ್ವತಂತ್ರವಾದ ಬೆಲೆಯಿದೆ, ವೈಯಕ್ತಿಕವಾದ ಘನತೆಯಿದೆ. ಅದೇ, ಮುಂದರಿದ ಸಭ್ಯತೆಯ ಕಲಾಪಗಳಲ್ಲಿ ವ್ಯಕ್ತಿಯ ವ್ಯಕ್ತಿತ್ವ ಮರೆಯಾಗಿ ಸಾಮುದಾಯಿಕ ನಿರ್ಬಂಧಗಳ ಪಾತ್ರ ಹಿರಿದಾಗುತ್ತದೆ.

ನಮ್ಮ ನಾಡಿನ ಹಲವಾರು ಗುಡಿಗಳಲ್ಲಿ ಜಾನಪದ ಹಿನ್ನೆಲೆಗೂ ಸಭ್ಯತೆಯ ನೆಲೆಗೂ ಬಿಡಿಸಲಾರದ ಗಂಟು ಕಾಣಸಿಗುತ್ತದೆ. ನಮ್ಮ ಧಾರ್ಮಿಕ ಜೀವನದಲ್ಲಿ ಪ್ರಾಚೀನವಾದುದೂ ಅರ್ವಾಚೀನವಾದುದೂ ಕಲೆತು ಬಂದಿವೆ ; ಶ್ರದ್ಧೆಯೂ

ವಿಮರ್ಶೆಯೂ ಬೆರೆತುಬಂದಿವೆ. ಹಳೆಯದನ್ನೂ ಹೊಸದನ್ನೂ ಯಾವ ವಿರೋಧಾಭಾಸವೂ ಇರದಂತೆ, ಗೊಂದಲವೇಳದಂತೆ ಅಳವಡಿಸಿಕೊಳ್ಳುವ ಕೌಶಲ ನಮಗುಂಟು. ಧರ್ಮದ ಒಳಗಿರುವವರಿಗೆ ಇದರ ಬಗ್ಗೆ ಯಾವ ಸಮಸ್ಯೆಯೂ ಏಳುವುದಿಲ್ಲ, ಇದು ಅನುಚಿತವೆಂದಾಗಲೀ ಸೋಜಿಗವೆಂದಾಗಲೀ ಅನಿಸುವುದಿಲ್ಲ. ಅರ್ವಾಚೀನವಾದುದು ಪ್ರಾಚೀನವಾದುದರಿಂದಲೇ ಒದಗುವುದಲ್ಲವೆ ? ಹೊಸದು ತೋರಿಕೊಳ್ಳುವುದು ಹಳೆಯದರ ಮೇಲೇ ಅಲ್ಲವೆ ? ಸಭ್ಯತೆ ನಿಲ್ಲುವುದು ಜಾನಪದದ ಆಧಾರದ ಮೇಲೇ. ತಾಯಿ–ಮಗು ಒಟ್ಟಿಗಿದ್ದರೆ ಆಶ್ಚರ್ಯವೇನು ? ಹೀಗೆಯೇ ನಮ್ಮ ಧರ್ಮದಲ್ಲಿ ಜಾನಪದವೂ ಸಭ್ಯತೆಯೂ ಜೊತೆಗೇ ಕಾಣಿಸಿಕೊಳ್ಳುತ್ತವೆ.

ಈಗ ಧರ್ಮವಿರುವುದು ಒಂದು ಸಂಸ್ಥೆಯಾಗಿ, ಒಂದು ವಿಧ್ಯುಕ್ತವಾದ ವಿಧಾನವಾಗಿ, ಒಂದು ಕಟ್ಟುಪಾಡಿನಿಂದ ಕೂಡಿಕೊಂಡು. ಎಂದರೆ ಸಭ್ಯತೆಯ ಪಾತ್ರ ಇದರಲ್ಲಿ ಹೆಚ್ಚು. ಜಗತ್ತಿನ ಪ್ರಮುಖಧರ್ಮಗಳೆಲ್ಲ ಇಂದಿರುವುದು ಹೀಗೆಯೇ. ಅವುಗಳ ಸಿದ್ಧಾಂತ, ಸಾಧನೆ, ಕಲ್ಪ, ಕಲ್ಪನೆಗಳೆಲ್ಲ ಬುದ್ಧಿಯ ಜಾಡನ್ನು ಹಿಡಿದವು, ಬೆಳವಣಿಗೆಯ ಪ್ರಯೋಜನವನ್ನು ಪಡೆದುಕೊಂಡವು. ಮಾನವನ ಬುದ್ಧಿಶಕ್ತಿಯೂ ವಿಚಾರಶಕ್ತಿಯೂ ವಿಮರ್ಶನಶಕ್ತಿಯೂ ಬೆಳೆದಂತೆ ಮಾರ್ಪಟ್ಟು ಮೈದಳೆದವು. ಆದರೆ ಅವೆಲ್ಲ ನಿಂತಿರುವುದು, ಬೇರೂರಿರುವುದು, ಬೆಳೆಯುತ್ತಿರುವುದು ಮನುಷ್ಯನ ಮೂಲಭೂತ ಪ್ರವೃತ್ತಿಗಳ ಮೇಲಲ್ಲವೆ ? ಹೀಗಾಗಿ ಯಾವ ಧರ್ಮಕ್ಕೂ ಜಾನಪದ ಆಸರೆ ಇಲ್ಲದೆ ಇರುವುದು ಸಾಧ್ಯವಿಲ್ಲ.

ಆದರೆ ಬೇರೆ ದೇಶಗಳಲ್ಲಿ ಧರ್ಮದ ಜಾನಪದ ಆಸರೆ ತೀರ ಹಿಂದೆ ಸರಿದು ನಿಂತಿದೆ, ಈಗ ಮೈದಳೆದಿರುವ ಧರ್ಮಕ್ಕೂ ಪ್ರಾಚೀನ ಕಲ್ಪನೆಗಳಿಗೂ ಸಂಬಂಧವೇ ಇಲ್ಲವೇನೋ ಎನ್ನುವಂತೆ ತೋರುತ್ತದೆ. ನಮ್ಮ ದೇಶದಲ್ಲಿ ಯಾದರೋ ಇವುಗಳ ನಡುವೆ ಅಂತರ ಅಷ್ಟಾಗಿ ಇರದು. ಜಾನಪದ ಪ್ರಭಾವವನ್ನು ಎಲ್ಲೆಲ್ಲಿಯೂ ಗುರುತಿಸಬಹುದು. ಸಭ್ಯತೆಯ ಮೇಲುಪ್ಪರಿಗೆ ಮೋಡವನ್ನು ಮುಟ್ಟಿದರೂ ಅದರ ಜಾನಪದ ಅಡಿಪಾಯ ನೆಲವನ್ನು ಮೆಟ್ಟಿ ನಿಂತಿರುವುದು ಸ್ಪಷ್ಟವಾಗಿ ಕಾಣುತ್ತದೆ.

ಸಭ್ಯತೆಯು ಭೇದವನ್ನೂ ವೈವಿಧ್ಯವನ್ನೂ ಒದಗಿಸುತ್ತದೆ. ಪ್ರಾದೇಶಿಕ ಭೇದಗಳೂ, ಕಾಲಮಾನದ ವೈವಿಧ್ಯಗಳೂ ಸಭ್ಯತೆಯ ಪ್ರಭಾವವನ್ನು ಪ್ರತಿಬಿಂಬಿಸುತ್ತವೆ. ಎಚ್ಚರವಾಗಿ ನಾವು ಮಾಡುವ ಸಿದ್ಧತೆಗಳು, ಸನ್ನಾಹಗಳು, ಸಾಮಗ್ರಿಗಳು, ಬೇಕೆಂದೇ ಅರಿತುಕೊಳ್ಳುವ ಬಗೆಗಳು, ಸಮಾಧಾನವನ್ನು

ತಂದುಕೊಳ್ಳುವ ರೀತಿಗಳು ಇವೆಲ್ಲ ಸಭ್ಯತೆಯ ಪ್ರಭಾವವನ್ನು ತಳೆದಿರುತ್ತವೆ. ಧರ್ಮದ ಕಟ್ಟುಪಾಡಿನಲ್ಲೂ ಕಲ್ಪನೆಗಳಲ್ಲೂ ಗೊಂದಲ ಮೂಡಿಬಂದಾಗ ನಾವು ಏನನ್ನು ಬಿಡುತ್ತೇವೆ, ಏನನ್ನು ಒಳಮಾಡಿಕೊಳ್ಳುತ್ತೇವೆ, ಯಾವ ಮಾರ್ಪಾಡು ಗಳನ್ನು ಹೇಗೆ ಎಷ್ಟು ಮಾಡಿಕೊಳ್ಳುತ್ತೇವೆ ಎನ್ನುವುದು ಗೊಂದಲವನ್ನು ಸಂದರ್ಭೋಚಿತವಾಗಿ ಸಮಯಾನುಸಾರ ಪರಿಹರಿಸಲು ನೆರವಾಗುತ್ತದೆ. ಧರ್ಮದ ಹರವಿನಲ್ಲಿ ಒಂದೊಂದು ವಿವರವನ್ನೂ ಬೇರ್ಪಡಿಸಿ, ಈ ವಿವರ ಗಳನ್ನು ಮೈದುಂಬಿಸಿ ಅನಂತರ ಇವನ್ನೆಲ್ಲ ಒಂದು ಚೌಕಟ್ಟಿನಲ್ಲಿ ಸಮನ್ವಯ ಮಾಡಲು ಸಭ್ಯತೆ ಯತ್ನಿಸುತ್ತದೆ.

ಆದರೆ ಪೂರ್ವನಿರ್ದಿಷ್ಟವಾದ ವ್ಯವಸ್ಥೆಯೊಂದು ತನ್ನನ್ನು ಪೂರೈಸಿ ಕೊಳ್ಳಲು ಇಲ್ಲಿ ಯತ್ನಿಸುತ್ತದೆ. ಪ್ರತಿಯೊಬ್ಬ ವ್ಯಕ್ತಿಗೆ ತನ್ನದೇ ಆದ ಬಯಕೆ ಗಳಿರುತ್ತವೆ, ಅಗತ್ಯಗಳಿರುತ್ತವೆ. ಇವುಗಳ ಅರಿವು ಅವನಿಗಿರುತ್ತದೆ. ಪರಿಸರ ಅಥವಾ ನೆರೆಹೊರಿಕೆಯಲ್ಲಿ ವ್ಯಕ್ತಿಗಳೆಲ್ಲರ ಸಮಷ್ಟಿಯೊಂದು ಸಡಿಲವಾಗಿ ಮೈದುಂಬಿಬರುತ್ತದೆ ; ಇದರ ಅರಿವು ಎಲ್ಲರಲ್ಲಿಯೂ ಇರುತ್ತದೆ. ಇದು ಸಭ್ಯತೆಯ ಜಾಲದಲ್ಲಿ ಮುಖ್ಯವಾದ ವಿಚಾರ. ಆದರೆ ಜಾನಪದ ನೆಲೆಯಲ್ಲಿ ಅರಿವಿಗೆ ಬಾರದೆ ಸಾಗುವ ಪ್ರಸಂಗಗಳು ಮುಖ್ಯವಾಗುತ್ತವೆ. ಅಲ್ಲಿ ಮನುಷ್ಯನ ನಂಬಿಕೆಗಳನ್ನೂ ಕೆಲಸಗಳನ್ನೂ ನಡೆಸುವುದು ಅವನ ಅರಿವಿನ ಹರವಿಗೆ ಬರದೆ ಜಾರಿಕೊಂಡಿರುವ ಬಯಕೆಗಳ ಜಾಲ. ಸಭ್ಯತೆಯು ಕಾಣಿಸುವ ಭೇದಗಳನ್ನೂ ವೈವಿಧ್ಯವನ್ನೂ ಮೀರಿ ಈ ಜಾಲವು ಮನುಷ್ಯನ ಬದುಕಿನ ಆಳವನ್ನು ಮುಟ್ಟು ತ್ತದೆ. ಎಲ್ಲೆಡೆಯೂ ಎಲ್ಲ ಕಾಲಗಳಲ್ಲಿಯೂ ಒಂದೇ ಬಗೆಯಾಗಿರುವ ಮನುಷ್ಯ ಸ್ವಭಾವದೊಂದಿಗೆ ಇದರ ಸಂಪರ್ಕ ಇರುತ್ತದೆ. ಜಾನಪದ ಸಂಸ್ಕೃತಿಯು ಎಲ್ಲ ಸಂಸ್ಕೃತಿಗಳಿಗೂ ಸಮಾನವಾದುದು. ಸಭ್ಯತೆಯಾದರೋ ಸಂಸ್ಕೃತಿಗಳ ನಡುವೆ ಅಡ್ಡಗೋಡೆಗಳನ್ನೆಬ್ಬಿಸುತ್ತದೆ.

ಭಾರತದೇಶದ ಗುಡಿಗಳಿಗೆ ಪ್ರಾದೇಶಿಕ ಪ್ರಕಾರಗಳುಂಟು. ಆಯಾ ಪ್ರದೇಶದ ಜನರ ಅಗತ್ಯಗಳನ್ನನುಸರಿಸಿ ಆಯಾ ಕಾಲದ ವಿಶೇಷಗುಣಧರ್ಮ ಗಳನ್ನವಲಂಬಿಸಿ ಗುಡಿಗಳ ಸ್ವರೂಪವೂ ಸ್ವಭಾವವೂ, ರಚನೆಯೂ ಪ್ರಯೋ ಜನವೂ ಮಾರ್ಪಡುತ್ತವೆ. ಈ ದೇಶದ ದೂರದೂರದ ಬೇರೆ ಬೇರೆ ಪ್ರದೇಶ ಗಳಲ್ಲಿ ಕಾಣಸಿಗುವ ದೊಡ್ಡದೊಡ್ಡ ಗುಡಿಗಳಲ್ಲಿ ಬಹುಮಟ್ಟಿಗೆ ವೈವಿಧ್ಯ ಇರು ವುದು ಸರಿಯೇ. ತಮಿಳುನಾಡಿನಲ್ಲಿ ತಂಜಾವೂರಿನ ಬೃಹದೀಶ್ವರ ದೇವಾ ಲಯವೂ ಒಡಿಸ್ಸಾ ರಾಜ್ಯದಲ್ಲಿ ಭುವನೇಶ್ವರ ದೇವಾಲಯವೂ ಹೊರ ಆಕಾರ

ದಲ್ಲಿ ಮಾತ್ರ ಬೇರೆ ಬೇರೆಯಲ್ಲ ; ಅವುಗಳ ರಚನೆಯೂ ಬೇರೆ ಬೇರೆ, ಅವು ಅಳವಡಿಸಿಕೊಂಡಿರುವ ಆಚಾರಗಳೂ ಬೇರೆ ಬೇರೆ, ಪೂಜೆಯ ಪದ್ಧತಿಗಳೂ ಬೇರೆ ಬೇರೆ. ಒಂದೊಂದು ರಾಜ್ಯದಲ್ಲಿ ಒಂದೊಂದು ಬಗೆಯ ಗುಡಿಗಳು.

ಆದರೆ ಇಷ್ಟೊಂದು ಸ್ಪಷ್ಟವಾದ ವೈವಿಧ್ಯದ ಅಡಿಯಲ್ಲಿ ಒಂದು ನೆಲೆ ಅಸ್ಪಷ್ಟವಾದರೂ ದಿಟವಾಗಿರುವುದು ಜಾನಪದ ಕಲ್ಪನೆಗಳು, ಪದ್ಧತಿಗಳು. ಈ ವಿವರವನ್ನು ಮರೆತರೆ ನಮ್ಮ ದೇಶದ ಗುಡಿಗಳು ತುಂಡುಗಳನ್ನು ತೇಪೆ ಹಾಕಿ ಹೊಲಿದ ಬಟ್ಟೆಯಂತೆ; ಎಲ್ಲ ಗುಡಿಗಳಿಗೆ ಒಂದು ಚೌಕಟ್ಟಾಗಲೀ ಸಮಾನವಾದ ಸ್ವಾರಸ್ಯವಾಗಲೀ ಇರಲಾರದು. ಪ್ರತಿರಾಜ್ಯದ ಜನರಿಗೆ ತಂತಮ್ಮ ರಾಜ್ಯ ದಲ್ಲಿರುವ ಗುಡಿಗಳು ಪ್ರಿಯವಾಗಿವೆ, ಪ್ರಯೋಜನಕಾರಿಯಾಗಿವೆ, ಅರ್ಥ ವತ್ತಾಗಿವೆ ; ಇಷ್ಟೇ ಅಲ್ಲ, ಯಾವ ರಾಜ್ಯದ ಜನರಾಗಲೀ ಬೇರೆ ಎಲ್ಲ ರಾಜ್ಯ ಗಳ ಗುಡಿಗಳನ್ನು ಇದೇ ದೃಷ್ಟಿಯಿಂದ, ಶ್ರದ್ಧೆಯಿಂದ ಅರಿತುಕೊಳ್ಳಬಲ್ಲರು. ಇದು ಸಾಧ್ಯವಾಗಿರುವುದು, ಎಲ್ಲ ಗುಡಿಗಳ ಅಡಿಪಾಯ ಸಮಾನವಾದ ಜಾನಪದ ಚೌಕಟ್ಟು ಎನ್ನುವುದರಿಂದ.

ನಮ್ಮ ಗುಡಿಗಳ ಈ ಜಾನಪದನೆಲೆಯಿಂದಲೇ ಗುಡಿಗಳಿಗೆ ಜನಪ್ರೀತಿ, ಹಿರಿಮೆ, ಪ್ರಯೋಜಕತೆ ಒದಗಿ ಬಂದಿರುವುದು. ಈ ಜಾನಪದನೆಲೆಯಿಂದ ದೂರ ಸರಿದಂತೆಲ್ಲ ಗುಡಿಯ ಸಾರ್ಥಕತೆಯೂ ಕಡಮೆಯಾಗುತ್ತ ಬರುತ್ತದೆ. ಸಭ್ಯತೆಯನ್ನು ಹೆಚ್ಚು ಹೆಚ್ಚು ಅವಲಂಬಿಸಿದಂತೆಲ್ಲ ಗುಡಿಯ ಪ್ರಯೋಜನವೂ ಇಳಿಮುಖವಾಗುತ್ತ ಬಂದು, ಕಡೆಗೆ ಪಾಳುಬೀಳುವ ಸಂಭವ ಹೆಚ್ಚುತ್ತದೆ. ನಮ್ಮ ದೇಶದಲ್ಲಿ ಪಾಳುಬಿದ್ದಿರುವ ದೊಡ್ಡದೊಡ್ಡ ಗುಡಿಗಳಿಗೇನು ಕೊರತೆ ಯಿಲ್ಲ. ಪಾಳು ಬಿದ್ದಾಗಲೂ ಭವ್ಯತೆಯನ್ನು ಗುರುತಿಸಬಹುದು. ಆದರೆ ಭವ್ಯತೆಯಿದ್ದ ಮಾತ್ರಕ್ಕೆ ಅದರಲ್ಲಿ ಜೀವ ಇದೆಯೆನ್ನಲಾಗದು, ಸಾರ್ಥಕತೆ ಯಿದೆಯೆನ್ನಲಾಗದು. ನಮ್ಮ ಜನರು ಮೆಚ್ಚಿಕೊಳ್ಳುವುದು ಇಂಥ 'ಅದ್ಭುತ-ಮೃತ-ಸ್ಮಾರಕ'ಗಳನ್ನಲ್ಲ ; ಜನರ ಅಂತರಾಳದೊಂದಿಗೆ ನೆಂಟನ್ನು ಉಳಿಸಿ ಕೊಂಡಿರುವ ಗುಡಿಗಳನ್ನು. ಪುರಿಯ ಜಗನ್ನಾಥ-ಮಂದಿರ, ಆಂಧ್ರದಲ್ಲಿ ತಿರುಮಲೆ-ತಿರುಪತಿ ದೇವಾಲಯ, ಅಸಾಮದ ಕಾಮಾಖ್ಯ ದೇವಾಲಯ, ಮಧುರೆಯ ಮೀನಾಕ್ಷೀ ಗುಡಿ, ಕಲ್ಕತ್ತೆಯ ಕಾಲೀ-ದೇಗುಲ, ಕಾಶ್ಮೀರದ ವೈಷ್ಣವಿದೇವಿ-ಸನ್ನಿಧಿ ಇವೆಲ್ಲ ಈ ಮಾತಿಗೆ ನಿದರ್ಶನಗಳು. ಈ ಕೆಲವು ಗುಡಿ ಗಳ ಆಚಾರ, ಪದ್ಧತಿ ಮತ್ತು ಆರಾಧನೆಯ ವಿವರಗಳನ್ನು, ಬಳಕೆಯಲ್ಲಿರುವ ಕಥೆಗಳನ್ನು ಗಮನಿಸಿದರೆ ಜಾನಪದ ನೆಲೆಯ ಹಿಡಿತ ಸ್ಪಷ್ಟವಾಗುತ್ತದೆ. ಮೂಲ

ಭೂತವಾದ ಪ್ರವೃತ್ತಿಗಳನ್ನು ಮುಟ್ಟುವ ವಿವರಗಳು ಇಲ್ಲಿರುವುದರಿಂದಲೇ ಈ ಗುಡಿಗಳ ವಿಚಾರವಾಗಿ ಜನಪ್ರೀತಿ ಅಷ್ಟಿರುವುದು. ಇವುಗಳಲ್ಲೆಲ್ಲ ಸಮಾನವಾದ ಮನೋಧರ್ಮವನ್ನು ಅರಿತುಕೊಳ್ಳಬಹುದು.

ನಮ್ಮ ದೇಶದಲ್ಲಿ ಪ್ರವಾಸಿಗಳನ್ನು ಸೆಳೆಯುವ, ಆದರೆ ಪಾಳುಬಿದ್ದಿರುವ ಗುಡಿಗಳ ಮಾತು ಬಿಡಿ. ಉಳಿದಂತೆ,ಬಳಕೆಯಲ್ಲಿರುವ, ದಿನವೂ ಪೂಜೆಗೊಳ್ಳುವ ದೊಡ್ಡ ದೊಡ್ಡ ಗುಡಿಗಳೂ ಇವೆಯಲ್ಲ. ಇವೆಲ್ಲ ಒಂದೇ ಬೆಟ್ಟಸಾಲಿನ ಹಲವು ಕೋಡುಗಳಂತೆ. ಕೋಡುಗಳೇನೋ ಬೇರೆಬೇರೆಯಾಗಿ, ದೂರದೂರವಾಗಿ ಎದ್ದು ನಿಂತು ಕಾಣಿಸಿಕೊಳ್ಳುತ್ತವೆ. ಆದರೆ ಈ ಆಕಾರಭೇದ, ಸ್ಥಾನವೈವಿಧ್ಯ ಸಾಧ್ಯವಾಗುವುದು ಅವೆಲ್ಲದರ ಅಡಿಯಲ್ಲಿ ಆಸರೆಯಾಗಿರುವ ಬೆಟ್ಟದ ಹರವಿನಿಂದ ಅಲ್ಲವೆ ? ದೇಶದ ಬೇರೆ ಬೇರೆ ಗುಡಿಗಳ ಹಿನ್ನೆಲೆಯಲ್ಲಿ, ಅಡಿಪಾಯದಲ್ಲಿ ಜಾನಪದ ಚೌಕಟ್ಟು ಇಂಥದು. ಈ ಜಾನಪದ ಹರವಿನಲ್ಲಿ ಎಲ್ಲ ರಾಜ್ಯಗಳ ಜನತೆಯೂ ಸೇರುತ್ತದೆ, ಸಭ್ಯತೆಯ ಹಂತಗಳೆಲ್ಲ ಅಡಗುತ್ತವೆ, ಭಾಷೆಗಳೂ ಧರ್ಮಗಳೂ ಪದ್ಧತಿಗಳೂ ಬೆರೆತುಹೋಗುತ್ತದೆ.

ಈಗಣ ಸಮಾಜದ ಧೋರಣೆಯ ಸೀಮೆಯಾಚೆ ಇರುವಂತೆ ತೋರುವ ಹಳೆಯ ಬುಡಕಟ್ಟುಗಳೂ ಈ ಚೌಕಟ್ಟಿನಲ್ಲೇ ಸೇರುತ್ತವೆ. ಅವರು ಜಾನಪದ ಸಂಸ್ಕೃತಿಗೆ ಹೊರಗಿನವರಲ್ಲ. ಸಮಾಜರಚನೆಯ ದಾರಿಯಲ್ಲಿ ಆದಿಮವೆನ್ನಬಹುದಾದ ಹಂತವನ್ನು ಈ ಜನ ಪ್ರತಿನಿಧಿಸುತ್ತಾರೆ. ನಾವೆಲ್ಲ ಒಂದು ಕಾಲಕ್ಕೆ ಇಂಥ ಜನರೇ ಆಗಿದ್ದೆವಲ್ಲವೆ ? ನಾವು ಹೇಗೋ ಸಭ್ಯತೆಯ ಜಾಲವನ್ನು ಬೆಳೆಸಿಕೊಂಡು ಈ ಹಂತವನ್ನು ದಾಟಿಬಿಟ್ಟೆವು, ನಾಗರಿಕತೆಯ ವೇಷ ತೊಟ್ಟೆವು. ಈಗಲೂ ಈ ಹಂತದ ಪ್ರಧಾನ ವಿವರಗಳನ್ನು ಉಳಿಸಿಕೊಂಡು ಬಂದಿರುವ ಜನ ಕಾಲದ ದೃಷ್ಟಿಯಿಂದ ಹಿಂದುಳಿದವರು ಅಷ್ಟೆ. ಉಳಿದ ಇನ್ನಾವ ಮಾಪನದಿಂದಲೂ ಅವರು ಕೀಳು ಎನ್ನುವ ಹಾಗಿಲ್ಲ. ಧರ್ಮ, ವೈಯಕ್ತಿಕ ಆಚಾರ, ಸಾಮಾಜಿಕ ವ್ಯವಹಾರ, ಭಾವನೆಗಳು, ಕಲೆ, ಕೈಕೆಲಸ ಎಲ್ಲದರಲ್ಲಿಯೂ ಅವರ ಹಿರಿಮೆಯನ್ನು ಕಂಡುಕೊಳ್ಳುವ ಅವಕಾಶ ಈಚೆಗೆ ಹೆಚ್ಚುತ್ತ ಬಂದಿದೆ. ನಮ್ಮಲ್ಲಿ ಮಾಯವಾಗಿರುವ ಹಲವು ಮಾನವೀಯ ಮೌಲ್ಯಗಳು ಅವರಲ್ಲಿ ಇನ್ನೂ ಉಳಿದಿವೆ. ನಮ್ಮ ನಾಗರ ಆಚಾರ–ವ್ಯವಹಾರಗಳಲ್ಲಿಯೂ ಈ ಹಿಂದಣ ಬುಡಕಟ್ಟಿನ ವಿವರಗಳು ಅಲ್ಲಲ್ಲಿ, ಅಡಿಗಡಿಗೆ ನುಸುಳಿಕೊಂಡು ಬರುತ್ತವೆ.

ನಮ್ಮ ಧರ್ಮದಲ್ಲಂತೂ ಇದನ್ನು ನಾವು ಹೇರಳವಾಗಿ ಕಾಣಬಹುದು. ಈ ದೇಶದ ಸುವಿಖ್ಯಾತ ಕ್ಷೇತ್ರಗಳೆನಿಸಿದ ಪುರಿ–ಜಗನ್ನಾಥ, ಕಾಮಾಖ್ಯ,

ವಿಂಧ್ಯವಾಸಿನಿ, ವೆಂಕಟಾಚಲ, ಪಂಢರಪುರ ಮೊದಲಾದ ಎಡೆಗಳಲ್ಲಿ ಬಳಿಕೆ ಯಲ್ಲಿರುವ ಹಲವಾರು ಪದ್ಧತಿಗಳನ್ನೂ ಕಥೆಗಳನ್ನೂ ಪರಿಶೀಲಿಸಿದರೆ ಈ ಕ್ಷೇತ್ರಗಳಲ್ಲಿ ಬೆಳೆದುಬಂದಿರುವ, ಉಳಿದುಕೊಂಡಿರುವ ಜಾನಪದ ಪ್ರಕ್ರಿಯೆ ಗಳು ಅರಿವಿಗೆ ಬರುತ್ತವೆ. ಈ ಕ್ಷೇತ್ರಗಳಿಗೆ ಇಂದಿಗೂ ನಡೆದುಕೊಂಡು ಬಂದಿ ರುವ ಭಕ್ತರಲ್ಲಿ ಹಳೆಯ ಬುಡಕಟ್ಟುಗಳವರನ್ನೇ ಬಹುಮಟ್ಟಿಗೆ ಕಾಣಬಹುದು.

ಈಗಣ ಭಾರತೀಯ ಜನಸ್ತೋಮವು ನಮ್ಮ ದೇಶಕ್ಕೆ ಬಹುಹಿಂದೆಯೇ ಹಲವಾರು ಹಂತಗಳಲ್ಲಿ ಬಂದಿಳಿದ ನೆಗ್ರಿಟೋ (ಆಫ್ರಿಕದಿಂದ ಅರೇಬಿಯ, ಇರಾನ್, ಬಲೂಚಿಸ್ತಾನಗಳ ಮೂಲಕ ತುಂಬ ಪ್ರಾಚೀನ ಕಾಲದಲ್ಲೇ ಭಾರತಕ್ಕೆ ವಲಸೆ ಬಂದವರು), ಪ್ರೊ-ಆಸ್ಟ್ರೇಲಾಯ್ಡ್ (ಪಶ್ಚಿಮದಿಂದ ಭಾರತಕ್ಕೆ ಬಂದವರು), ಮತ್ತಿತರ ಅಲೆಮಾರಿ ಜನರ ಪ್ರಭಾವಗಳು ಉಳಿದು ಬಂದಿರುವುದು ಸ್ಪಷ್ಟವಾಗುತ್ತದೆ. ಹೀಗೆ ವಲಸೆ ಬಂದ ಹಿಂದಣ ಜನರು ಭೇದವನ್ನು ಮರೆತು ಬೆರೆತುಹೋದರು ; ಹಲವಾರು ಬುಡಕಟ್ಟುಗಳ ಕಲೆಸು ಮೇಲೋಗರವೇ ಪ್ರಾಗ್ಭಾರತೀಯ ಜನಸ್ತೋಮ. ಇವರಿಂದ ಚಿಗುರೊಡೆದು ಬೆಳೆದು ಬಂದ ಸಂಸ್ಕೃತಿಯೇ ಈ ನಾಡಿಗೆ ವಿಶಿಷ್ಟವಾಗಿರುವುದು. ಇದರ ಪ್ರಾಚೀನ ರೂಪಗಳಾದ ಸೈಂಧವಸಂಸ್ಕೃತಿ ಮತ್ತು ವೈದಿಕಸಂಸ್ಕೃತಿಗಳು ಕ್ರಿಸ್ತ ಪೂರ್ವ ಮೂರು-ನಾಲ್ಕು ಸಾವಿರ ವರ್ಷಗಳ ಮೊದಲೇ ಮೈದುಂಬಿಕೊಂಡ ಸೇರ್ಪಡೆಗಳನ್ನೂ ಸಮನ್ವಯವನ್ನೂ ಪ್ರತಿನಿಧಿಸುತ್ತವೆ.

ಹೀಗೆ ಈ ನಾಡಿನ ಸಂಸ್ಕೃತಿಯ ಅಡಿಪಾಯವೇ ಹಲವಾರು ಬುಡಕಟ್ಟು ಗಳ ಸೇರ್ಪಡೆ. ಒಂದೊಂದು ಬುಡಕಟ್ಟಿನ ಜನರೂ ತಂತಮ್ಮ ಸಣ್ಣಸಣ್ಣ, ನೇರವಾದ ಸಂಪರ್ಕವೇ ಪ್ರಧಾನವಾದ ವಿವರವಾಗುಳ್ಳ ಸಮುದಾಯಗಳಿಗೆ ಬದ್ಧರಾಗಿ, ವಿನೀತರಾಗಿ ನಡೆದುಕೊಳ್ಳುತ್ತಿದ್ದವರು. ಎಂದರೆ ಜಾನಪದ ಮನೋಧರ್ಮವೇ ಈ ಸಂಸ್ಕೃತಿಯ ಉಸಿರೆಂದರೆ ಉತ್ಪ್ರೇಕ್ಷೆಯಲ್ಲ. ಸಭ್ಯತೆಯ ಹಲವಾರು ತರಂಗಗಳು ಕಾಲಕಾಲಕ್ಕೆ ಈ ನಾಡಿನ ಮೇಲೆ ಬೀಸಿಹೋದರೂ, ನಗರಜೀವನದ ಮೇಲಾಟ ಮತ್ತೆ ಮತ್ತೆ ಕಾಣಿಸಿಕೊಂಡರೂ, ಈ ಜಾನಪದ ನೆಲೆ ಅಚ್ಚಳಿಯದೆ ನಿಂತಿದೆ. ಈ ನೈರಂತರ್ಯ ಸ್ವಾರಸ್ಯವಾದುದು ; ಬೇರಾವ ದೇಶದಲ್ಲೂ ಇದನ್ನು ಇಷ್ಟು ಸ್ಪಷ್ಟವಾಗಿ ಕಾಣಲಾರೆವು.

ಈ ಸಮನ್ವಯದ ಸಂಸ್ಕೃತಿಗೆ ಆಧಾರವಾಗಿ ಇರುವುದು ಸಮುದಾಯಗಳ ಸಂಯೋಗ. ಇದರ ಮೊದಲ ಹಂತಗಳಲ್ಲಿ 'ವ್ರಾತ್ಯ'ವೆಂದು ಕರೆಸಿಕೊಳ್ಳುವು ದೊಂದು ಪ್ರಸಿದ್ಧವಾದುದು. ಮಧ್ಯಯುಗದ ವೈಯಾಕರಣರಲ್ಲಿ ಒಬ್ಬನಾದ

ಭಟ್ಟೋಜಿ ದೀಕ್ಷಿತನು ಪಾತಂಜಲ ಮಹಾಭಾಷ್ಯದ ಮೇಲೆ ಬರೆದ ವ್ಯಾಖ್ಯಾನ ಗ್ರಂಥದಲ್ಲಿ (5, 2, 21) 'ವ್ರಾತ್ಯ'ರೆನ್ನುವ ಜನರು ಮೈದುಡಿಮೆಯಿಂದ ('ಶರೀರಾಯಾಸ') ಸರಳವಾಗಿ ಬದುಕನ್ನು ನಡೆಸುತ್ತಿದ್ದವರೆಂದೂ ಬುದ್ಧಿವಂತಿಗೆಗೆ ('ಬುದ್ಧಿವೈಭವ') ಹೆಚ್ಚು ಗಮನ ಕೊಡದವರೆಂದೂ ನಿರ್ದೇಶಿಸಿದ್ದಾನೆ. ಮುಂದಿನ ಯುಗಗಳಲ್ಲಿ ಬುದ್ಧಿವಂತಿಗೆ, ಅದೂ ಪಟ್ಟಣದವರ ಚಾಲೂಕು, ಕೆಲಸ ಮಾಡಿತು ; ಹಳ್ಳಿಯಿಂದ ಹೊರಬಂದ ಹಿರಿಮೆ ನಗರವನ್ನು ಸೇರಿತು. ಆದರೆ ಭಟ್ಟೋಜಿ ದೀಕ್ಷಿತನು ಕಂಡುಕೊಂಡಿರುವ 'ವ್ರಾತ್ಯ' ಲಕ್ಷಣಗಳು ನಮ್ಮ ಸಂಸ್ಕೃತಿಯ ಒಳಪದರದಲ್ಲಿ ಸೇರಿವೆಯಲ್ಲವೆ ?

ಈ 'ವ್ರಾತ್ಯ' ಮನೋಧರ್ಮದ ಮಡಿಲಿಂದಲೇ ನಮ್ಮ ಗುಡಿಗುಂಡಾರಗಳು ಎದ್ದುಕೊಂಡುವು. ಸಣ್ಣಸಣ್ಣ, ತೀರ ಹತ್ತಿರವೇ ಹೆಣೆದುಕೊಂಡ, ಗ್ರಾಮೀಣ ಜನರ ಸರಳಭಾವನೆಗಳನ್ನು ಎತ್ತಿ ತೋರಿಸಲೆಂದು, ಅವರ ದಿನನಿತ್ಯದ ಅಗತ್ಯಗಳನ್ನು ಪೂರೈಸಲೆಂದು ಗುಡಿಗಳು ಸಿದ್ಧವಾದುವು. ಹಳ್ಳಿಗಳ ನಡುವೆ, ಹಳ್ಳಿಗಳ ಹೊರಗೆ ಹೊಲದ ಅಂಚಿನಲ್ಲಿ,ನೆರೆಯ ಕಾಡುಮೇಡುಗಳಲ್ಲಿ, ಗುಡ್ಡ ಬೆಟ್ಟಗಳ ಮೇಲೆ ಕಾಣಿಸಿಕೊಂಡ ಗುಡಿಗಳೇ ಮೊದಲ ಗುಡಿಗಳು. ಇವುಗಳ ಪ್ರಮಾಣ ಸಣ್ಣದು, ವೈಭವ ಅಲ್ಪವಾದುದು ; ಅವುಗಳಿಗೆ ನಡೆದುಕೊಳ್ಳುವ ಜನರೂ ಅಲ್ಪಸಂಖ್ಯಾತರೇ, ಸಾಮಾನ್ಯ ಜನರೇ. ಹಳ್ಳಿಗಳಲ್ಲೂ, ಪಟ್ಟಣಗಳ ಬೀದಿಯ ಮಗ್ಗುಲಲ್ಲೂ ಊರ ಹೊರಗೂ ಇಂಥ ಗುಡಿಗಳನ್ನು ಕಾಣಬಹುದು. ಬಹುಮಟ್ಟಿಗೆ ಇವು ಆವರಣಗಳಷ್ಟೆ. ವಿಶೇಷ ಸಂದರ್ಭಗಳಲ್ಲಿ ಜನರು ಬಂದು ನೆರೆಯಲು ಅನುಕೂಲವಾಗುವಂತೆ, ಅಂಥ ಸಂದರ್ಭಗಳಲ್ಲಿ ಉತ್ಸವಕ್ಕೆಂದು ಮೂರ್ತಿಗಳನ್ನು ಮಾಡಿಟ್ಟು ಪೂಜಿಸಲು ನೆರವಾಗುವಂತೆ ಆವರಣವನ್ನೋ ಕಟ್ಟಡವನ್ನೋ ಮಂಡಪವನ್ನೋ ಸಿದ್ಧಪಡಿಸಿರುತ್ತಾರೆ. ಇಂಥ ಗುಡಿಗಳಲ್ಲಿ ಮೂರ್ತಿಗಳಿಗಿಂತ ಕಟ್ಟಳೆಗಳು ಹೆಚ್ಚಿನ ಪಾತ್ರವನ್ನು ವಹಿಸುತ್ತವೆ.

ಹಿಂದಣ ಗುಡಿಗಳು, ಮುಖವಾಡಗಳು

ಗುಡಿಯೆಂದರೆ ಅಸಾಧಾರಣವಾದ, ಅಲೌಕಿಕವಾದ ಸನ್ನಿಧಾನವೊಂದಕ್ಕೆ ಭೌತಿಕವಾದ ತಾಣ; ಅದು ನಿಲ್ಲಲು, ಮೈದುಂಬಿ ತೋರಿಕೊಳ್ಳಲು ಅನುಕೂಲ ವಾಗುವಂಥ ಒಂದು ಎಡೆ. ಇಂಥ ಸನ್ನಿಧಾನವು ಸ್ವಭಾವಸಿದ್ಧವಾದುದಿರ ಬಹುದು. ಆ ಸ್ಥಳಕ್ಕೂ ಅದಕ್ಕೂ ನಿರಂತರವಾದ ಸಂಬಂಧವಿರಬಹುದು. ಗುಡಿಯಲ್ಲದೆ ಗುಡಿಯೊಳಗಿರುವ ಬಿಂಬದಲ್ಲೇ ಸನ್ನಿಧಾನವೆಂಬ ಕಲ್ಪನೆಯಿರುವ ಪ್ರಸಿದ್ಧ, ಪುರಾತನ ಕ್ಷೇತ್ರಗಳಿವೆ. ಹೀಗಲ್ಲದೆ, ವಿಶೇಷ ಸಂದರ್ಭಗಳಲ್ಲಿ ಮಾತ್ರ ಈ ಸನ್ನಿಧಾನವನ್ನು ಅಲ್ಲಿ ಒದಗಿಸುವ ವ್ಯವಸ್ಥೆಯೂ ಗುಡಿಯೇ ; ಉಳಿದಂತೆ ಗುಡಿಯನ್ನು ಕೇಳುವವರೇ ಇಲ್ಲ. ಜಾತ್ರೆ, ಉತ್ಸವ ಮುಂತಾದ ಸಂದರ್ಭ ಗಳಲ್ಲಷ್ಟೇ ಜನರು ಅಲ್ಲಿ ನೆರೆಯುವುದು. ಹೀಗಿರುವಾಗ ಗುಡಿಯಿರುವ ತಾಣ ವಾಗಲೀ ಗುಡಿಯೊಳಗಿರುವ ಮೂರ್ತಿಯಾಗಲೀ ಮುಖ್ಯವಾಗಿರದೆ, ಅಲ್ಲಿ ನಡೆಯುವ ಕಟ್ಟಳೆಗಳು ಮುಖ್ಯವಾಗುತ್ತವೆ. ಜಾನಪದ ಹಿನ್ನೆಲೆ ಹೆಚ್ಚಾಗಿರುವ ಗುಡಿಗಳು ಇಂಥವೇ.

ಇಂಥ ಗುಡಿಗಳಲ್ಲಿ ಯಾವಾಗಲೂ ಜನರ ಪರಿಷೆ ಕಾಣುವುದಿಲ್ಲ ; ಕೆಲ ವೊಮ್ಮೆ ಮಾತ್ರ ಅದರ ಕಳೆಯೇರುತ್ತದೆ. ಸಂದರ್ಭದ ಒತ್ತಡ, ಅಗತ್ಯ ಇಂಥ ತಾತ್ಕಾಲಿಕ ಜನಪ್ರೀತಿಗೆ ಕಾರಣ. ಜನರಲ್ಲಿ ಹರಡಿಕೊಂಡ ರೋಗರುಜಿನೆಗಳು, ಭೀತಿ-ಕಳವಳಗಳು, ಬಯಕೆ-ದುಮ್ಮಾನಗಳು ಜನರನ್ನು ಈ ಗುಡಿಗಳಿಗೆ ಸೆಳೆ ಯುತ್ತವೆ ; ವರ್ಷದಲ್ಲಿ ಗೊತ್ತಾದ ದಿನಗಳಲ್ಲಿ ಗುಡಿಯಲ್ಲಿ ಹೆಚ್ಚಿನ ಸಂಭ್ರಮ ವನ್ನು ಕಾಣುತ್ತವೆ. ಜನರು ಬೇರೆಬೇರೆಯಾಗಿ ತಂತಮ್ಮ ಕಷ್ಟ-ಸುಖಗಳಿ ದ್ದಂತೆ ಆಗಾಗ ಗುಡಿಗಳಿಗೆ ಬಂದು ಹರಕೆ ಸಲ್ಲಿಸಿ ಹೋಗುವುದೂ ಉಂಟು. ನಿತ್ಯವೂ ಪೂಜೆ ನಡೆಯಲೇಬೇಕೆಂಬ ಕಟ್ಟಳೆಯಿರುವುದು ಅಪುರೂಪ ; ಪೂಜೆ ನಡೆದಾಗಲೂ ಆಗಮದ ವಿಧಿಗಳನ್ನೇ ಅನುಸರಿಸುವುವೆಂದು ಹೇಳುವುದೂ ಆಗದು. ತೊಂದರೆಯಿಂದ ಬಂದವರು ತಮಗೆ ತೋರಿದಂತೆ ತಾವೇ ಪೂಜೆ

ಸಲ್ಲಿಸಿ ಹೋಗುವರು ; ಅವರೇನು ಪೂಜಾರಿಯನ್ನು ಕುರಿಯಬೇಕಾದುದೂ ಇಲ್ಲ. ನಿಯತವಾಗಿ ನಡೆಯುವ ಜಾತ್ರೆ, ಉತ್ಸವ ಮೊದಲಾದ ಸಂದರ್ಭಗಳಲ್ಲಿ ಮಾತ್ರ, ಹಿಂದಿನ ಕಟ್ಟಳೆಗಳಿದ್ದಂತೆ ಪೂಜೆ ನಡೆಯುವುದು ವಾಡಿಕೆ. ಇಲ್ಲಿ ಆಗಮದ ವಿಧಿಗಿಂತ ಪದ್ಧತಿಯ ಬಲ ಹೆಚ್ಚು.

ಎಂದಮೇಲೆ ಜನರು ಬರಲು, ಪೂಜೆ ಸಲ್ಲಿಸಲು ಆವರಣವೇ ಗುಡಿ. ಅದರಲ್ಲಿ ದೈವದ ಸನ್ನಿಧಾನ ಒದಗುವುದು ಜನರು ನಡೆಸುವ ಪೂಜೆಯಿಂದಲೇ, ಅಲ್ಲಿ ಅನುಸರಿಸುವ ಕಟ್ಟಳೆಗಳಿಂದಲೇ. ಅಲ್ಲಿ ಮೊದಲೇ ಸಾನ್ನಿಧ್ಯವಿದೆಯೆಂದು ಅಲ್ಲಿ ಪೂಜೆ ನಡೆಯುವುದಲ್ಲ ; ಪೂಜೆ ನಡೆದಾಗ ಸಾನ್ನಿಧ್ಯವೊದಗುವುದೆಂದು ಜಾನಪದ ನಂಬಿಕೆ. ಕಟ್ಟಡವಾಗಲೀ, ಕಟ್ಟಡದೊಳಗಿರುವ ಮೂರ್ತಿಯಾಗಲೀ ಕಟ್ಟಳೆಗಳಷ್ಟು ಮುಖ್ಯವಾಗಲಾರವು. ಕಟ್ಟಳೆಗಳಲ್ಲಿ ಹಾಡು, ಕುಣಿತ, ಬಲಿ, ಆವೇಶ, ತಾಂತ್ರಿಕ ಕಲ್ಪಗಳು, ಊಟ ಮುಂತಾದುವು ಸೇರಿಕೊಳ್ಳುತ್ತವೆ. ಇವನ್ನೆಲ್ಲ ವರ್ಷದಲ್ಲಿ ಗೊತ್ತಾದ ದಿನ ಎಲ್ಲರೂ ಕಲೆತು ನಡೆಸುವ ಆವರಣ, ಇತರ ದಿನಗಳಲ್ಲಿ ಪವಿತ್ರವಾದುದೆಂಬ ಭಾವನೆಯಿರುವುದಿಲ್ಲ. ಕಟ್ಟಳೆಗಳು ಕಾಣಿಸಿಕೊಂಡಾಗಲೇ ಆವರಣ ಪವಿತ್ರವಾಗುವುದು. ಜನರು ಭಯಭಕ್ತಿಗಳಿಂದ ನೆರೆದಾಗಲೇ ಅದರ ಕಳೆ ಕೂಡಿಕೊಳ್ಳುವುದು. ಉಳಿದಂತೆ ಆವರಣವೊಂದು ಎಡೆಯಷ್ಟೆ, ಗುಡಿಯೊಂದು ಕಟ್ಟಡವಷ್ಟೆ.

ತುಂಬ ಪ್ರಾಚೀನ ಜನರ ನಂಬಿಕೆಗಳೂ ಪದ್ಧತಿಗಳೂ ಚೈತನ್ಯವಾದವನ್ನವಲಂಬಿಸಿದುವು. ಚೈತನ್ಯವಾದವೆಂದರೆ ಎಲ್ಲ ವಸ್ತುಗಳಲ್ಲಿಯೂ ಪ್ರಾಣಿಗಳಲ್ಲಿಯೂ ಚೈತನ್ಯವಿದೆಯೆಂಬ ಕಲ್ಪನೆ. ಮೇಲೆ ಜಡವೆಂದು ತೋರುವ ಕಲ್ಲು–ಮಣ್ಣು, ಗಿಡ–ಗೆಂಟೆಗಳಲ್ಲೂ ಚೈತನ್ಯಪದಾರ್ಥವು ಅಡಗಿದೆಯೆಂಬ ನಂಬಿಕೆಯೇನೋ ಇಂದಿಗೂ ಉಳಿದು ಬಂದಿದೆ. ಆದರೆ ಪ್ರಾಚೀನ ಚೈತನ್ಯವಾದದಲ್ಲಿ ಪ್ರತಿಯೊಂದು ವಸ್ತುವಿಗೂ ನಮ್ಮಲ್ಲಿರುವಂಥ ವ್ಯಕ್ತಿತ್ವವನ್ನೇ ಆರೋಪಿಸುತ್ತಿದ್ದರು. ನಮ್ಮ ಸುತ್ತಮುತ್ತ ಇರುವ ಪದಾರ್ಥಗಳೂ ಪ್ರಾಣಿಗಳೂ ನಮ್ಮಂತೆಯೇ ಬಯಕೆಗಳನ್ನೂ ಆತಂಕಗಳನ್ನೂ ಕೋಪ–ಅಸೂಯೆಗಳನ್ನೂ ಒಲುವು–ಮುನಿಸುಗಳನ್ನೂ ಹೊಂದಿವೆಯೆಂದೂ ಅವು ನಮ್ಮನ್ನು ಕಾಡಲು ಅಥವಾ ಕಾಪಾಡಲು ಸಮರ್ಥವಾದುವೆಂದೂ ಅವರ ನಂಬಿಕೆಯಿದ್ದಿತು. ಹೀಗೆಂದು ಮಾನವಶಾಸ್ತ್ರಜ್ಞರ ತಿಳುವಳಿಕೆ. ಆದರೆ ಪ್ರಾಚೀನಜನರು ಕಣ್ಣಿಗೆ ಕಂಡ ವಸ್ತುಗಳಿಗೆಲ್ಲ ಹೀಗೆ ಚೈತನ್ಯವನ್ನಾಗಲೀ ವ್ಯಕ್ತಿತ್ವವನ್ನಾಗಲೀ ಆರೋಪಿಸುತ್ತಿರಲಿಲ್ಲ. ತಮಗೆ ತೀರ ಹತ್ತಿರವಿರುವ, ಎಂದರೆ ತಮ್ಮೊಂದಿಗೆ ನಿಕಟವಾದ

ನೆಂಟನ್ನು ಮೂಡಿಸಿಕೊಂಡಿರುವ, ವಸ್ತುಗಳಿಗೆ ಮಾತ್ರ ಈ ಅಧ್ಯಾರೋಪವಿರುತ್ತಿದ್ದಿತು. ಅವುಗಳಲ್ಲಿ ಚೈತನ್ಯವಾಗಲೀ ವ್ಯಕ್ತಿತ್ವವಾಗಲೀ ಸಹಜವೆಂದಾಗಲೀ ಸ್ವತಃಸಿದ್ಧವೆಂದಾಗಲೀ ಅವರು ಬಗೆದಿರಲಿಲ್ಲ. ಅವುಗಳಲ್ಲಿ ಚೈತನ್ಯವನ್ನು ತುಂಬಲು ಕೆಲವೊಂದು ವಿಧಿಗಳನ್ನು ಅವರು ಕೈಗೊಳ್ಳುವ ವಾಡಿಕೆಯೂ ಇದ್ದಿತು. ವಾಸ್ತವವಾಗಿ, ಜಡಪದಾರ್ಥಗಳಲ್ಲಿ ಚೈತನ್ಯವಿದೆಯೆಂಬುದೇ ಮುಖ್ಯವಾದ ವಿವರವಲ್ಲ, ಆ ಜಡಪದಾರ್ಥಗಳಲ್ಲಿ ಚೈತನ್ಯವನ್ನು ಒದಗಿಸುವ ಕಟ್ಟಳೆಗಳು ಮುಖ್ಯವಾದುವು.

ಮೆಲಿನೌಸ್ಕಿಯ ಪ್ರಕಾರ, ಮನುಷ್ಯನು ಪ್ರಪಂಚದಲ್ಲಿ ಆತಂಕಗೊಂಡಾಗ ಈ ಬಗೆಯ ಚೈತನ್ಯವಾದವೂ ಯಕ್ಷಿಣಿವಿದ್ಯೆಯೂ ತಲೆದೋರಿದುವು. ಪ್ರಪಂಚದಲ್ಲಿ ಬದುಕಿಗೆ ಅಡ್ಡಿಯೆನಿಸುವ, ಬದುಕನ್ನು ಗಾಸಿಗೊಳಿಸುವ ಪ್ರಸಂಗಗಳೂ ಪದಾರ್ಥಗಳೂ ಹಲವಾರು ಇರುತ್ತವೆ. ಇವನ್ನೆಲ್ಲ ಎದುರಿಸಲು ಮನುಷ್ಯನಿಗೆ ದೈಹಿಕವಾದ ಅಥವಾ ಮಾನಸಿಕವಾದ ಬಲ ಕಡಮೆಯೇ. ಇದರ ಅರಿವು ಆತಂಕಕ್ಕೆ ಕಾರಣ. ಚೈತನ್ಯವಿರುವ ಪದಾರ್ಥಗಳನ್ನು ತನ್ನ ವಶಪಡಿಸಿಕೊಳ್ಳಲು, ಅವು ತನಗೆ ಅನುಕೂಲವಾಗಿ, ತನ್ನ ಹಗೆಗಳಿಗೆ ಪ್ರತಿಕೂಲವಾಗಿ ಕೆಲಸಮಾಡಲು ಯಕ್ಷಿಣಿವಿದ್ಯೆ ದಾರಿಯನ್ನು ತೋರಿಸಿತು. ಹೀಗೆ ಚೈತನ್ಯವಾದವು ಮಾನವನ ಆತಂಕಕ್ಕೆ ಪ್ರತಿಕ್ರಿಯೆಯೆಂದು ಮೆಲಿನೌಸ್ಕಿಯ ತರ್ಕ. ಇದು ಸರಿಯೇ. ಆದರೆ ಚೈತನ್ಯವಾದವನ್ನೂ ಯಕ್ಷಿಣಿವಿದ್ಯೆಯನ್ನೂ ಒಟ್ಟಿಗೆ ಹೇಳಿದಾಗ, ಅವುಗಳ ನಡುವೆ ಇರುವ ಸ್ವಾರಸ್ಯವಾದ ನೆಂಟು ಈ ಪಂಡಿತನಿಗೆ ಸ್ಪಷ್ಟವಾಗಲಿಲ್ಲ. ಯಕ್ಷಿಣಿವಿದ್ಯೆಯ ಅಡಿಪಾಯವೇ ಚೈತನ್ಯವಾದ. ಯಕ್ಷಿಣಿಯ ಪ್ರಭಾವಕ್ಕೆ ಒಳಗಾಗಬಲ್ಲ ಚೈತನ್ಯವು ಪದಾರ್ಥದಲ್ಲಿದೆಯೆಂಬ ನಂಬಿಕೆಯ ಆಧಾರದ ಮೇಲೇ ಯಕ್ಷಿಣಿವಿದ್ಯೆಯ ಪ್ರಯೋಗ ಸಿದ್ಧವಾಗುವುದು. ಮತ್ತು, ಪ್ರಭಾವವನ್ನು ಮೂಡಿಸುವ ಸಾಧ್ಯತೆಯಿದೆಯೆಂಬ ನಂಬಿಕೆಯ ಮೇಲೇ ಯಕ್ಷಿಣಿವಿದ್ಯೆ ನಿಲ್ಲುವುದು. ಚೈತನ್ಯವಾದವೊಂದು ಸಿದ್ಧಾಂತ, ನಂಬಿಕೆ ; ಯಕ್ಷಿಣಿವಿದ್ಯೆಯಾದರೋ ಪ್ರಯೋಗ, ಕಲೆ. ಚೈತನ್ಯವಾದವು ಪ್ರಯೋಜನಕ್ಕೆ ಬರುವುದು ಯಕ್ಷಿಣಿವಿದ್ಯೆಯಿಂದಲೇ.

ಮೇಲಾಗಿ, ಪದಾರ್ಥಗಳಲ್ಲಿ ಚೈತನ್ಯ ಮೂಡಿಬರುವುದು, ಅವುಗಳಲ್ಲಿ ಕೋಪ–ತಾಪಗಳು ಒದಗಿಬರುವುದು ಯಕ್ಷಿಣಿವಿದ್ಯೆಯ ಬಲದಿಂದಲೇ ಎನ್ನುವುದೂ ಚೈತನ್ಯವಾದದ ಒಂದು ವಿವರವೇ. ಯಕ್ಷಿಣಿವಿದ್ಯೆಯಿಲ್ಲದೆ ಚೈತನ್ಯವಾದವನ್ನಾಗಲೀ, ಚೈತನ್ಯವಾದವಿಲ್ಲದೆ ಯಕ್ಷಿಣಿವಿದ್ಯೆಯನ್ನಾಗಲೀ ಪರಿಶೀಲಿಸು

ವುದಾಗದು. ಪ್ರಾಚೀನ ಮನೋಧರ್ಮದ ಗುಡಿ (ಎಂದರೆ ಆವರಣ) ಯಕ್ಷಿಣಿ ವಿದ್ಯೆಯ ಪ್ರಯೋಗಕ್ಕೆಂದು ನಿರ್ದಿಷ್ಟವಾದ ತಾಣ. ಆ ಸ್ಥಳದಲ್ಲಿ ನಡೆಯುವ ಕಟ್ಟಳೆಗಳ ಬಲದಿಂದ ಅಲ್ಲಿರುವ ಕಲ್ಲು, ಮಣ್ಣು, ಗಿಡ, ಗೆಂಟೆ, ಗುಡ್ಡ, ನೀರು ಎಲ್ಲವೂ ಪ್ರಭಾವಶಾಲಿಯಾದ ಚೈತನ್ಯವನ್ನು ಪಡೆದುಕೊಳ್ಳುತ್ತವೆ. ಕಟ್ಟಳೆಗಳು ಸರಿಯಾಗಿ ನಡೆಯಬೇಕಷ್ಟೆ ; ಚೈತನ್ಯ ಒದಗುವುದು ಕಷ್ಟವಲ್ಲ.

ಕಟ್ಟಳೆಗಳು ನಡೆಯುವ ಆವರಣದಲ್ಲಿ ಗುಡಿಯನ್ನು ಕಟ್ಟುವುದೂ, ಕಟ್ಟಿದ ಗುಡಿಯಲ್ಲಿ ಮೂರ್ತಿಯನ್ನು ಮಾಡಿಡುವುದೂ ಕಾಲಕ್ರಮದಲ್ಲಿ ಕಾಣಿಸಿಕೊಂಡ ವಿವರಗಳು. ಮೊದಲಿಗೆ ಆವರಣದಲ್ಲಿ ನಿಖರವಾದ ಪೂಜಾವಸ್ತುವೆಂಬುದಾಗಲೀ, ಎಲ್ಲ ಕಾಲಕ್ಕೂ ನಿಲ್ಲುವ ಗುಡಿಯೆಂದಾಗಲೀ ಇರುತ್ತಿರಲಿಲ್ಲ. ಆವರಣದಲ್ಲಿ ಕಟ್ಟಳೆಗಳು ಕಾಲಕಾಲಕ್ಕೆ ನಡೆಯಬೇಕಾಗಿದ್ದುದರಿಂದ ಆವರಣವನ್ನು ಮತ್ತಾವ ಉಪಯೋಗಕ್ಕೂ ತಂದುಕೊಳ್ಳದೆ, ಅದನ್ನು ಹಾಗೆಯೇ ಬಿಟ್ಟಿರುತ್ತಿದ್ದುದು ಸಹಜವೇ. ಕಾಲಕ್ರಮದಲ್ಲಿ ಆವರಣಕ್ಕೊಂದು ಹಿರಿಮೆ ಒದಗಿದುದೂ ಸಹಜವೇ. ಹಲವಾರು ಜನಾಂಗಗಳಲ್ಲಿ ಧಾರ್ಮಿಕಕಟ್ಟಳೆಗಳನ್ನು ನಡೆಸುವ ಎಡೆ ವಸತಿಗಿಂತ ಕೊಂಚ ದೂರದಲ್ಲಿದ್ದು, ಅದನ್ನು ಜನ ಗುಟ್ಟಾಗಿರಿಸುವುದಿದೆ. ಜನಾಂಗಕ್ಕೆ ಹೊರಗಾದವರು ಈ ಎಡೆಗೆ ಬರಬಾರದೆಂದೂ, ಈ ಎಡೆಯಿರುವ ಸುಳಿವು ಅವರಿಗೆ ಸಿಗಬಾರದೆಂದೂ ಎಚ್ಚರ ವಹಿಸುವುದೂ ಇದೆ, ನಮ್ಮಲ್ಲಿಯೂ ದೇವಿಬನ, ನಾಗಬನ ಮೊದಲಾದ ಎಡೆಗಳಿರುವುದನ್ನು ನೆನಪಿಗೆ ತಂದುಕೊಳ್ಳಬಹುದು. ಆಫ್ರಿಕಾದಲ್ಲಿಯೂ ಬುಡಕಟ್ಟುಗಳಿಗೆ ಸೇರಿದ ಇಂಥ ತಾಣಗಳಿರುವುದುಂಟು.

ಆವರಣದಲ್ಲಿ ಒಂದು ಕಟ್ಟೆಯ ಮೇಲೊ, ಮಂಡಪದಲ್ಲಿಯೋ, ಮರದಡಿಯಲ್ಲಿಯೋ ಧಾರ್ಮಿಕ ಕುಣಿತ ಮುಂತಾದ ಕಟ್ಟಳೆಗಳಲ್ಲಿ ಬಳಕೆಗೆ ಬರುವ ಆಯುಧಗಳು, ಅಲಂಕರಣಗಳು, ಮುಖವಾಡಗಳು, ವಾದ್ಯಗಳು ಇವುಗಳನ್ನು ಇರಿಸುತ್ತಿದ್ದುದು ವಾಡಿಕೆ. ಕಟ್ಟಳೆಯ ಸಂದರ್ಭದಲ್ಲಿ ಅಲ್ಲದೆ ಉಳಿದಂತೆ ಇವನ್ನು ಯಾರೂ ಮುಟ್ಟುತ್ತಿರಲಿಲ್ಲ. ಜನಾಂಗಕ್ಕೆ ಸೇರದವರು ಇದನ್ನು ನೋಡಬಾರದೆಂದೂ ನಿಯಮವಿದ್ದಿತು. ಕಟ್ಟಳೆಯ ಸಮಯದಲ್ಲಿ ಬುಡಕಟ್ಟಿನ ಹಿರಿಯ ಅಥವಾ ಪುರೋಹಿತನನ್ನು ಮುಂದೆಮಾಡಿಕೊಂಡು ಬುಡಕಟ್ಟಿನ ಜನರೆಲ್ಲ (ಹಲವು ವೇಳೆ ಗಂಡಸರು ಮಾತ್ರ) ಆವರಣದೊಳಗೆ ಸೇರಿ, ಕಟ್ಟೆಯ ಮುಂದೆ ನೆರೆದು ಕುಣಿತವಾಗುವ ಮೊದಲು ಕಟ್ಟೆಯ ಮೇಲಿದ್ದ ಮುಖವಾಡ, ಆಭರಣ, ಆಯುಧ ಮೊದಲಾದುವನ್ನು ವಿಧಿವತ್ತಾಗಿ ಧರಿಸುತ್ತಿದ್ದರು. ದೈವದ ಮುಖ



ಕೋಲಾರದ ರಣಭೇರಿಯಮ್ಮ

ವಾಡವನ್ನು ತೊಟ್ಟೊಡನೆ ಅಥವಾ ದೈವದ್ದೆಂದು ಗೊತ್ತಾದ ಆಯುಧವನ್ನು ಹಿಡಿದೊಡನೆ, ಅಥವಾ ದೈವಕ್ಕೆ ವಿಶಿಷ್ಟವಾದ ಆಭರಣಗಳನ್ನು ಧರಿಸಿದೊಡನೆ ದೈವದ ಆವೇಶ ಮೈಮೇಲೆ ಬರುವುದೆಂಬ ನಂಬಿಕೆ ಇಲ್ಲಿ ಮುಖ್ಯವಾದುದು.

ಕರ್ಣಾಟಕದಲ್ಲಿ ಕರಾವಳಿಯ ಕಡೆ, ಮುಖ್ಯವಾಗಿ ತುಳುನಾಡಿನಲ್ಲಿ, ಇಂಥ ಆವರಣಗಳನ್ನೂ, ಕಟ್ಟೆಗಳನ್ನೂ, ಖಾಲಿ ಮಂಡಪಗಳನ್ನೂ ಕಾಣಬಹುದು. ದೈವಸ್ಥಾನವೆಂದರೆ ಸಣ್ಣದೊಂದು ಗುಡಿ, ಒಂದೇ ಕೋಣೆಯದು ; ನಡುವೆ ಒಂದು ತೂಗುಯ್ಯಾಲೆ–ಮಣೆ ; ಅದರ ಮೇಲೆ ಒಂದು ದೀಪವೋ ಕತ್ತಿಯೋ ಗಿಂಡಿಯೋ ದೈವವನ್ನು ಪ್ರತಿನಿಧಿಸಿ ಇರುತ್ತದೆ. ಆವೇಶ ತಳೆದು ಕುಣಿಯುವ ಪಾತ್ರಿಯು ಸಂದರ್ಭದಲ್ಲಿ ತೊಡುವ ಮುಖವಾಡವನ್ನೂ ಇತರ ಆಭರಣ ಗಳನ್ನೂ ಇರಿಸಿರುವುದುಂಟು. ಇದಕ್ಕೆ ಭಂಡಾರವೆಂದು ಹೆಸರು. ಇವನ್ನೆಲ್ಲ ಕ್ರಮವರಿತು, ಕಟ್ಟಳೆಯಂತೆ ತೊಟ್ಟೊಡನೆ ದೈವವು ಈ ಪಾತ್ರಿಯ ಮೈಯಡರಿ ಆವೇಶ ಬರುವುದು. ಇದು ನಮ್ಮ ದೇಶದಲ್ಲಿ ಮಾತ್ರವಲ್ಲದೆ ಪ್ರಪಂಚದ ಹಲವಾರು ಹಳೆಯ ಜನರಲ್ಲೂ ಕಾಣಸಿಗುವ ಕಲ್ಪನೆ.

ಹಳೆಯ ಕಾಲದ ಇಂಥ ಆವರಣ, ಕಟ್ಟಡಗಳಿಗೆ ಕನ್ನಡದಲ್ಲಿ 'ಕೊಟ್ಟಿಗೆ' ಗಳೆಂದು ಹೆಸರು. ಮಣ್ಣಿಗೋಡೆಗಳು, ಕಡ್ಡಿಗಳ ಸೂರು, ಎಲೆಯ ಹಂದರ, ಗಿಡ್ಡ ಬಾಗಿಲು ಇರುವ ಸಣ್ಣದೊಂದು ಕತ್ತಲೆ ಕೋಣೆ ; ದೈವಕ್ಕೆ, ಕಟ್ಟಳೆಗಳಿಗೆ ಸಂಬಂಧಪಟ್ಟ ಸಾಮಾನುಗಳನ್ನು ಇರಿಸಿಕೊಳ್ಳುವುದೇ ಇದರ ಮುಖ್ಯ ಪ್ರಯೋಜನ. ಅದನ್ನು ಗುಡಿಯೆನ್ನುವುದಕ್ಕಿಂತ ಉಗ್ರಾಣವೆಂದರೆ ಹೆಚ್ಚು ಒಪ್ಪುತ್ತದೆ. ಕಟ್ಟಳೆಯ ಸಂದರ್ಭ ಬಂದಾಗ, ಈ ಕೊಟ್ಟಿಗೆಯೆದುರು ಚಪ್ಪರ ವನ್ನೆಬ್ಬಿಸುತ್ತಾರೆ ; ಹಸಿರು ಎಲೆಗಳಿಂದಲೂ ಬಣ್ಣಬಣ್ಣದ ಹೂಗಳಿಂದಲೂ ಅಲಂಕರಿಸುತ್ತಾರೆ. ಚಪ್ಪರದಡಿಯಲ್ಲೇ ದೈವದ ಆರಾಧನೆಯ ಕಟ್ಟಳೆಗಳು ನಡೆಯುವುದು, ಜನರು ನೆರೆಯುವುದು, ಪಾಲ್ಗೊಳ್ಳುವುದು. ಆಗ ಕೊಟ್ಟಿಗೆ ಯಿಂದ ಸಾಮಾನುಗಳನ್ನೆಲ್ಲ ಹೊರತರುತ್ತಾರೆ. ಕಾಲಕಾಲಕ್ಕೆ ಕೊಟ್ಟಿಗೆಯಲ್ಲಿ ಜನರು ಕಟ್ಟಳೆಯಂತೆ ನೆರೆಯುವುದಕ್ಕೆ ಮೊದಲಿನ ಹೆಸರು 'ಅಯನ'ವೆಂದು ; ಮುಂದೆ ಇದೇ 'ಉತ್ಸವ'ವಾಯಿತು.

ಬರುಬರುತ್ತ 'ಕೊಟ್ಟಿಗೆ'ಯೂ ಅದರ ಮುಂದೆ ಕುಣಿತಕ್ಕೆ ಜನರ ಕೂಟಕ್ಕೆ ಗೊತ್ತಾದ ಚಪ್ಪರವೂ ಸೇರಿದಂತೆ ಆವರಣವು ಪವಿತ್ರವೆಂಬ ಕಲ್ಪನೆ ತಲೆದೋರಿಕೊಂಡುದು ಸಹಜವೇ. ಧಾರ್ಮಿಕ ಪ್ರಯೋಜನಕ್ಕೆ ಮೀಸಲಾದ ಸ್ಥಳವಿದೆಂದೂ, ಅಲ್ಲಿ ಮತ್ತಾವ ಲೌಕಿಕ ವ್ಯವಹಾರವನ್ನೂ ನಡೆಸಬಾರ

ದೆಂದೂ, ಆ ಸ್ಥಳವಲ್ಲದೆ ಬೇರೆಲ್ಲಿಯೂ ಧಾರ್ಮಿಕ ಕಟ್ಟಳೆಗಳನ್ನು ನಡೆಸಬಾರ ದೆಂದೂ ವಿಧಿನಿಷೇಧಗಳು ಕಾಣಿಸಿಕೊಂಡುವು. ಈ ಸ್ಥಳದೊಳಗೆ ಸಾಮಾನ್ಯ ವಾಗಿ ಯಾರೂ ಕಾಲಿರಿಸಬಾರದು; ಬರುವವರಾದರೂ ಶುದ್ಧರಾಗಿ ಬರಬೇಕು. ಅಶುಚಿಯಾದ ಸಂದರ್ಭಗಳಲ್ಲಿರುವವರು ಇಲ್ಲಿಗೆ ಬರುವ ಹಾಗಿಲ್ಲ ; ಜನಾಂಗಕ್ಕೆ ಸೇರದವರು ಇದರೊಳಗೆ ಬರಲಾರರು. ಇದು ಇಡೀ ಜನಾಂಗಕ್ಕೆ ಸೇರಿದ ಎಡೆ. ಯಾವೊಬ್ಬ ವ್ಯಕ್ತಿಯೂ ಇದರ ಮೇಲೆ ತನ್ನ ಒಡೆತನವನ್ನು ಸಾಧಿಸಿ ಕೊಳ್ಳಲಾರ. ಕಟ್ಟಳೆಯ ಸಮಯದಲ್ಲಿ ಜನಾಂಗಕ್ಕೆ ಸೇರಿದವರೆಲ್ಲರೂ ಇಲ್ಲಿ ನೆರೆಯುವರು, ಉಳಿದಂತೆ ಯಾರೊಬ್ಬರೂ ಇಲ್ಲಿಗೆ ಬರುವುದು ಅಪುರೂಪ.

ಸಾಮಾನ್ಯವಾಗಿ ಇಂಥ ಆವರಣವಿರುತ್ತಿದ್ದುದು ದೊಡ್ಡದೊಂದು ಮರದ ನೆರೆಯಲ್ಲಿ; ಕಟ್ಟಳೆ ನಡೆಯುವಾಗ ಮರದ ಆಸರೆಯು ಅಗತ್ಯವಾಯಿತು. ಮರ ದೊಡ್ಡದಾಗಿ ಹರಡಿಕೊಂಡಿದ್ದರೆ ಬಿಸಿಲಲ್ಲಿ ನೆರಳು, ಮಳೆಯಲ್ಲಿ ಆಸರೆ, ಇವೆರಡಕ್ಕಿಂತ ಮುಖ್ಯವಾಗಿ ಉಳಿದವರಿಂದ ಮರೆ. ಧಾರ್ಮಿಕ ಕಟ್ಟಳೆಗಳು ಗುಟ್ಟಾಗಿ ನಡೆಯಬೇಕೆನ್ನುವ ವಿಧಿ ಪ್ರಪಂಚದಲ್ಲೆಲ್ಲ ಇದ್ದದ್ದೇ. ಇದಕ್ಕೆ ನೆರ ವಾಗುವ ಮರ ಆವರಣದ ಹಿರಿಮೆಯಲ್ಲಿ ಪಾಲ್ಗೊಳ್ಳುವುದು ಸರಿಯೋ ಅಲ್ಲವೆ? ಆವರಣದಂತೆ ಮರವೂ ಸ್ಥಿರವಾದ ಸನ್ನಿಧಾನ. ಆವರಣದಲ್ಲಿರುವ ದೈವ ಮರ ವನ್ನೇರಿ ಮರೆಯಾಗುವುದೂ ಉಂಟು; ಮರದಡಿಯಲ್ಲಿ ಯಾರಿಗೂ ಕಾಣದಂತೆ ಕುಳಿತಿರುವುದೂ ಉಂಟು. ಹಲವು ವೇಳೆ ಆವರಣದಲ್ಲಿ ಕೊಟ್ಟಿಗೆಯಾಗಲೀ ಗುಡಿಯಾಗಲೀ ಕಟ್ಟೆಯಾಗಲೀ ಇರದಿದ್ದಾಗ ಮರವೇ ಇದರ ಕೆಲಸವನ್ನು ನಿರ್ವಹಿಸುತ್ತದೆ.

ಆವರಣಕ್ಕೊಂದು ಸ್ಪಷ್ಟವಾದ ರೂಪವಿರದಷ್ಟೆ ? ಮರಕ್ಕಾದರೆ ಕಣ್ಣಿಗೆ ಕಾಣಿಸುವ, ಮನಸ್ಸಿನಲ್ಲಿ ನಿಲ್ಲುವ ಆಕಾರವೊಂದಿರುತ್ತದೆ. ಇಂಥ ಮರದ ನೆನಪಿ ನಿಂದಲೇ ಆವರಣವನ್ನು ನಿರ್ದೇಶಿಸುವುದೂ ಸಹಜವೇ. ಹೀಗಾದಾಗ ಮರವೇ ಪವಿತ್ರವೆಂದಾಯಿತು, ದೈವದ ತಾಣವೆಂದಾಯಿತು. 'ಸ್ಥಳವೃಕ್ಷ'ಗಳ ಕಲ್ಪನೆ ತುಂಬ ಹಳೆಯದು. ವೃಕ್ಷಪೂಜೆಯ ಹಿನ್ನೆಲೆಯನ್ನೂ ಇಲ್ಲಿ ಗಮನಿಸಬಹುದು.

ಧಾರ್ಮಿಕವಿಧಿಗಳು ನಡೆಯುವಾಗೇನೋ ಚಪ್ಪರ ಎದ್ದುಕೊಳ್ಳುತ್ತದೆ, ಜನರ ಗಮನವನ್ನು ಸೆಳೆದುಕೊಳ್ಳುತ್ತದೆ. ಜನಾಂಗದ ಸಾರವನ್ನು ಒಳ ಗೊಂಡಿರುವುದು ಈ ಚಪ್ಪರ. ಹಾಗೆಂದೇ ಅದು 'ಮಂಡಪ'ವೆನಿಸಿಕೊಂಡಿತು. 'ಮಂಡ'ವೆಂದರೆ ಹೆಪ್ಪು, ಸಾರ, ತಿರುಳು; ಅದನ್ನು ಕಾಪಾಡುವುದು 'ಮಂಡ-ಪ'. ಜನಾಂಗದ ತಿರುಳು ಇರುವುದು ಅದರ ಧಾರ್ಮಿಕಕ್ರಿಯೆಗಳಲ್ಲಿ ;

ಈ ಕ್ರಿಯೆಗಳ ನೆಲೆ 'ಮಂಡಪ.' ಈ ಮಂಡಪವೇ ಜನಾಂಗವನ್ನು ಒಂದು ಗೂಡಿಸುವ ಸಾಧನ. ಇಲ್ಲಿಯೇ ಜನರ ದೈವಗಳು ಬಂದಿಳಿಯುವುದು, ಪಾತ್ರಿಗಳ ಮೈಯಡರಿ ಕಾಣಿಸಿಕೊಳ್ಳುವುದು, ಅವರ ಕುಣಿತಗಳಲ್ಲಿ ನಲಿಯುವುದು, ಜನರು ಒಪ್ಪಿಸುವ ಎಡೆಗಳನ್ನು ಮೆಲ್ಲುವುದು. ಇಲ್ಲಿಯೇ ಊರ ರಸಿಕರು ಹಾಡುವುದು, ಕುಣಿಯುವುದು. ಇಲ್ಲಿಯೇ ಪುರೋಹಿತರು ಮಂತ್ರಗಳನ್ನು ಮಣಗುಟ್ಟುವುದು. ಇಲ್ಲಿಯೇ ಶ್ರದ್ಧಾಳುಗಳು ಕೆಂಡದ ಮೇಲೆ ಹಾಯುವುದು, ದೈವಕ್ಕೆ ಪ್ರೀತಿಯಾಗಲೆಂದು ಮೈಗಾಸಿಮಾಡಿಕೊಳ್ಳುವುದು. ಇಲ್ಲಿಯೇ ಜನರೆಲ್ಲ ಕಲೆತು ದೈವದ ಪ್ರಸಾದವೆಂದು ಊಟಮಾಡುವುದು.

ಇಂಥ ಧಾರ್ಮಿಕವಿಧಿಗಳು ನಡೆಯದಿದ್ದಾಗ ಮರವು ಪವಿತ್ರವಾದ ಆವರಣವನ್ನು ಜನಾಂಗದ ಜನರಿಗೆ ನೆನಪುಮಾಡಿಕೊಡುತ್ತದೆ ; ಮಂಡಪದ ಪ್ರತಿನಿಧಿಯಾಗಿ ನಿಂತಿರುತ್ತದೆ. ಮಂಡಪವಾದರೆ ಆಗಾಗ ತೋರಿಕೊಂಡು ಮರೆಯಾಗುವಂಥದು ; ಮರವೋ ಎಂದಿಗೂ ಉಳಿದಿರುವುದು. ವಿಧಿಗಳು ನಡೆಯುತ್ತಿರುವಾಗಲೂ ಅದು ಎಲ್ಲಕ್ಕೂ ಮೌನಸಾಕ್ಷಿಯೇ. ತಲೆಮಾರುಗಳಲ್ಲಿ ಎಷ್ಟೆಷ್ಟೋ ಕಟ್ಟಳೆಗಳನ್ನು, ಕುಣಿತಗಳನ್ನು, ಹರಕೆಗಳನ್ನು, ಬಲಿಗಳನ್ನು ಕಂಡಿರುವ ನಿರಂತರ ಸಾಕ್ಷಿ ಅದು. ಮಂಡಪಕ್ಕಿಂತ ಅದರ ವಾಸ್ತವಿಕತೆ ಹೆಚ್ಚು ಭೌತಿಕವಾದುದು. ಕುಣಿಯುವಾಗ ಪಾತ್ರಿಯ ಮೈಯಡರಿ ಆವೇಶವಾಗಿ ತೋರಿಕೊಳ್ಳುವ ದೈವ ಈ ಮರದಿಂದಲೇ ಇಳಿದು ಬರುವುದು ; ಕುಣಿತ ಮುಗಿದು ಪಾತ್ರಿ ಸೊರಗಿ ಮಲಗಿದಾಗ ದೈವವು ಮತ್ತೆ ಮರವನ್ನೇ ಆಶ್ರಯಿಸುವುದು. ದೈವಕ್ಕೆ ಮರವೇ ಸಹಜವಾದ ವಸತಿ. ಹಾಗೆಂದೇ ಜನರು ಮರವನ್ನೇ ದೈವವೆಂದು ಬಗೆಯತೊಡಗಿದರು. ದೈವದ ನೆಲೆ ದೈವಕ್ಕೆ ಸಮನಾದುದೇ ಅಲ್ಲವೆ ? ಮರದೆದುರು ನಿಲ್ಲುವಾಗ ಜನರ ಮನಸ್ಸಿನಲ್ಲಿ ಅಂಜಿಕೆ, ಅಳುಕು, ಅಭಿಮಾನ, ಆದರ, ಭಕ್ತಿ ಎಲ್ಲವೂ ಇರುವುದು ಸಹಜವೇ.

ಮರದಲ್ಲಿ ಮನೆಮಾಡಿಕೊಂಡಿರುವ ದೈವಕ್ಕೆ ಇಂಥದು ಎಂಬ ಆಕಾರವಿಲ್ಲ. ಮರದ ಆಕಾರ, ಮರದ ಅಲುಗಾಟ ದೈವ ಇರುವುದನ್ನು ತೋರಿಸುತ್ತದೆ. ಜಾನಪದ ಜೀವನದಲ್ಲಿ ದೈವದ ಇರವೇ ಪ್ರಧಾನವಾದ ಕಲ್ಪನೆ. ಮನುಷ್ಯನ ಬದುಕನ್ನು ನೇವರಿಸುವುದು ಅದೇ, ಅವನ ಆತಂಕಗಳನ್ನು ಓಡಿಸುವುದು ಅದೇ, ಗಂಡಾಂತರಗಳಿಂದ ಅವನನ್ನು ಕಾಪಿಡುವುದು ಅದೇ. ಜನರನ್ನೆಲ್ಲ ಸರಳವಾದ ಸಾಮುದಾಯಿಕ ಚೌಕಟ್ಟಿನಲ್ಲಿ ಸೇರಿಸುವುದೂ ಅದೇ.

ಇಂಥ ದೈವದ ಇರವು ಮರದೊಂದಿಗೆ ಬೆರೆತಾಗ, ಮರವೇ ಜಾನಪದಜೀವನದಲ್ಲಿ ಮುಖ್ಯವಾದ ವಿವರವಾಗದೆ ಇರುತ್ತದೆಯೇ ?

ನಮ್ಮ ದೇಶದಲ್ಲಿ ಬಳಕೆಯಲ್ಲಿರುವ ವೃಕ್ಷಪೂಜೆಯ ರಹಸ್ಯವನ್ನು ಅರಿತುಕೊಳ್ಳಲು ವಿದ್ವಾಂಸರು ಟೋಟೆಮ್, ಆ್ಯನಿಮಾ, ಕಾಮು ಮೊದಲಾದ ಹಲವಾರು ವಾದಗಳನ್ನು ಮುಂದಿರಿಸುತ್ತಾರೆ. ಈ ವಾದಗಳ ಬೆನ್ನುಹತ್ತಿ ವೃಕ್ಷಪೂಜೆಯ ವಿವರಗಳನ್ನು ವಿಶ್ಲೇಷಣೆಮಾಡುತ್ತ, ಒಂದು ಮುಖ್ಯ ವಿವರವನ್ನೇ ಮರೆಯುತ್ತಾರೆ. ಈ ನೆಲದ ಮೇಲೆ ಹುಟ್ಟಿಕೊಂಡ ಎಲ್ಲ ಮರ–ಗಿಡಗಳನ್ನೂ ಪೂಜೆಮಾಡುವ ಪದ್ಧತಿ ಎಂದಾದರೂ ಇದ್ದಿತೆ ? ಎಲ್ಲಿಯಾದರೂ ಕಂಡಿದೆಯೆ ? ಕೆಲವು ಮರಗಳು—ಅಶ್ವತ್ಥ, ಬಿಲ್ವ, ವಟ ಮುಂತಾದುವು ಪವಿತ್ರವೆಂಬ ಪ್ರತೀತಿಯಿದೆ. ಆದರೆ ದಾರಿಯಲ್ಲಿರುವ ಎಲ್ಲ ಅರಳೀಮರಗಳನ್ನೂ ಆಲದ ಮರಗಳನ್ನೂ ಬಿಲ್ವ ಮರಗಳನ್ನೂ ಯಾರಾದರೂ ಪೂಜೆ ಮಾಡುತ್ತಾರೆಯೆ ? ಅಂಗಳದಲ್ಲಿರುವ ಹತ್ತಾರು ತುಳಸೀಗಿಡಗಳಿಗೆಲ್ಲ ಪೂಜೆ ನಡೆಯುತ್ತದೆಯೆ ? ಗುಡಿಯ ನೆರೆಯಲ್ಲಿರುವ ಅರಳಿಮರಕ್ಕೆ, ಬೃಂದಾವನಕಟ್ಟೆಯಲ್ಲಿರುವ ತುಳಸೀ ಗಿಡಕ್ಕೆ ಪೂಜೆ ನಡೆಯುತ್ತದೆ ಅಷ್ಟೆ. ಹಳ್ಳಿಯಲ್ಲಿ ನೂರಾರು ಮರಗಳಿರಬಹುದು ; ಪೂಜೆಗೊಳ್ಳುವ ಮರಗಳು ಎರಡೋ ಮೂರೋ, ಕಡೆಗೆ ಒಂದೋ. ಮರವು ಮರವೆಂದ ಮಾತ್ರಕ್ಕೆ ಅದು ಪೂಜೆಗೆ ಯೋಗ್ಯವಾಗಲಾರದು. ಗುಡಿಯೊಂದಿಗೋ ಕಟ್ಟಳೆಗಳು ನಡೆಯುವ ಆವರಣದೊಂದಿಗೋ ನೆಂಟು ಇದ್ದರೆ ಮಾತ್ರ ಮರಕ್ಕೊಂದು ಹಿರಿಮೆ, ಯೋಗ್ಯತೆ.

ನಮ್ಮ ದೇಶದಲ್ಲಿ ಪೂಜೆಗೊಳ್ಳುತ್ತ ಪ್ರಸಿದ್ಧವಾಗಿರುವ ಮರಗಳೆಲ್ಲ ಇಂಥ 'ಸ್ಥಳವೃಕ್ಷ'ಗಳೇ. ಎಂದರೆ, ಜಾನಪದ ಜೀವನದಲ್ಲಿ ಮುಖ್ಯ ವಿವರವಾದ ಸ್ಥಳಕ್ಕೆ (ಆವರಣಕ್ಕೆ) ಹೊಂದಿಕೊಂಡ ವೃಕ್ಷಗಳು. ಅದೇ ಜಾತಿಯ ಮತ್ತೊಂದು ಮರ ಆವರಣದ ಹೊರಗಿದ್ದರೆ ಅದನ್ನು ಯಾರೂ ಕಣ್ಣೆತ್ತಿಯೂ ನೋಡುವುದಿಲ್ಲ ! ಮರದ ಭಾಗ್ಯ ಆವರಣದಿಂದ ಒದಗುತ್ತದೆ.

ಆವರಣದೊಳಗೆ ಅಥವಾ ಅದರ ನೆರೆಯಲ್ಲಿ ಇಂಥ ಮರ ಇರದಿದ್ದರೆ, ಹಾಗೆ ಇರುವ ದೊಡ್ಡ ಬಂಡೆಯೋ ವಿಚಿತ್ರವಾದ ಆಕಾರವುಳ್ಳ ಕಲ್ಲೋ ದೈವದ ನೆಲೆಯಾಗುತ್ತದೆ. ಮರವು ಮಾಡುವ ಕೆಲಸವನ್ನೇ ಇದು ನಿರ್ವಹಿಸುತ್ತದೆ. ಜನರು ಇದನ್ನೇ ಭಯಭಕ್ತಿಗಳಿಂದ ಕಾಣತೊಡಗುತ್ತಾರೆ. ಕಲ್ಲು–ಬಂಡೆಗಳು ಹಲವಾರು ಗುಡಿಗಳಲ್ಲಿ ಪೂಜಾಸ್ಥಾನದಲ್ಲಿರುವುದನ್ನು ಕಾಣಬಹುದು. ಶಿವಲಿಂಗಗಳೆಂದು ವಿಚಿತ್ರ ಕಲ್ಲು ತುಂಡುಗಳನ್ನು ಪ್ರಸಿದ್ಧವಾದ ದೇವಾಲಯ

ಗಳಲ್ಲೇ ಕಾಣುತ್ತೇವೆ. ಜರಿಯು ಕಲ್ಲುಗುಂಡುಗಳನ್ನು ನರಸಿಂಹ, ಶ್ರೀನಿವಾಸ ಎಂದು ಬಗೆದು ಪೂಜೆಮಾಡುವಂಥ ಗುಡಿಗಳು ಕನ್ನಡನಾಡಿನಲ್ಲೇ ನೂರಾರು ಇವೆ. ಹೀಗೆಂದು ಕಂಡ ಕಂಡ ಕಲ್ಲಿಗೆಲ್ಲ ಕೈಮುಗಿದು ಅಡ್ಡಬೀಳುವ ಹೆಡ್ಡತನ ನಮ್ಮ ಜನದ್ದಲ್ಲ. ಎದುರಿಗೆ ಕಾಣುವ ಕಲ್ಲುಬಂಡೆಗಳೆಲ್ಲ ದೇವರೆಂದು ಯಾರೂ ಬಗೆಯುವುದಿಲ್ಲ. ಆವರಣದೊಂದಿಗೆ ನೆಂಟನ್ನು ಪಡೆದುಕೊಂಡ ಕಲ್ಲಿನ ಭಾಗ್ಯ ಬದಲಾಯಿಸುತ್ತದೆ ; ಅದೇ ಪೂಜೆಗೊಳ್ಳುವುದು.

ಆದರೆ ಕಾಲ ಸವೆದಂತೆ ಆವರಣಕ್ಕೆ ಜಾನಪದ ಮಹತ್ವ ಇಳಿಮುಖ ವಾಗುತ್ತ ಬಂದು ಅಲ್ಲಿರುವ ಕಲ್ಲುಗುಂಡೇ ಮುಖ್ಯವಾಗುತ್ತದೆ. ಈಗಲೂ ನಾಡಿನ ಹಲವು ಸುಪ್ರಸಿದ್ಧ ದೇವಾಲಯಗಳಲ್ಲಿ ಗರ್ಭಗುಡಿಯೊಳಗೆ ಪೂಜೆ ಗೊಳ್ಳುವುದು ಶಿಲ್ಪಿಯ ಕೆಲಸವನ್ನು ಅರಿಯದ ಕಲ್ಲುಗುಂಡುಗಳು, ಬಂಡೆಗಳು; ಅವಕ್ಕಿರುವುದು ಸಹಜವಾದ ಆಕಾರ, ಮಾನವನ ಕಲ್ಪನೆಯ ಯಾವೊಂದು ಪ್ರಕಾರವನ್ನೂ ಸೂಚಿಸಲಾರದಂಥವು. ಹಿಮಾಲಯ-ಕೇದಾರದಲ್ಲಿರುವ ಕೇದಾರನಾಥ, ವಾರಾಣಸಿಯ ವಿಶ್ವನಾಥ, ಕಾಮರೂಪದಲ್ಲಿರುವ ಕಾಮಾಖ್ಯಾ ದೇವಿ, ಉಜ್ಜಯಿನಿಯ ಮಹಾಕಾಲ, ಅಹೋಬಲದ ನರಸಿಂಹ, ಕೊಲ್ಲೂರಿನ ಮೂಕಾಂಬಿಕೆ, ಕುಂಭಾಸಿಯ ಗಣಪತಿ, ಮಂಗಳೂರಿನ ಮಂಗಳಾದೇವಿ ಇವೆಲ್ಲ ನಿದರ್ಶನಗಳು. ಶಿವನೆಂದು, ವಿಷ್ಣುವೆಂದು, ದುರ್ಗೆಯೆಂದು, ಸುಬ್ರಹ್ಮಣ್ಯ ನೆಂದು ಪೂಜೆಗೊಳ್ಳುವ ಇಂಥ ಕಲ್ಲುಗುಂಡುಗಳು, ಬಂಡೆಗಳು ನಮ್ಮ ನಾಡಿನಲ್ಲಿ ಸಾವಿರಾರು ಇವೆ.

ಲಿಂಗಪೂಜೆಯ ಉಗಮವನ್ನು ಕೂಡ ಇಲ್ಲಿಯೇ ಕಾಣಬಹುದು. ಮುಂದಿನ ಸಂಪುಟದಲ್ಲಿ ಅದರ ವಿಚಾರ ಪ್ರಸ್ತಾಪಿಸಬೇಕಾಗುತ್ತದೆ. ಅತ್ಯಂತ ಪ್ರಾಚೀನವಾದ ಗುಡಿಗಳೆಂದರೆ ಇಂಥ ಸಹಜವಾದ ಕಲ್ಲು-ಬಂಡೆಗಳ ಮೇಲೆ ಕಟ್ಟಿದವೇ. ಜಾನಪದ ಚೌಕಟ್ಟಿನಲ್ಲಿ ಅರ್ಥಪೂರ್ಣವಾಗಿದ್ದ ಆವರಣವನ್ನೋ ಕಲ್ಲು-ಬಂಡೆಗಳನ್ನೋ ಪ್ರತಿನಿಧಿಸುವುದು ಇವುಗಳ ಉದ್ದೇಶ. ಹಲವು ವೇಳೆ ಇಂದಿನ ಪ್ರಾಕಾರಗಳಿಂದ ನಿರ್ದಿಷ್ಟವಾದ ಆವರಣವೇ ಮೊದಲಿನ ಜಾನಪದ-ಆವರಣ ; ಕಟ್ಟಳೆಗಳನ್ನು ನಡೆಸಲು ಸಿದ್ಧವಾದ ತಾಣ, ಮತ್ತು ಈಗಿನ ಗರ್ಭ ಗುಡಿ ಮೊದಲು ಆ ಆವರಣದಲ್ಲಿ ಮರವೋ ಕಲ್ಲುಗುಂಡೋ ಇದ್ದ ಸ್ಥಳವೇ ಅಥವಾ ಕೊಟ್ಟಿಗೆ. ಈಗಿನ ಮುಖಮಂಡಪ ಮೊದಲು ಕೊಟ್ಟಿಗೆಯ ಮುಂಭಾಗ ದಲ್ಲಿ ಹಾಕುತ್ತಿದ್ದ ಚಪ್ಪರದ ನೆನಪನ್ನು ತರುವಂಥದು.

ನಮ್ಮ ನಾಡಿನಲ್ಲೂ, (ಅದರಲ್ಲೂ ಒಡಿಸ್ಸ, ಅಸಾಮ, ತಮಿಳುನಾಡು

ಮತ್ತು ಪಶ್ಚಿಮ ಕರಾವಳಿಯತ್ತ) ಹಲವು ಗುಡಿಗಳ ಗರ್ಭಗುಡಿಯೊಳಗೆ ಕಂಬದಂತೆ ನಿಂತ ಮರದ ಕೊರಡನ್ನೋ ಕಲ್ಲಿನ ಹಲಗೆಯನ್ನೋ ಕಾಣುತ್ತೇವೆ. ಅವೇ ಈಗ ದೇವತಾಪ್ರತೀಕಗಳೆಂದು ಪೂಜೆಗೊಳ್ಳುವುವು. ಆದರೆ ಅವುಗಳಲ್ಲಿ ಕೆಲವು ಪ್ರತೀಕಗಳ ಹೆಸರನ್ನು ಗಮನಿಸಿದರೆ ಮೊದಲಿಗೆ ಅವು ಪಶುಬಲಿಯನ್ನು ಕೊಡಲೆಂದು ನೆಟ್ಟವು ಎಂಬ ಧ್ವನಿ ಮೂಡುತ್ತದೆ. ಪ್ರಾಚೀನ ಧಾರ್ಮಿಕ ಕಟ್ಟಳೆಗಳಲ್ಲಿ ಎಮ್ಮೆ, ಕುರಿ, ಕೋಣ, ಕೋಳಿ ಮೊದಲಾದ ಪ್ರಾಣಿಗಳನ್ನು ದೈವದ ಪ್ರೀತಿಗೆಂದು ಕೊಲ್ಲುವ ವಿಧಿ ಸಾಮಾನ್ಯವಾದುದು. ದೈವಕ್ಕೆ ಅದು ಸಲ್ಲಬೇಕೆಂದರೆ ದೈವದ ಸನ್ನಿಧಾನವನ್ನೊಳಗೊಂಡ ಕಲ್ಲಿನ ಮೇಲೆ ಈ ಪ್ರಾಣಿಗಳನ್ನು ಕಡಿಯಬೇಕು ; ಇಲ್ಲವೇ ಕೊಂದ ಪ್ರಾಣಿಯ ರಕ್ತ-ಮಾಂಸಗಳನ್ನು ಈ ಕಲ್ಲಿನ ಮೇಲೆ ಇರಿಸಬೇಕು.

ಕಟ್ಟಳೆ ನಡೆಯುವಾಗ ಇಂಥ ಕಲ್ಲುಕಂಬಕ್ಕೆ ವಿಶೇಷ ಆದರ. ಆದರೆ ಉಳಿದ ವೇಳೆ ಆ ಕಲ್ಲನ್ನು ಮುಟ್ಟಲು ಜನ ಹಿಂಜರಿಯುವರು. ಇದಕ್ಕೆ ಕಾರಣವನ್ನು ಹುಡುಕಲು ದೂರ ಹೋಗಬೇಕಾದುದಿಲ್ಲ. ದೈವದ ವಿಚಾರವಾಗಿ ಅಂಜಿಕೆ ಸಹಜವೇ. ಇಂಥ ಬಲಿಗಲ್ಲಿನ ಅಹಿತವಾದ ಪ್ರಭಾವವನ್ನು ಅಡ್ಡಗಟ್ಟಲು, ಜನ ಅದನ್ನು ಅರಿಯದೆ ಮುಟ್ಟದಿರಲು ಅದರ ಸುತ್ತ ಬೇಲಿಯನ್ನು ಕಟ್ಟುವುದು ಹಿಂದಿನ ಪದ್ಧತಿಯೇ. ಗರ್ಭಗುಡಿಗೆ ಇದೇ ಮೂಲ. ಪ್ರಾಚೀನವಾದ ಇಂಥ ಬಲಿಕಲ್ಲಿನ ಮೇಲೆ ಮುಂದಿನೊಂದು ಯುಗದಲ್ಲಿ ಗುಡಿಯನ್ನು ಕಟ್ಟಿ, ಅದರ ಪ್ರಭಾವವನ್ನು ಕಟ್ಟಡದೊಳಗೆ ಅಡಗಿಸಿದಾಗ, ಪ್ರಾಣಿಗಳನ್ನು ಬಲಿಕೊಡಲು ಇನ್ನೊಂದು ಇಂಥದೇ ಕಲ್ಲುಕಂಬವನ್ನು ಏರ್ಪಡಿಸಿಕೊಳ್ಳಬೇಕಾಯಿತು. ಈಗ ಗರ್ಭಗುಡಿಯೆದುರು ಕಾಣುವ ಬಲಿಪೀಠ ಇದೇ. ಬಲಿಪೀಠವು ಗರ್ಭಗುಡಿಯೊಳಗಣ ದೇವತೆಯ ಪ್ರತಿನಿಧಿಯೆಂದು ಆಗಮದ ಒಕ್ಕಣೆಯಿರುವುದನ್ನು ಗಮನಿಸಬೇಕು. ಈಗಲೂ ಉತ್ತರ ಮತ್ತು ದಕ್ಷಿಣ ದೇಶಗಳಲ್ಲಿ ಈ ಬಲಿಕಲ್ಲಿನ ಮೇಲೆ ತೆಂಗಿನಕಾಯನ್ನು ಒಡೆದು ಎಡೆಯನ್ನಿರಿಸಿ ಹೋಗುವ ವಾಡಿಕೆಯಿದೆ.

ಕಾಲಕ್ರಮದಲ್ಲಿ ಗುಡಿಯೊಳಗಿರುವ ಕಲ್ಲುಕಂಬ ಅಥವಾ ಮರದ ಕೊರಡನ್ನು ಶಿಲ್ಪಿಯಿಂದ ಕಡೆಯಿಸುವ ಪದ್ಧತಿ ಮೂಡಿಬಂದಿತು. ಪೂಜೆಗೊಳ್ಳುವ ಪದಾರ್ಥವು ಮನುಷ್ಯನಿಗೆ ಪರಿಚಿತವಾದ, ಪ್ರೀತಿಯನ್ನುಂಟುಮಾಡುವಂಥ ಆಕಾರವನ್ನು ತಳೆದಿದ್ದರೆ ಭಕ್ತಿ ಹೆಚ್ಚುವುದು ಸಹಜವಷ್ಟೆ ? ತುಂಬ ಪ್ರಾಚೀನವೆನಿಸಿದ ಶಿಲ್ಪಗಳಲ್ಲಿ ಶಿಲ್ಪಿಯ ಕೆಲಸ ತುಂಬ ಹಗುರಾಗಿರುತ್ತದೆ. ಹಿಂದಿನಿಂದ ಪೂಜೆಗೊಳ್ಳುತ್ತ ಬಂದಿರುವ ಕಲ್ಲುಬಂಡೆ ಅಥವಾ ಮರದ



ಜಗನ್ನಾಥನ ಮರದ ಮೂರ್ತಿ

ದಿಮ್ಮಿಯ ಮೇಲೆ ಸ್ಥೂಲವಾದ ಆಕಾರವನ್ನಷ್ಟೇ ಕಾಣಿಸಿ ವಿಗ್ರಹವನ್ನು ಧ್ವನಿಸುವುದೇ ವಾಡಿಕೆ. ಮೊದಲಿನ ಶಿಲ್ಪ ಸಾಂಕೇತಿಕವಾಗಿದ್ದುದೂ ಉಂಟು. ಶಿಲ್ಪಿಯು ಕೊಡಬಹುದಾದ ಆಕಾರವು ಹಲವಾರು ವಿವರಗಳನ್ನವಲಂಬಿಸಿರುತ್ತದೆ; ಕಲ್ಲಿನ ಅಥವಾ ಮರದ ಸಹಜ ಸ್ವಭಾವವು ಮುಖ್ಯವಾದ ವಿವರ. ಅದರ ಅಳತೆ, ಎತ್ತರ, ಹೊರಮೈ ಗೆರೆಗಳು ಮುಂತಾದುವೂ ಶಿಲ್ಪಿಯ ಕೆಲಸಕ್ಕೆ ಇತಿಮಿತಿಗಳನ್ನು ಒದಗಿಸುತ್ತವೆ. ಹಲವಾರು ದೇವಾಲಯಗಳಲ್ಲಿ ಹೊರಭಾಗವೆಲ್ಲ ತುಂಬ ಕಲಾತ್ಮಕವಾಗಿದ್ದರೂ ಗರ್ಭಗುಡಿಯ ದೇವರು ಮಾತ್ರ ಒರಟಾಗಿರುವುದು ಈ ಕಾರಣದಿಂದಲೇ. ಹಲವಾರು ಮೂರ್ತಿಗಳು ಅರ್ಧಮರ್ಧ ಶಿಲ್ಪಗಳಷ್ಟೆ.

ಜಾನಪದ ಚೌಕಟ್ಟಿನಲ್ಲಿ ಹುಟ್ಟಿಕೊಂಡು ಉಳಿದುಬಂದ ಕಲ್ಲುಬಂಡೆ

ಅಥವಾ ಮರದ ಕೊರಡು ಸಭ್ಯತೆಯ ಸುಳಿಯಲ್ಲಿ ಸಿಕ್ಕಾಗ ಇಂಥ ಶಿಲ್ಪಗಳು ಸಿದ್ಧವಾಗುತ್ತವೆ. ಮೂಲಸಾಮಗ್ರಿಯೇನೋ ಪಳೆಯುಳಿಕೆಯೇ. ಅದರ ಮೇಲೆ ಮೈದಳೆದು ಬಂದ ಗುಡಿ ಬೇಕಾದಂತೆ ಸೊಗಸಾಗಿರಬಹುದು, ಕಾಲ ಕಾಲಕ್ಕೆ ಗುಡಿಯ ವಿಸ್ತಾರವೂ ಅಲಂಕರಣವೂ ಬೆಳೆಯಬಹುದು, ಆವರಣದಲ್ಲಿ ಹೊಸ ಬಿಂಬಗಳು ಮೂಡಿಕೊಂಡುಬರಬಹುದು. ಆದರೆ ಮೂಲಮೂರ್ತಿ ಹೆಚ್ಚು ಮಾರ್ಪಾಟಿಲ್ಲದೆ ಉಳಿದುಕೊಳ್ಳುತ್ತದೆ. ಮೊದಲು ಪೂಜಾ ಮೂರ್ತಿ ಯಿದ್ದು ಅದರ ಮೇಲೆ ಗುಡಿಯು ಎದ್ದುಕೊಳ್ಳುವುದೇ ಹಳೆಯ ವಾಡಿಕೆ. ಈಚೆಗೆ ಗುಡಿಯನ್ನು ಮೊದಲು ಕಟ್ಟಿ ಅನಂತರ ಮೂರ್ತಿಯನ್ನು ಅದರೊಳಗೆ ಸೇರಿಸುತ್ತಾರೆ. ಹಾಗೆ ಮಾಡುವಾಗ ಗುಡಿಯಂತೆ ಮೂರ್ತಿಯೂ ಸುಂದರ ವಾಗಿ, ಕಲಾತ್ಮಕವಾಗಿ ಇರುವುದು ಸಹಜ.

ಮೂಲಸಾಮಗ್ರಿಯನ್ನು ಪೂಜಾಸ್ಥಾನದಲ್ಲಿ ಇರಿಸಿಕೊಂಡ ಜನರು ಮರೆ ಯಾದಮೇಲೆ ಆ ಸಾಮಗ್ರಿಗೆ ಪರಿಚಿತವಾದ ಅಥವಾ ಆಗಮಶುದ್ಧವಾದ ಆಕಾರವೊಂದನ್ನು ಶಿಲ್ಪಿಯು ಒದಗಿಸುವಾಗ ಸಾಮಗ್ರಿಯ ಸಹಜ ಸ್ವರೂಪ, ಸ್ವಭಾವ, ಪ್ರಮಾಣಗಳಷ್ಟೇ ಗಣನೀಯವಾಗಿರುವುದಿಲ್ಲ. ಮುಂದೆ ಆ ಸ್ಥಳ ದಲ್ಲಿ ಸೇರಿಕೊಂಡ ಜನರ ಧಾರ್ಮಿಕ ಒಲುವು ಕೂಡ ಕೆಲಸ ಮಾಡುತ್ತದೆ. ಶಿಲ್ಪಿಯ ಜಾಣ್ಮೆ ಮತ್ತು ಮನೋವೃತ್ತಿಗಳೂ ಪ್ರಸಕ್ತವಾದ ವಿವರಗಳೇ. ಮುಂದಿನ ಯುಗದಲ್ಲಿ ದೇವತಾಮೂರ್ತಿಗಳು ಇರಬೇಕಾದ ವಿಚಾರದಲ್ಲಿ ಆಗಮದ ವಿಧಿಗಳು ಮೈದಳೆದುವಷ್ಟೆ. ವಿಗ್ರಹದ ಪ್ರಮಾಣ, ಸ್ವರೂಪ, ಲಕ್ಷಣಗಳನ್ನು ಕುರಿತು ಇರುವ ವಿಧಿಗಳನ್ನು ಶಿಲ್ಪಿಗಳು ಅರಿತುಕೊಂಡು ತಮ್ಮ ಕೃತಿಗಳಲ್ಲಿ ಅವನ್ನು ಅಳವಡಿಸತೊಡಗಿದರು. ಆದರೆ ತುಂಬ ಪ್ರಾಚೀನವಾದ ಗುಡಿಗಳಲ್ಲಿರುವ ಪೂಜಾಮೂರ್ತಿಗಳು ಈ ಆಗಮದ ವಿಧಿಗಳನ್ನು ಅನುಸರಿಸಿಲ್ಲ ದಿರುವುದು ಆಶ್ಚರ್ಯವಲ್ಲ. ಹೊಸ ಗುಡಿಗಳಿಗೂ ಹಳೆಯ ಗುಡಿಗಳಿಗೂ ಇದು ಮುಖ್ಯವಾದ ವ್ಯತ್ಯಾಸ.

ನಾಡಿನ ಹಲವು ದೇವಾಲಯಗಳ ಧಾರ್ಮಿಕ ಒಲುವು ಬದಲಾಗುತ್ತ ಬಂದಿರುವುದಿದೆ. ಇತಿಹಾಸದ ನಡಾವಳಿ ಜನರ ಧರ್ಮವನ್ನು ಬದಲಿಸಿದಂತೆ, ಅವರ ನೆರೆಯಲ್ಲಿರುವ ಗುಡಿಯ ಆಕಾರವೂ ಆಚಾರವೂ ಮಾರ್ಪಡುವುದು ಸಹಜವೇ. ಗರ್ಭಗುಡಿಯೊಳಗಣ ಮೂರ್ತಿ ಮೊದಲಿಗೆ ಜಾನಪದನೆಲೆಯದೇ ಆಗಿದ್ದರೂ ಮುಂದೆ ಬೌದ್ಧ, ಜೈನ, ಶೈವ, ವೈಷ್ಣವ, ಶಾಕ್ತ ಮೊದಲಾದ ಪಂಥಗಳಿಗೆ ಪಕ್ಕಾಗುವಂತಾಯಿತು. ಜಗನ್ನಾಥ–ಪುರಿಯ ದೇವರು ಈಗ

ವಿಷ್ಣು ; ಆದರೆ ಅದರ ಬೌದ್ಧ ಹಿನ್ನೆಲೆಯನ್ನಾಗಲೀ, ಶಾಕ್ತಪ್ರಭಾವವನ್ನಾಗಲೀ ಮರೆಯಲಾಗಿಲ್ಲ ; ಮೊದಲಿಗಂತೂ ಅದು ಜಾನಪದ ದೈವವೇ. ಬೌದ್ಧರ ತಾರಾಭಗವತಿ, ಮಂಗಳಾದೇವಿ, ಕಾಮಾಕ್ಷಿದೇವಿಯರಾದ ನಿದರ್ಶನಗಳಿಲ್ಲವೆ ? ಜೈನರ ಯಕ್ಷಿಣಿ ಪದ್ಮಾವತಿಯು ಲಕ್ಷ್ಮಿಯಾಗಲಿಲ್ಲವೆ ? ಜೈನರ ಬಸದಿಗಳು ಶಿವದೇವಾಲಯಗಳಾದ ಉದಾಹರಣೆಗಳಿವೆ. ಶೈವ–ವೈಷ್ಣವ ಪಂಥಗಳಲ್ಲಂತೂ ಈ ಬಗೆಯ ವಿನಿಮಯ ನಡೆದೇ ಇದೆ. ಧಾರ್ಮಿಕ ಸ್ವರೂಪ ಏನೇ ಇರಲಿ ;



ಮುಖವಾಡಗಳ ಅರ್ಚನೆ

ಎಷ್ಟೇ ಬದಲಾಗಲಿ ಮೂಲಮೂರ್ತಿಯ ಪಾವಿತ್ರ್ಯದ ಬಗ್ಗೆಯಂತೂ ಶ್ರದ್ಧೆ ಕದಲುವುದಿಲ್ಲ ಎಂಬುದು ಗಮನಾರ್ಹವಾದುದು. ಜಾನಪದ ಚೌಕಟ್ಟಿನ ಹಿಡಿತ ಅಷ್ಟು ಬಲವಾದುದು.

ಗರ್ಭಗುಡಿಯಲ್ಲಿ ಅಥವಾ ಪೂಜಾಸ್ಥಾನದಲ್ಲಿ ಇರುವ ಮೂಲ ಬಿಂಬದ ರೂಪ ಏನೇ ಇದ್ದರೂ ಅದನ್ನು ಮುಖವಾಡದಿಂದ ಅಥವಾ ಕವಚದಿಂದ ಮುಚ್ಚುವುದು ಹಳೆಯ ಸಂಪ್ರದಾಯವೇ. ಕಲ್ಲು ಗುಂಡೇ ಇರಲಿ, ಅದರ ಮೇಲೆ ನರಸಿಂಹನ ಮುಖವಾಡವಿಟ್ಟರೆ ಅದು ವೈಷ್ಣವವಾಯಿತು. ನಡೆದು ಕೊಳ್ಳುವ ಭಕ್ತರಿಗೆ ಹಿತವಾಗುವಂತೆ, ಅವರ ಶ್ರದ್ಧೆಗೆ ಪಾತ್ರವಾಗುವಂತೆ ಮುಖವಾಡಗಳೂ ಕವಚಗಳೂ ಇರುತ್ತವೆ. ಮುಖವಾಡವನ್ನು ಬಳಸುವುದೂ ಜಾನಪದ ಸಂಪ್ರದಾಯವೇ. ದೈವದ ಆವೇಶವನ್ನು ತಳೆದು ಹಳೆಯ ಕಟ್ಟಳೆ ಗಳಲ್ಲಿ ಕುಣಿಯುವ ಜನ ದೈವವನ್ನು ಸಂಕೇತಿಸುವ ಮುಖವಾಡವನ್ನು ತೊಟ್ಟು ಕುಣಿದರೆ ದೈವಕ್ಕೆ ಪ್ರೀತಿಯಾಗುವುದೆಂದು ಜಾನಪದ ಎಣಿಕೆ. ದೈವದ ಪ್ರೀತಿಯಿರಲಿ, ಕಟ್ಟಳೆಯಲ್ಲಿ ಪಾಲ್ಗೊಳ್ಳುವ ಜನರ ಅರಿವಿಗಂತೂ ಮುಖವಾಡ ವೊಂದು ಊರುಗೋಲಾಗುತ್ತದೆ. ದೈವದ ನಿರ್ದೇಶನ ಮುಖವಾಡದಿಂದ, ಉಡುಪಿನಿಂದ, ಆಯುಧದಿಂದ ಸ್ಪಷ್ಟವಾಗುತ್ತದೆ.

ಜಾನಪದ ಕಟ್ಟಳೆಗಳಲ್ಲಿ ಧಾರ್ಮಿಕನೃತ್ಯಗಳಂತೆ ನಾಟಕಗಳೂ ಹೆಚ್ಚಿನ ಪಾತ್ರವನ್ನು ವಹಿಸುತ್ತಿದ್ದುವು. ಪ್ರಾಚೀನ ನಾಟಕ ಧಾರ್ಮಿಕವಿಧಿಯೇ. ನಮ್ಮ ನಾಡಲ್ಲದೆ,ಗ್ರೀಸ್ ಜಪಾನ್ ಮುಂತಾದ ದೇಶಗಳಲ್ಲೂ ನಾಟಕ ಪರಂಪರೆ ಧಾರ್ಮಿಕ ಹಿನ್ನೆಲೆಯನ್ನೇ ಹೊಂದಿದೆ. ಯೂರೋಪಿನ ನಾಟಕವೂ ಕ್ರೈಸ್ತ ಮತ್ತು ಪೇಗನ್ ಧರ್ಮಗಳ ಮಡಿಲಿಂದಲೇ ಎದ್ದುದು.ಗ್ರೀಸಿನ ಡಯೋನಿಸಿಕ್ ಪಂಥದವರು ಆರಾಧನೆ ಮಾಡುವಾಗ ಹಲವಾರು ಪ್ರಾಣಿಗಳ ಮುಖವಾಡ ಗಳನ್ನು ಧರಿಸಿ, ಮೆರವಣಿಗೆಯಲ್ಲಿ ಕುಣಿಯುತ್ತ, ನಾಟಕದ ಮಾತುಗಳನ್ನು ಆಡುತ್ತ, ಹಾಡುತ್ತ ಬರುವುದು ವಾಡಿಕೆಯಾಗಿದ್ದಿತು. ಪ್ರಾಣಿಯ ಮುಖ ವಾಡವು ಆ ಪ್ರಾಣಿಯ ಸ್ವಭಾವವನ್ನೂ ಬಲವನ್ನೂ ಪ್ರಭಾವವನ್ನೂ ಸಂಕೇತಿ ಸುವುದು ; ದೇವತೆಯು ಪ್ರಾಣಿಯ ರೂಪವನ್ನು ತಳೆದು ಕಾಣಿಸಿಕೊಳ್ಳುವು ದೆಂಬ ಕಲ್ಪನೆಯೂ ಪುರಾತನವಾದುದು. ಆರಾಧನೆಯ ಸಂದರ್ಭದಲ್ಲಿ, ಆವೇಶ ಗೊಂಡು ಕುಣಿಯುತ್ತಿರುವ ಪಾತ್ರಿಯ ಮೈಯನ್ನೂ ಮನಸ್ಸನ್ನೂ ದೈವ ವೊಂದು ಅಥವಾ ಪ್ರಾಣಿಯೊಂದು ವಶಮಾಡಿಕೊಂಡಿದೆಯೆಂಬ ನಂಬಿಕೆ ಎಲ್ಲ ದೇಶದ ಹಳೆಯ ಜನರಲ್ಲಿಯೂ ಇದ್ದಿತು. ಮುಖವಾಡದ ತಾತ್ಪರ್ಯ ಇದು.

ಮೆಕ್ಸಿಕೋ ಜನರ ಪ್ರೇತ ಮುಖವಾಡ



ನೈಜೀರಿಯದ ಇಬೋ ಬುಡಕಟ್ಟಿನ
ಪ್ರೇತ ಮುಖವಾಡ



ಪಶ್ಚಿಮ ಆಫ್ರಿಕದ ಮುಖವಾಡಗಳು–ಪ್ರೇತಗಳು ಇಲ್ಲಿಯೇ ಇರುವುದೆಂದು ನಂಬಿಕೆ

ಮುಖವಾಡದ ಪ್ರಯೋಜನ ಇಬ್ಬಗೆಯದು. ಪಾತ್ರಿಯ ಸಹಜಸಿದ್ಧ ವಾದ ಮುಖವನ್ನು ಮುಚ್ಚುವುದೊಂದು ; ದೈವದ ಮುಖವನ್ನು ಕಾಣಿಸುವು ದಿನ್ನೊಂದು. ಆರಾಧನೆಯ ಅವಸರದಲ್ಲಿ ಪಾತ್ರಿಯ ಸಹಜ ಸ್ವಭಾವವು ಮರೆ ಯಾಗಿ, ದೈವದ ಆವೇಶ ಅವನಲ್ಲಿ ಒದಗುವುದೆಂದು ತಾನೆ ನಂಬಿಕೆ ? ಆರಾಧನೆ ಮುಗಿಯುವವರೆಗೆ ಅವನು ಸಾಮಾನ್ಯ ಮನುಷ್ಯನಲ್ಲ ; ದೈವವೇ ಅಥವಾ ದೈವದ ಪ್ರತಿನಿಧಿಯೇ. ಅವನ ಮಾತು ದೈವದ ನುಡಿಕಟ್ಟೇ. ಆಗ ಅವನು ಕೊಡುವ ಪ್ರಸಾದ ದೈವದಿಂದಲೇ ಸಂದುದು.ಈ ವಿಶೇಷವಾದ ಸಂಬಂಧವನ್ನು ಸೂಚಿಸುವುದು ಮುಖವಾಡ. ಧರ್ಮದ ಕೆಲಸವನ್ನು ದಿನವೂ ನಿರ್ವಹಿಸುವ ಮಾಂತ್ರಿಕರು, ಪುರೋಹಿತರು ಹೀಗೆ ಮುಖವಾಡಗಳನ್ನು ಧರಿಸುವುದು ಹಳೆಯ ಹಲವು ಜನಾಂಗಗಳಲ್ಲಿ ಇಂದಿಗೂ ಬಳಕೆಯಲ್ಲಿದೆ. ಆಫ್ರಿಕ, ಆಸ್ಟ್ರೇಲಿಯ, ಪೆಸಿಫಿಕ್ ದ್ವೀಪಗಳಲ್ಲಿ ಈ ಪದ್ಧತಿ ಇಂದಿಗೂ ಉಳಿದುಬಂದಿದೆ. ಟಿಬೆಟ್, ಶ್ರೀಲಂಕ, ಬ್ರಿಟಿಷ್ ಕೊಲಂಬಿಯ, ಮಧ್ಯ ಆಫ್ರಿಕ, ರೆಡ್ ಇಂಡಿಯನ್ ಬುಡಕಟ್ಟುಗಳಲ್ಲಿ ಮುಖವಾಡಗಳ ಬಳಕೆ ತುಂಬ ಮುಖ್ಯವಾದುದು. ಪ್ರಾಚೀನ ಈಜಿಪ್ತ್ ಮತ್ತು ಗ್ರೀಸ್‌ಗಳಲ್ಲಿ ರಾಜ-ರಾಣಿಯರ ಹೆಣಗಳನ್ನು ಒಪ್ಪಮಾಡು ವಾಗಲೂ ಮುಖವಾಡಗಳನ್ನು ತೊಡಿಸುತ್ತಿದ್ದುದುಂಟು.

ನಮ್ಮ ದೇಶದಲ್ಲಿ ಮುಖವಾಡಗಳ ಬಳಕೆ ತುಂಬ ಪುರಾತನವಾದುದೇ ; ಆದರೆ ಇಂದಿಗೂ ಉಳಿದುಬಂದಿದೆ. ಬೇರೆಯ ಮುಖವನ್ನು ಬಳಸುವುದಲ್ಲದೆ, ಮುಖವನ್ನು ಮುಚ್ಚುವಂಥ ಬಣ್ಣಗಳನ್ನು ಬಳಿದುಕೊಳ್ಳುವುದೂ ಉಂಟು. ಅಂಡಮಾನ್ ದ್ವೀಪಗಳ ಔಂಗ್ ಜನರು, ಮಧ್ಯಪ್ರದೇಶದ ಕೋಂಡ್ ಆದಿವಾಸಿಗಳು ಮೊದಲಾದ ಬುಡಕಟ್ಟುಗಳಲ್ಲಿ ಇದು ಹೆಚ್ಚು. ಸಭ್ಯತೆಯ ಸಂಪರ್ಕವನ್ನು ಪಡೆದುಕೊಂಡು, ಸಂಸ್ಕೃತಿಯ ಕಾಲಾಂತರದ ಪ್ರಭಾವವನ್ನು ಅರಗಿಸಿಕೊಂಡ ಕಥಕಳಿ ನೃತ್ಯದಲ್ಲಿಯೂ ಇದರ ಪಳೆಯುಳಿಕೆಯನ್ನು ಕಾಣ ಬಹುದು. ಭುಯ್ಯ, ಮರಿಯ, ಬೈಗ ಜನಾಂಗಗಳವರು ಮರದಿಂದ ಮಾಡಿದ ಮುಖವಾಡಗಳನ್ನು ತೊಟ್ಟೇ ಬೇಟೆಗೆ ಹೊರಡುವುದು ; ಹಲವು ಮಾಂತ್ರಿಕ ವಿಧಿಗಳಲ್ಲೂ (ದೆವ್ವ ಬಿಡಿಸುವುದು, ರೋಗದ ಮಾರಿಯನ್ನು ಓಡಿಸುವುದು, ಭೀತಿಯ ಪಿಡುಗನ್ನು ಅಡಗಿಸುವುದು, ಹರೆಯದ ಆಳನ್ನು ಗುಂಪಿನೊಳಗೆ ಕೂಡಿಸಿಕೊಳ್ಳುವುದು ಇತ್ಯಾದಿ) ಇದೇ ಬಗೆಯ ಮುಖವಾಡಗಳನ್ನು ಧರಿಸು ತ್ತಾರೆ. ಹಿಮಾಲಯ ಬೆಟ್ಟಸಾಲಿನ ಉದ್ದಕ್ಕೂ ಬೇರೆ ಬೇರೆ ಸಂದರ್ಭಗಳಿ ಗೆಂದು ಬಗೆಬಗೆಯ ಮುಖವಾಡಗಳನ್ನು ಬಳಸುವುದಿದೆ ; ಮುಖವಾಡಗಳನ್ನು

ಆಂಧ್ರಪ್ರದೇಶದಲ್ಲಿ ಜಾನಪದ ನೃತ್ಯದಲ್ಲಿ ನರಸಿಂಹನ ಮುಖವಾಡ

ಸಿದ್ಧಪಡಿಸುವುದು ಒಂದು ಉದ್ಯಮವೇ ಆಗಿ ಬೆಳೆದಿದೆ. ಧಾರ್ಮಿಕನೃತ್ಯವೆಂದರೆ ಮುಖವಾಡಗಳು ಅನಿವಾರ್ಯವೆಂಬ ಕಲ್ಪನೆ ಈ ದೇಶದ ಹಲವು ಜನಾಂಗಗಳಲ್ಲಿ ಇನ್ನೂ ಇದೆ. ಪೌರಾಣಿಕ ರೂಪಕಗಳನ್ನು ನಾಟಕಗಳಲ್ಲಿ ಆಡಿ ತೋರಿಸುವಾಗಲೂ ಮುಖವಾಡಗಳ ಬಳಕೆಯಿದೆ.

ಧಾರ್ಮಿಕ ಮುಖವಾಡಗಳೆಲ್ಲ ಬಹುಮಟ್ಟಿಗೆ ಪ್ರಾಣಿಗಳವು; ಆದರೆ ಮಾನವಸ್ವಭಾವವನ್ನು ಅದರಲ್ಲಿ ಅಧ್ಯಾರೋಪಮಾಡಿರುತ್ತಾರೆ. ತುಳುನಾಡು, ಕೇರಳ ಪ್ರಾಂತ್ಯಗಳಲ್ಲಿ ಧಾರ್ಮಿಕಸಮಾರಂಭಗಳಲ್ಲಿ ತಪ್ಪದೆ ತೊಟ್ಟುಕೊಳ್ಳುವ



ಬಸ್ತಾರ್ ಪ್ರದೇಶದ ಜಾನಪದ ನೃತ್ಯದಲ್ಲಿ ಬಳಸುವ ಮುಖವಾಡ

ಮುಖವಾಡಗಳಲ್ಲಿ ಹಲವು ಪ್ರಾಣಿಗಳವೇ—ಹಂದಿ (ಪಂಜುರ್ಲಿ), ಹುಲಿ (ಪಿಲಿಭೂತ), ಕುದುರೆ (ಜರಂದಾಯೆ), ಕೋಣ (ನಂದಿಕೋಣ), ಎಮ್ಮೆ (ಮಹಿಸಂದಾಯೆ), ಹಾವು (ನಾಗಕನ್ಯೆ), ಕೋತಿ (ಬಾಲಿತೆಯಂ) ಇತ್ಯಾದಿ. ಈ ಪ್ರಾಣಿಗಳನ್ನು ದೈವಗಳ ನೆಲೆಗೇರಿಸಿ ಅವುಗಳ ಮುಖವಾಡಗಳನ್ನು ಗುಡಿಗಳಲ್ಲಿಟ್ಟು ಪೂಜಿಸುತ್ತಾರೆ.

ಪ್ರಾಣಿಗಳ ಮುಖವಾಡಗಳನ್ನು ಧಾರ್ಮಿಕ ಕುಣಿತಗಳಲ್ಲಿ ನಾಟಕಗಳಲ್ಲಿ ಬಳಸುವುದಲ್ಲದೆ, ಮುಖವಾಡಗಳನ್ನು ಗುಡಿಗಳಲ್ಲಿಟ್ಟು ಪೂಜಿಸುವುದಲ್ಲದೆ, ಪ್ರಾಣಿಗಳ ಪೂರ್ಣಾಕೃತಿಯ ಪುತ್ಥಳಿಗಳನ್ನೂ ಮಾಡಿಟ್ಟುಕೊಂಡು ಧಾರ್ಮಿಕವಿಧಿಗಳಲ್ಲಿ ಬಳಸುವುದು ತುಂಬ ಹಿಂದಿನ ಪದ್ಧತಿ. ಹಲವಾರು



ದಕ್ಷಿಣಕನ್ನಡ ಜಿಲ್ಲೆಯ ಮಹಿಸಂದಾಯ ಮುಖವಾಡ



ನಂದಿಗೋಣ ಭೂತ ; ಐದು ತಲೆಗಳದ್ದು

ದಕ್ಷಿಣಕನ್ನಡ ಜಿಲ್ಲೆಯ ಜುಮಾದಿ ದೈವ

ಹಳೆಯಕಾಲದ ಗುಡಿಗಳ ಪೂಜಾಸ್ಥಾನದಲ್ಲಿ ಪ್ರಾಣಿಗಳ ಪ್ರತಿಕೃತಿಗಳೇ ಇರುತ್ತವೆ. ಪ್ರಬಲವಾದ ದೈವಗಳು ಈ ಪ್ರಾಣಿಗಳನ್ನೇರಿ ಬರುವುವೆಂದು ನಂಬಿಕೆ. ದೈವಗಳಿಗೆ ತಮ್ಮದೆಂಬ ಆಕಾರವಿಲ್ಲ, ಜನರು ಗುರುತಿಸಬಹುದಾದ ರೂಪವಿಲ್ಲ. ಆದರೆ ಅವುಗಳ ವಾಹನವಾದ ಪ್ರಾಣಿಗಳು ಕಣ್ಣಿಗೆ ಕಾಣಿಸಿಕೊಳ್ಳುತ್ತವೆ. ದೈವವನ್ನು ಹೊತ್ತ ಪ್ರಾಣಿ ದೈವದ ಸ್ವಭಾವದಲ್ಲಿ ಪಾಲ್ಗೊಳ್ಳುವುದಲ್ಲವೆ ? ಈ ಪ್ರಾಣಿಯು ಜನಾಂಗಕ್ಕೆ ಸೇರಿದ ಹರವಿನಲ್ಲಿ ಓಡಾಡುತ್ತ, ಜನಾಂಗಕ್ಕೆ ಸೇರಿದ ಜನರ ಯೋಗಕ್ಷೇಮವನ್ನು ನೋಡಿಕೊಳ್ಳುತ್ತ, ಆತಂಕದಲ್ಲಿ ಅವರನ್ನೆಚ್ಚರಿಸುತ್ತ ದೈವವನ್ನು ಪ್ರತಿನಿಧಿಸುತ್ತದೆ. ಪ್ರಾಣಿಯನ್ನು ನೋಡಿದಾಗ ಅದರ ಬೆನ್ನೇರಿ ಕುಳಿತು ಕಾಣದಿರುವ ದೈವದ ಸೂಚನೆ ಜನರಿಗೆ ಆಗುವುದು ಸಹಜವೇ. ದೈವದ ವಾಹನವೆಂದು, ಪ್ರತೀಕವೆಂದು ಪ್ರಾಣಿಯೂ ಆದರಕ್ಕೆ ಪಾತ್ರವಾಗುತ್ತದೆ. ಆ ಪ್ರಾಣಿಯಲ್ಲಿಯೂ ದೈವದ ಗುಣಧರ್ಮಗಳನ್ನೇ ಕಾಣುತ್ತಾರೆ ಜನರು.

ಪಂಜುರ್ಲಿ ಭೂತ

ಆದರೆ ಜೀವಂತವಾಗಿ ಅಡ್ಡಾಡುತ್ತಿರುವ ಪ್ರಾಣಿಗಳಿಗೆ ಪೂಜೆ ಸಲ್ಲುವುದೆಂದಲ್ಲ. ಪೂಜೆ ಸಲ್ಲುವುದು ಪ್ರಾಣಿಗಳ ಪುತ್ಥಳಿಗಳಿಗಷ್ಟೇ. ಪುತ್ಥಳಿಗಳಲ್ಲೇ ದೈವದ ಆವೇಶ ಒದಗುವುದು, ದೈವದ ಹಿರಿಮೆ ಕಾಣಿಸಿಕೊಳ್ಳುವುದು. ಪವಿತ್ರವೆಂದು ಪೂಜೆಗೊಳ್ಳುವ ಮರಗಳು ಆವರಣದೊಳಗಿರುವುವೆಂದು ಹೇಳಿದೆವಲ್ಲವೆ? ಹಾಗೆಯೇ, ಜನಾಂಗದ ಧಾರ್ಮಿಕ ಆವರಣದೊಳಗೆ ನಡೆಯುವ ಕಟ್ಟಳೆಗಳಲ್ಲಿ ಬಳಸುವ ಪ್ರಾಣಿ-ಪ್ರತೀಕಗಳೇ ಪೂಜಾರ್ಹವಾದುವು, ಬೀದಿಯಲ್ಲಿ ನಡೆದಾಡುವ ಹಂದಿಯೊಂದೊಂದೂ ಪಂಜುರ್ಲಿಭೂತವಲ್ಲ, ಕಾಡಿನಲ್ಲಿ ಕಾಣಸಿಗುವ ಹುಲಿ ಪಿಲಿಭೂತವಲ್ಲ. ಪಂಜುರ್ಲಿಭೂತವೆಂಬುದು ಹಂದಿಯು ಬೊಂಬೆಯಲ್ಲಿ ಅಡಗಿರುವ ಚೈತನ್ಯ ; ಹಾಗೆಯೇ ಪಿಲಿಭೂತ ಹುಲಿಯ ಪ್ರತಿಮೆಯಲ್ಲಿ ತೋರಿಕೊಳ್ಳುವ ಸಾಂಕೇತಿಕ ಸತ್ತ್ವ. ಅವುಗಳ ಪ್ರಭಾವ ಇರುವುದು ಅವನ್ನು ಗುಡಿ (ಸ್ಥಾನ) ಗಳೊಳಗೆ ಇರಿಸಿದಾಗಲೇ, ಅವುಗಳಿಗೆ ಕಟ್ಟಳೆಯಂತೆ ನಡೆದುಕೊಂಡಾಗಲೇ. ದೈವವನ್ನು ಪ್ರತಿನಿಧಿಸುವ ಪಂಜುರ್ಲಿಯಾಗಲೀ ಪಿಲಿಭೂತವಾಗಲೀ

ಸಾಮಾನ್ಯವಾದ ಹಂದಿಯಲ್ಲ, ಹುಲಿಯಲ್ಲ. ಆ ಜಾತಿಗೆ ಸೇರಿದ ಪ್ರಾಣಿಗಳಿಗಿರಲಾರದ ವಿಶೇಷವಾದ ಕಾರಣಿಕ ಈ ಪುತ್ಥಳಿಗಳಲ್ಲಿರುತ್ತದೆ.

ಆದುದರಿಂದ ಇಂಥ ಪ್ರಾಣಿಗಳನ್ನು ದೈವಗಳ ಪ್ರತಿನಿಧಿಗಳಾಗಿ ಪುತ್ಥಳಿಗಳಲ್ಲಿ ನಿರ್ದೇಶಿಸುವಾಗ ಅವುಗಳನ್ನು ಅಸಾಧಾರಣ ವಿವರಗಳೊಂದಿಗೆ ಅಥವಾ ವಿಚಿತ್ರವಾದ ಭಂಗಿಗಳಲ್ಲಿ ಕಾಣಿಸುತ್ತಾರೆ. ನಂದಿಗೋಣವೆನ್ನುವುದು ಕೋಣದ ಪ್ರತೀಕ ; ಆದರೆ ಈ ಪ್ರತೀಕಕ್ಕೆ ಐದು ತಲೆಗಳಿರುವುದುಂಟು. ಕೆಲವೊಮ್ಮೆ ಮನುಷ್ಯನ ಮೈಯನ್ನು ಪ್ರಾಣಿಯ ಮುಖದೊಂದಿಗೆ ಕಾಣಿಸುತ್ತಾರೆ. ಪಂಜುರ್ಲಿಭೂತದ ಮೈ ಮನುಷ್ಯನದು, ಮುಖ ಮಾತ್ರ ಹಂದಿಯದು. ಮಲಬಾರಿನ ಹನುಮಾನ್-ತೆಯ್ಯ ಮನುಷ್ಯನ ಮೈ, ಕೋತಿಯ ಮುಖವುಳ್ಳದ್ದು. ನಮ್ಮ ಧರ್ಮದಲ್ಲಿ ಹಯ–ಗ್ರೀವ, ವರಾಹ, ಹನುಮಾನ್, ಗರುಡ, ನರ-ಸಿಂಹ, ಗಣೇಶ, ಕಾಕಮುಖಿ ಮೊದಲಾದ ದೇವತೆಗಳು ಕಾಣಿಸಿಕೊಂಡುದು ಇದೇ ನೆಲೆಯಲ್ಲಿಯೇ. ಜಾನಪದ ಕಟ್ಟಳೆಗಳಲ್ಲಿ ಕುಣಿತಕ್ಕೆ ಬಳಸುತ್ತಿದ್ದ ಮುಖವಾಡಗಳೇ ಹಿನ್ನೆಲೆಯೆನ್ನುವುದು ನಿರ್ವಿವಾದವಾದುದು. ಇವುಗಳಲ್ಲೆಲ್ಲ ಪ್ರಾಣಿಗಳದ್ದು ಮುಖ ಮಾತ್ರ ; ಉಳಿದಂತೆ ಮೈ ಮಾನವ ಸಹಜವಾದುದೇ.

ಈಗ ಜನಪ್ರಿಯವಾಗಿರುವ ಗಣೇಶ, ಹನುಮಂತ, ಗರುಡ, ನರಸಿಂಹ ಮೊದಲಾದ ದೇವತೆಗಳು ಜಾನಪದ ಚೌಕಟ್ಟಿನಲ್ಲಿಯೇ ಕಾಣಿಸಿಕೊಂಡವರೆಂದು ಹೇಳಲು ಇನ್ನೊಂದು ಕಾರಣವೂ ಉಂಟು. ತುಳುನಾಡಿನ ಧಾರ್ಮಿಕಸಂದರ್ಭದಲ್ಲಿ ಇದರ ನಿದರ್ಶನವು ದೊರೆಯುತ್ತದೆ. ಅಲ್ಲಿನ ವಿಶೇಷಸಂದರ್ಭಗಳಲ್ಲಿ (ಅಯನ, ನೇಮ, ಬಂಡಿ, ಕೋಲ ಇತ್ಯಾದಿ) ಪಾತ್ರಿಯ ಮೈಮೇಲೆ ಭೂತದ 'ಮಾನಿ' (ಎಂದರೆ ಆವೇಶ) ಬರುತ್ತದೆ. ಆಗ ಅವನು ಕುಣಿಯುವಾಗ ದೈವದ ಹೆಗ್ಗಳಿಕೆಯನ್ನೂ ಸಾಹಸವನ್ನೂ ಹೇಳುವ ಪಾಡ್ದನಗಳನ್ನು (ತುಳು ಭಾಷೆಯಲ್ಲಿ) ಹಾಡುವ ವಾಡಿಕೆಯಿದೆ. ಪ್ರತಿಯೊಂದು ದೈವಕ್ಕೂ ವಿಶಿಷ್ಟವಾದ ಪಾಡ್ದನಗಳಿರುತ್ತವೆ. ಆ ದೈವದ ಇರವು, ಆವೇಶ ಜನರ ನಡುವೆ ಪ್ರಸಕ್ತವಾಗಿದ್ದಾಗ ಅದರ ಪಾಡ್ದನ ಮೊಳಗಬೇಕು. ಕಣ್ಣಮುಂದೆ ತೋರಿಕೊಳ್ಳುವ ಮುಖವಾಡ, ಕಿವಿಯಿಂದ ಕೇಳುವ ಪಾಡ್ದನ ಎರಡೂ ಕೂಡಿಕೊಂಡು ದೈವದ ಚಿತ್ರ ಸ್ಪಷ್ಟವಾಗಿ ಜನರ ಮನಸ್ಸಿನ ಮೇಲೆ ಮೂಡುತ್ತದೆ. ನೆರೆದಿರುವ ನೂರಾರು ಜನರು ಈ ದೈವದ ಪ್ರಭಾವದಲ್ಲಿ ಪಾಲ್ಗೊಳ್ಳುವುದು ಪಾಡ್ದನದ ಕಥೆಗಳ ಮೂಲಕವಾಗಿಯೇ.



ಬಾಲಿ ದ್ವೀಪದ ಹನುಮಂತ

ಪಾಡ್ದನಗಳ ವಸ್ತುವಿಶ್ಲೇಷಣೆಯನ್ನು ಕೈಕೊಂಡಾಗ ಅವುಗಳ ಜಾನಪದ ಚೌಕಟ್ಟು ಸ್ಪಷ್ಟವಾಗುತ್ತದೆ. ಧಾರ್ಮಿಕ-ಕುಣಿತ ಮತ್ತು ಜಾನಪದ ಗೇಯ ಕಥೆಗಳು ಇವೆರಡರ ನಡುವೆ ಇರುವ ನೆಂಟು ನಮ್ಮ ದೇಶದ ಹಲವಾರು ಹಳೆಯ ಬುಡಕಟ್ಟಿನ ಧಾರ್ಮಿಕವಾದ ಕ್ರಿಯಾಕಲಾಪಗಳಲ್ಲಿ ಕಾಣಸಿಗುತ್ತದೆ. ಪಾಡ್ದನಗಳನ್ನು ಜಾನಪದ ಪುರಾಣೇತಿಹಾಸಗಳ ಮೊದಲ ರೂಪವೆಂದು ನಿರ್ದೇಶಿಸಬಹುದು. ದೇವತೆಗಳ ಸಾಹಸವನ್ನೂ ಹಿರಿಮೆಯನ್ನೂ ಪುರಾಣದ

ಕಥೆಗಳು ಎತ್ತಿ ಹೇಳುವುದಿಲ್ಲವೆ ? ಈ ಕಥೆಗಳಿಲ್ಲದಿದ್ದರೆ ದೇವತೆಗಳು ಜನರಿಗೆ ಪ್ರಿಯವಾಗುವುದು ಹೇಗೆ ? ಗಣೇಶ, ನರಸಿಂಹ, ಹಯಗ್ರೀವ ಮೊದಲಾದ ವಿಚಿತ್ರ ದೇವತೆಗಳ ವಿಚಾರವಾಗಿ ಸ್ವಾರಸ್ಯವಾದ ಕಥೆಗಳೇ ಇವೆ. ಪುರಾಣಗಳು ಸಭ್ಯವೆನ್ನಬಹುದಾದ ಸಂಸ್ಕೃತಿಯ ಪದರದಲ್ಲಿ ಸೇರಿಕೊಂಡಿದೆಯಾದರೂ,ಅದರ ಹಿಂದಣ ಹಂತ ಜಾನಪದದ್ದೇ ಎಂಬುದು ಯಾರಿಗಾದರೂ ತಿಳಿದುಬಂದೀತು.

ಮನುಷ್ಯರೂ ದೇವತೆಗಳೂ ದೈವಗಳೂ ಒಟ್ಟಿಗೆ ಕಲೆತು, ಒಡನಾಡುವ, ಕಾದಾಡುವ, ಒಪ್ಪಂದಕ್ಕೆ ಬರುವ ಪ್ರಸಂಗಗಳು ಪುರಾಣಗಳಲ್ಲಿಯಾಗಲೀ ಪಾಡ್ದನಗಳಲ್ಲಿಯಾಗಲೀ ಮುಖ್ಯವೇ. ಇವನ್ನು ನಿರೂಪಿಸುವ ಒಕ್ಕಣೆಯಲ್ಲಿ ಅಸಂಗತವೆಂಬುದಾಗಲೀ ಅಸಂಭವವೆಂಬುದಾಗಲೀ ಪಾಲ್ಗೊಳ್ಳುವವರ ಪಾಲಿಗೆ ಇರುವುದಿಲ್ಲ. ದೈವಗಳು ಬುಡಕಟ್ಟಿನ ಹಿರಿಯನೊಂದಿಗೆ ನಡೆಸುವ ಸಂವಾದ ಗಳು (ನುಡಿಕಟ್ಟುಗಳು), ದೈವಗಳ ವಾಗ್ಝೋರಣೆ, ಅವು ವಿಧಿಸುವ ಕಟ್ಟುಗಳು ಮೊದಲಾದುವು ಪಾಡ್ದನಗಳಲ್ಲಿ ಮಾತ್ರವಲ್ಲ, ಪುರಾಣಗಳಲ್ಲಿಯೂ ಪ್ರಧಾನ ವೆನಿಸುವ ಅಂಶಗಳೇ.

ಋಗ್ವೇದ ಸಂಹಿತೆಯಲ್ಲಿಯೂ ಇಂಥ ಸಂವಾದಗಳು ಸೇರಿವೆಯೆನ್ನು ವುದನ್ನು ನಾವು ಗಮನಿಸಬೇಕು. ಸೋದರ–ಸೋದರಿಯರಾದ ಯಮ–ಯಮಿಯರ ನಡುವೆ (೧೦, ೧೦), ಅಪ್ಸರೆಯಾದ ಊರ್ವಶಿ ಮತ್ತು ಮನುಷ್ಯ ರಾಜನಾದ ಪುರೂರವ ಇವರ ನಡುವೆ (೧೦, ೯೫), ಋಷಿಯಾದ ವಿಶ್ವಾಮಿತ್ರ ಮತ್ತು ನದಿ ಇವರ ನಡುವೆ (೩, ೩೩), ಇನ್ನೊಬ್ಬ ಋಷಿ ಅಗಸ್ತ್ಯ, ಮತ್ತು ಅವನ ಹೆಂಡತಿ ಲೋಪಾಮುದ್ರೆ ಇವರ ನಡುವೆ (೧, ೧೭೯), ದೇವಲೋಕದ ನಾಯಿ ಸರಮೆ ಮತ್ತು ಪಣಿಗಳೆಂಬ ಕಳ್ಳರು ಇವರ ನಡುವೆ (೧೦, ೧೦೮) ನಡೆದ ಸಂವಾದಗಳು ಒಟ್ಟು ಇಪ್ಪತ್ತರಷ್ಟು ಋಗ್ವೇದದಲ್ಲಿ ಸೇರಿಕೊಂಡಿವೆ. ವೈದಿಕ ಮಂತ್ರಗಳ ಸಂದರ್ಭದಲ್ಲಿ ಇಂಥ ಸಂವಾದಗಳು ವಿಚಿತ್ರವೆನಿಸುವುದು ದಿಟ ; ಸ್ತುತಿಪರವಾದ, ವರ್ಣನಾಪರವಾದ ವಾಙ್ಮಯದಲ್ಲಿ ಈ ಸಂವಾದಗಳು ಹೇಗೆ ಸೇರಿಕೊಂಡುವೋ ತಿಳಿಯದು. ಆದರೆ ಇವು ಜಾನಪದ ಚೌಕಟ್ಟಿನಲ್ಲಿ ಸಿದ್ಧವಾದ ಭಾಗಗಳೆಂಬುದು ಖಂಡಿತ.

ವೇದಭಾಷ್ಯವನ್ನು ಬರೆದ ಸಾಯಣರೇ ಈ ಸಂವಾದಸೂಕ್ತಗಳಿಗೆ ಸಂಬಂಧಪಟ್ಟ ಹಳೆಯ ಕಥೆಗಳನ್ನು ಪ್ರಸ್ತಾಪ ಮಾಡುತ್ತಾರೆ. ವೇದಕಾಲಕ್ಕೂ ಮೊದಲೇ ನಮ್ಮ ಪಾಡ್ದನಗಳಂಥ ಸಾಹಿತ್ಯ ಜನಪ್ರಿಯವಾಗಿ, ಬಳಕೆಯಲ್ಲಿದ್ದಿರ ಬೇಕೆಂದು ಊಹಿಸಿಕೊಳ್ಳಬಹುದು. ವೇದಗಳ ಸಂಹಿತೆ ಸಿದ್ಧವಾಗುವ ಮೊದಲೇ

ಜನರ ಬಾಯಲ್ಲಿ ನಿಂತಿದ್ದ ಕಥೆಗಳ ಭಾಗಗಳು ಈ ಸಂವಾದ ಸೂಕ್ತಗಳು. ಆಗಣ ನಾಟಕಗಳಲ್ಲಿ ಸೇರಿಕೊಂಡಿದ್ದುವು ಎಂದೂ ಒಂದು ವಿವರಣೆಯಿದೆ. ನಾಟಕವಾದರೂ ಜಾನಪದಕಟ್ಟಳೆಯ ಅಂಗವಾಗಿಯೇ ಇದ್ದುವೆಂದು ಹೇಳಬಹುದು. ತುಳುನಾಡಿನಲ್ಲಿ ಅಥವಾ ಕೇರಳದಲ್ಲಿ ಈಗ ದೈವಗಳ ನೆಂಟನ್ನು ಪಡೆದುಕೊಂಡು ಏರ್ಪಡುವ ಕೂಟಗಳಲ್ಲಿ ಕೇಳಿಬರುವ ನುಡಿಕಟ್ಟು ಸಾವಿರಾರು ವರ್ಷಗಳಿಂದ ಉಳಿದು ಬಂದಿರುವ ವಿವರ.

ಹಾವು ಮತ್ತು ಬೆಟ್ಟ

ಮೊದಲಿನ ಗುಡಿ ಎದ್ದುದು ಕಟ್ಟಳೆಗಳಿಗೆಂದು ನಿರ್ದಿಷ್ಟವಾದ ಆವರಣದೊಳಗೆ ಇದ್ದಿರಬಹುದಾದ ಮರದಡಿಯಲ್ಲಿ. ಮರದ ಹಿರಿಮೆ ಆವರಣದ ಒಳಗಿದ್ದುದರಿಂದಲೇ ; ಗುಡಿಯ ಹೆಗ್ಗಳಿಕೆ ಈ ಮರದೊಂದಿಗೆ ನೆಂಟನ್ನು ಪಡೆದಿರುವುದರಿಂದಲೇ. ಗುಡಿಯು ಮೊದಲಿಗೆ ಸಣ್ಣದೊಂದು ಗುಡಿಸಲಾಗಿದ್ದೀತು, ತಡಿಕೆಯಿಂದ ಮುಚ್ಚಿದ ಕಟ್ಟೆಯಾಗಿದ್ದೀತು. ದೈವದ ಸ್ಥಾನವೆಂದು ಬಗೆದ ಕಲ್ಲುಬಂಡೆಯನ್ನು ಅಥವಾ ಮರದ ದಿಮ್ಮಿಯನ್ನು ನಾಲ್ಕೂ ಕಡೆ ತಡಿಕೆಗಳಿಂದಲೋ ಒರಟು ಕಟ್ಟಡದಿಂದಲೋ ಮರೆಮಾಡಿ, ಮೇಲೆ ಎಲೆಗಳ ಸೂರನ್ನು ನಿಲ್ಲಿಸುವುದು ಇಂದಿಗೂ ಕಾಣಸಿಗುತ್ತದೆ. ಮರದ ಅಡಿಯಲ್ಲಿ ಇದ್ದ ಕಲ್ಲುಬಂಡೆ ಸಂಕೇತಪ್ರಮುಖವಾದುದು. ಕಲ್ಲುಬಂಡೆಯೆಂದರೆ ಬೆಟ್ಟದ ಸಣ್ಣ ರೂಪ ; ಮರವೆಂದರೆ ಜಾನಪದ ಜೀವನದ ಸಂಕೇತ. ಬಂಡೆ ಸ್ಥಿರವಾದುದು ; ಮರವಾದರೋ ಬೆಳೆಯುವಂಥದು, ಮಾರ್ಪಡುವಂಥದು. ಇವೆರಡರ ನೆಂಟು ಆಕಸ್ಮಿಕವಾದುದಲ್ಲ. ಜಾನಪದ ಕಲ್ಪನೆಯಲ್ಲಿ, ತೀರಿಕೊಂಡ ಹಿರಿಯರ ಚೇತನ ಬೆಟ್ಟವನ್ನು ಸೇರುತ್ತಿದ್ದಿತು, ಮರವನ್ನೇರಿ ಮರೆಯಾಗುತ್ತಿದ್ದಿತು. ಹಿರಿಯರ ಆರಾಧನೆಗೆ ಬೆಟ್ಟದಂತಿರುವ ಕಲ್ಲುಬಂಡೆಯೂ ಹರಡಿ ನಿಂತ ಮರವೂ ನೆರವಾಗುತ್ತಿದ್ದವು. ಜನಾಂಗದ ಹಿಂದಿನ ಹಿರಿಯರೆಲ್ಲ ಮರದ ಮೇಲೇ ಇರುವರೆಂದು ನಂಬಿಕೆಯಿದ್ದಿತು.

ತೀರಿಕೊಂಡವನನ್ನು ಒಪ್ಪಮಾಡುವ ಸಂದರ್ಭ ಹಿಂದಿನ ಎಲ್ಲ ಜನಾಂಗಗಳಲ್ಲಿಯೂ ಪ್ರಧಾನವಾದ ಒಂದು ಧಾರ್ಮಿಕವಿಧಿ. ಈಗಲೂ ಈ ಸಂದರ್ಭ ಸಭ್ಯಸಮಾಜದಲ್ಲಿಯೂ ಪ್ರಧಾನವಾದುದಲ್ಲವೆ ? ಆದರೆ ಪ್ರಾಚೀನ ಮನೋವೃತ್ತಿಯಲ್ಲಿ ಸತ್ತವನನ್ನು ಒಪ್ಪಮಾಡುವ ವಿಚಾರ ತುಂಬ ಮುಖ್ಯವಾಗಿದ್ದಿತು. ಅದರ ಸುತ್ತ ಹಲವಾರು ನಂಬಿಕೆಗಳು, ವಿಧಿಗಳು, ನಿಷೇಧಗಳು, ನಿಯಮಗಳು ಹರಡಿಕೊಂಡುವು. ಸತ್ತವನ ಚೇತನವನ್ನು ಉಳಿಸಿಕೊಳ್ಳುವ, ಅದನ್ನು ನೆಮ್ಮದಿ

ಗೊಳಿಸುವ, ಅದು ಕೊಡಬಹುದಾದ ಕಾಟವನ್ನು ತಡೆಯುವ, ಅದರಿಂದ ನೆರವನ್ನು ಪಡೆಯುವ ಸನ್ನಾಹಗಳು ಕಾಣಿಸಿಕೊಂಡುವು. ಸತ್ತವನ ಒಲುಮೆ ಗಾಗಿ ಅವನ ಆರಾಧನೆ ಬಳಕೆಗೆ ಬಂದಿತು.

ಸತ್ತವರ ಕಳೇಬರವನ್ನು ಸಿಂಗರಿಸಿ, ಹಾಡು, ಕುಣಿತ ಮೊದಲಾದ ಸಂಭ್ರಮದಿಂದ ರಥದ ಮೇಲೆ (ಬಂಡಿಯ ಮೇಲೆ) ಇರಿಸಿ, ಬೀದಿಗಳಲ್ಲಿ ಮೆರ ವಣಿಗೆಯಲ್ಲಿ ಕೊಂಡೊಯ್ದು ಸುಡುಗಾಡಿಗೆ ತರುವ ಪದ್ಧತಿಯನ್ನು ಜಗತ್ತಿನ ಹಲವು ಜನರಲ್ಲಿ ಇಂದಿಗೂ ಕಾಣಬಹುದು. ತುಂಬ ಪ್ರಾಚೀನವಾದ ಪದ್ಧತಿ ಯಿದು. ಹೆಣದ ಮೆರವಣಿಗೆಯಲ್ಲಿ ಪಾಲ್ಗೊಳ್ಳುವ ಹಲವರು ಕುಣಿಯುವಾಗ ಮುಖವಾಡವನ್ನೂ ಧರಿಸುತ್ತಿದ್ದರು ; ತೀರಿಕೊಂಡವನ ಬದುಕು, ಮೇಲ್ಮೆ, ಸಾಹಸ, ಹಿರಿಮೆ, ಸಾವುಗಳನ್ನು ಕುರಿತು ಹಾಡುಗಳನ್ನು ಹಾಡಿ, ನಾಟಕೀಯ ವಾಗಿ ಅಭಿನಯಿಸುತ್ತಿದ್ದುದೂ ಉಂಟು. ಜನಾಂಗದ ಒಗ್ಗಟ್ಟನ್ನು ಎತ್ತಿ ತೋರಿ ಸುವ ಈ ಪದ್ಧತಿಯಲ್ಲಿ ಸತ್ತವನ ಪರಲೋಕಯಾತ್ರೆಯಲ್ಲಿ ಜನಾಂಗವೆಲ್ಲ ಅವನಿಗೆ ನೆರವಾಗುವುದೆಂಬ ಆಶ್ವಾಸನೆ ಇಲ್ಲಿ ಮುಖ್ಯವಾದ ಉದ್ದೇಶ. ಶವದ ಯಾತ್ರೆಯು ದೂರದ ಬೆಟ್ಟದವರೆಗೆ ಅಥವಾ ಹಿರಿಯರ ವಸತಿಗೆಂದು ಏರ್ಪಟ್ಟ ಪುರದವರೆಗೆ. ಅಲ್ಲಿ ಹೆಣವನ್ನು ಒಪ್ಪಮಾಡಿ, ಆ ಸ್ಥಳದ ಮೇಲೆ ಕಲ್ಲುಬಂಡೆ ಯೊಂದನ್ನು ಇರಿಸುವರು, ಮರವೊಂದನ್ನು ನೆಡುವರು. ಇಂಥ ಮರವೇ 'ಚೈತ್ಯವೃಕ್ಷ'ವೆನಿಸಿಕೊಂಡುದು ; ಸ್ಥಲವೃಕ್ಷವೆಂದರೂ ಹೆಚ್ಚೂ ಕಡಮೆ ಇದೇ.

ಮರಕ್ಕೂ ಹಾವಿಗೂ ಇರುವ ನಂಟು ಮನುಷ್ಯನ ಮನೋಧರ್ಮದ ತುಂಬ ಹಳೆಯ ಪದರಗಳಲ್ಲಿಯೇ ಗಮನಕ್ಕೆ ಬಂದಿದೆ. ವೃಕ್ಷ, ನಾಗ ಇವೆರಡೂ ಅವಳಿ ಚೇತನಗಳು. ದೊಡ್ಡ ದೊಡ್ಡ ಮರಗಳು, ಪಕ್ಕದಲ್ಲೇ ಬೆಳೆದು ನಿಂತ ಎತ್ತರದ ಹುತ್ತಗಳು ನಮ್ಮ ದೇಶದಲ್ಲಿ ಸಾಮಾನ್ಯವಾಗಿ ಕಾಣಸಿಗುವ ದೃಶ್ಯವೇ. ಕಾಡಿನಲ್ಲಿ ವಾಸಮಾಡುವ ಜನರಿಗೆ ವಿಶಾಲವಾಗಿ ಹರಡಿಕೊಂಡ ಮರದ ಕೊಂಬೆ ಗಳ ಮೇಲೆ ಸರಾಗವಾಗಿ ಹರಿದಾಡುವ ಹೆಬ್ಬಾವು ಕಾಣುವುದು ಅಪುರೂಪ ವೇನಲ್ಲ. ಮರದಂತೆ ಹಾವೂ ಪ್ರಸೂತಿಯ ಸಂಕೇತವೆಂದು ಎಲ್ಲರೂ ಬಲ್ಲರು. ಆದರೆ ಹಾವೆಂದರೆ ಲೈಂಗಿಕ ಕಲ್ಪನೆಯೆನ್ನುವ ವಾದ ಸಲ್ಲದು. ಪ್ರಸವವು ಲೋಕಧರ್ಮ ; ಜನರ ಮನಸ್ಸಿನಲ್ಲಿ ಅದು ಎಂದೂ ಉಳಿಯುವ ವಿವರವೇ. ಆದರೆ ಕಾಮುಕತೆಯು ಹರವು ಸಣ್ಣದು, ಅದು ಪ್ರಸವದ ನೆಲೆಗೇರಲಾರದು.

ಹಾವು ಧಾರ್ಮಿಕ ಸಂಕೇತಗಳಲ್ಲೊಂದಾಗಿ ಸೈಂಧವ ಸಂಸ್ಕೃತಿಯ ಕಾಲ ದಿಂದ ಇಂದಿನವರೆಗೂ ಪೂಜೆಗೊಳ್ಳುತ್ತ ಬಂದಿದೆ. ಮೊಹೆನ್‌ಜೊದಾರೋ

ವಿದುರಾಶ್ವತ್ಥದ ಅರಳೀಮರ

ಮತ್ತು ಹರಪ್ಪಾಗಳಲ್ಲಿ ದೊರೆತಿರುವ ಮುದ್ರೆಗಳಲ್ಲಿ ನಾಗಾಂಕನ ಸ್ಪಷ್ಟವಾಗಿ ಕಾಣಸಿಗುತ್ತದೆ ; ಹಾವುಗಳಿಗೂ ಮರಗಳಿಗೂ ಇರುವ ನೆಂಟೂ ಈ ಮುದ್ರೆ ಗಳಲ್ಲಿ ಸ್ಫುಟವಾಗುತ್ತದೆ. ವೈದಿಕ ಮಂತ್ರಗಳಲ್ಲಿ ಅಹಿ ಅಥವಾ ವೃತ್ರನ ವೃತ್ತಾಂತ ಹಾವಿನ ಹಿರಿಮೆಯನ್ನು ಹೇಳುವಂಥದೇ. ನಾಡಿನ ಎಲ್ಲೆಡೆಗಳಲ್ಲೂ ಹಾವಿನ ವಿಚಾರವಾಗಿ ನೂರಾರು ಕಲ್ಪನೆಗಳು, ಕಥೆಗಳು ಬಳಕೆಯಲ್ಲಿವೆ. ಹಾವಿನ ಪ್ರತೀಕಗಳ ಪೂಜೆಯೂ ಎಲ್ಲೆಲ್ಲಿಯೂ ನಡೆಯುತ್ತದೆ. ಎಷ್ಟು ಪುರಾತನ ವಾದರೂ ನಾಗಾರಾಧನೆಯ ಬಲ ಇಂದಿಗೂ ಕುಂದಿಲ್ಲ.

ಸಾಂಚಿಯ ನಾಗಿನಿ

ಒಡಿಸ್ಸದ ಬಿಚಿಂಗ್‌ನಲ್ಲಿನ
ನಾಗಕನ್ನಿಕೆ

ಮಥುರಾ ವಸ್ತುಸಂಗ್ರಹಾಲಯದಲ್ಲಿರುವ ಒಂದು ನಾಗಫಲಕ, ಚಾರ್ ಗಾಂವ್‌ನಲ್ಲಿ ದೊರೆತದ್ದು, ಸ್ವಾರಸ್ಯವಾದ ಕಲಾಕೃತಿ. ಇದು ಸಿಥಿಯನ್ ದೊರೆ ಹುವಿಷ್ಕನ ಕಾಲದ್ದು, ಎಂದರೆ ಕ್ರಿಸ್ತಪೂರ್ವ ಮೊದಲೆರಡು ಶತಮಾನಗಳ ಸುಮಾರಿನದು. ಈ ಫಲಕದಲ್ಲಿ ಒಂದು ಬರಹವೂ ಇದೆ – ಸೇನಹತ್ಥಿ ಮತ್ತು ಭೋನುಕ ಎಂಬಿಬ್ಬರು ಸೋದರರು ಪೂಜಾರ್ಹವಾದ ನಾಗಕ್ಕೆ ಸಲ್ಲಿಸಿದ ಕಾಣಿಕೆ('ಪ್ರಿಯತ್ತಿ ಭಗವಾ ನಾಗ') ಎಂದು. ನಾಗಶಿಲೆಗಳನ್ನು ಪೂಜೆ ಮಾಡುವ ಪದ್ಧತಿ ಕಡೆಯಪಕ್ಷ ಇಷ್ಟು ಹಳೆಯದು. ನಾಗಶಿಲೆಗಳನ್ನು ಮರಗಳಡಿಯಲ್ಲಿ, ಗುಡಿಗಳ ನೆರೆಯಲ್ಲಿ ಕೆರೆ ಕಟ್ಟೆಗಳ ಮೇಲೆ ಮಾತ್ರ ಮೂಡಿಸುವುದಲ್ಲದೆ ಧಾರ್ಮಿಕ ಪರಿಕರಗಳಲ್ಲಿಯೂ ನಾಗಾಲಂಕರಣವನ್ನು ಬಳಸುವುದಿದೆ. ಲೌಕಿಕ ವ್ಯವಹಾರ ದಲ್ಲಿಯೂ ಅಲಂಕರಣ, ಆಭರಣಗಳಲ್ಲೂ ಕಟ್ಟಡಗಳ ಹೊರವಿನ್ಯಾಸದಲ್ಲೂ ನಾಗಪ್ರತಿಮೆ ಬೇಕಾದಂತೆ ಬಂದಿದೆ.

ನಮ್ಮ ನಾಡಿನಲ್ಲಿ, ಅದರಲ್ಲೂ ದಕ್ಷಿಣದ ಕಡೆ, ಗರ್ಭಗುಡಿಯಲ್ಲಿ ಹಾವಿನ ಹುತ್ತವಷ್ಟೇ ಇದ್ದು ಅದನ್ನೇ ವಲ್ಮೀಕೇಶ್ವರನೆಂದು ಪೂಜೆಮಾಡುವ ಗುಡಿ ಗಳಿವೆ. ಸುಬ್ರಹ್ಮಣ್ಯ ಅಥವಾ ಸ್ಕಂದನನ್ನು ನಾಗರೂಪಿಯೆಂದು ಕಲ್ಪಿಸಿಕೊಂಡು ಆರಾಧಿಸುವ ವಾಡಿಕೆಯೂ ಇದೆ. ಅರ್ಧ ಹಾವು, ಅರ್ಧ ಮನುಷ್ಯ ಹೀಗೆ ಸುಬ್ರಹ್ಮಣ್ಯನ ರೂಪದ ಕಲ್ಪನೆಯೂ ಉಂಟು. ಶಿವನ ಗುಡಿಯ ಆವರಣದಲ್ಲಿ ನಾಗಗಳ ಪ್ರತಿಷ್ಠೆಗೆ ಪ್ರಾಮುಖ್ಯ ಹೆಚ್ಚು. ಶಿವನ ಲಿಂಗಕ್ಕಂತೂ ಮೂರು, ಐದು ಅಥವಾ ಏಳು ಹೆಡೆಗಳ ಹಾವಿನ ಛತ್ರವಿರುವುದನ್ನು ಎಲ್ಲರೂ ಅರಿತಿ ದ್ದಾರೆ; ನಾಗಲಿಂಗವೆಂದೇ ಪ್ರಖ್ಯಾತಿಯೂ ಇದೆ. ಶಿವನ ಕಲ್ಪನೆಯಲ್ಲಿ ನಾಗಾಭರಣ ತಪ್ಪದೆ ಬರುತ್ತದೆ. ದುರ್ಗೆಯ ರೂಪಕಲ್ಪನೆಯಲ್ಲೂ ಹಾವಿನ ಪಾಲುಂಟು. ಹಲವು ದೇವೀಮೂರ್ತಿಗಳ ತಲೆಯ ಮೇಲೆ ಮತ್ತು ಕಿರೀಟದಲ್ಲಿ ಹಾವಿನ ವಿನ್ಯಾಸ ಕಾಣಸಿಗುತ್ತದೆ. ನಾಗಿನಿಯರು ದೇವೀಪ್ರತೀಕಗಳೆನ್ನುವ ಭಾವನೆಯೂ ಇದೆ. ಬಂಗಾಳದ ಕಡೆ ಮಾನಸಾದೇವಿಯ ಪೂಜೆಯಲ್ಲಿ ಹಾವಿನ ಪ್ರಕ್ರಿಯೆ ಬರುತ್ತದೆ. ಶಕ್ತಿಗೂ ಸರ್ಪಕ್ಕೂ ತೀರದ ನೆಂಟು ಜಾನಪದ ನೆಲೆಯಲ್ಲಿ ಒದಗಿದೆ. ಗಣೇಶನ ಸರ್ಪಯಜ್ಞೋಪವೀತ, ಸುಬ್ರಹ್ಮಣ್ಯನ ನಾಗರೂಪ, ವೀರಭದ್ರನ ನಾಗಾಯುಧ, ದೇವಿಯ ನಾಗಾಭರಣ, ನಾಗಪಾಶ, ನಾಗವೇಣಿ, ಗರುಡನ ನಾಗಾಲಂಕರಣ, ವಿಷ್ಣುವಿನ ನಾಗಶಯನ ಇವೆಲ್ಲವೂ ಈ ಮೂಲದಿಂದ ಬಂದುವೇ. ನಾಗ, ಶೇಷ, ಅನಂತ ಎಂಬ ಕಲ್ಪನೆಯಲ್ಲಿ ಬಲ



ಬಸರೂರಿನ ದುರ್ಗೆ ; ಸರ್ಪಗಳ ಮುಡಿ

ನಂದಳಿಕೆಯ ನಾಗಬನದಲ್ಲಿರುವ ಹಳೆಯ ನಾಗಕಲ್ಲು



ಬನವಾಸಿಯ ನಾಗಕಲ್ಲು

ಪೊಸ್ರಾಳುವಿನ ಬ್ರಹ್ಮಸ್ಥಾನದಲ್ಲಿ ನಾಗಶಿಲ್ಪ

ರಾಮನನ್ನೂ ಹಾವಿನ ರೂಪದಲ್ಲೇ ಕಾಣಿಸುವುದುಂಟು. ಬಲರಾಮ ಸಂಕರ್ಷಣ ; ನಾಗಪ್ರತೀಕದ ಆಕರ್ಷಣೆ ಇಲ್ಲಿ ಧ್ವನಿತವಾಗುತ್ತದೆ.

ನಾಗಕಲ್ಲುಗಳು ನಾಗಾರಾಧನೆಯ ಮುಖ್ಯವಾದ ಒಂದು ಅಂಗ. ಕಲ್ಲಿನಲ್ಲಿ ಹಲವು ಬೆಸಸಂಖ್ಯೆಯ ಹೆಡೆಗಳಿರುವ ಅಥವಾ ಒಂದೇ ಹೆಡೆಯಿರುವ ಹಾವಿನ ಪ್ರತಿಕೃತಿಗಳನ್ನು ಒಂದೊಂದು ಹಳ್ಳಿಯಲ್ಲೂ ಕಾಣಬಹುದು. ಎರಡು ಹಾವುಗಳು ಹೆಣೆದುಕೊಂಡಿರುವ ಶಿಲ್ಪಗಳೂ ಬಹುವಾಗಿ ಕಾಣಿಸಿಕೊಳ್ಳುತ್ತವೆ. ಹಾವಿನ ಹಂದರದಲ್ಲಿ ಹೆಣ್ಣು, ಗಂಡು ದೇವತೆಗಳನ್ನು ಮನುಷ್ಯಾಕಾರದಲ್ಲಿ ಮೂಡಿಸುವುದೂ ಉಂಟು. ಹಾವನ್ನೇ ಮನುಷ್ಯನ ತಲೆ ಮತ್ತು ಮೈಗಳಿದ್ದು ಕೆಳಭಾಗ ಹಾವಿನ ಆಕಾರವಿರುವಂತೆ ಕಲ್ಪಿಸಿಕೊಂಡಿರುವುದೂ ಇದೆ. ಅರಳೀ



ಬಂಕಾಪುರದ ಮಂಚಮಲಕಪ್ಪದ ಬಾವಿಯಲ್ಲಿ ನಾಗ ಯುಗಳ





ಸುಬ್ರಹ್ಮಣ್ಯ ದೇವಾಲಯದಲ್ಲಿ ನಾಗ

ಪೊಸ್ರಾಳುವಿನಲ್ಲಿ ಬೆಟ್ಟದಂತೆ ನಾಗ

ಮರದ ಕೆಳಗೆ ಕಟ್ಟೆಯ ಮೇಲೆ ಈ ಬಗೆಯ ನಾಗಕಲ್ಲುಗಳನ್ನು ಇರಿಸುವುದು ಹೆಚ್ಚು. ಮಕ್ಕಳಿಲ್ಲದವರ ಹರಕೆ, ಹಾವಿನ ಕಾಟದಿಂದ ಬಳಲಿದವರ ಕೊಡುಗೆ, ಐಶ್ವರ್ಯವನ್ನು ಬಯಸುವವರ ಆದರ ಇವು ಈ ನಾಗಪ್ರತಿಷ್ಠೆಗೆ ಕಾರಣಗಳು. ಹಾವು ಸಂತಾನದ ಸತ್ತ್ವ, ನಿಧಿಯ ಕಾವಲೂ ಹೌದು. ಶಿವಲಿಂಗದೊಂದಿಗೆ ಬೆರತಿರುವ ನಾಗವಲ್ಲದೆ, ನಾಗವೇ ಲಿಂಗಾಕಾರದಲ್ಲಿ ಕುಳಿತಂತೆ ಕಲ್ಪಿಸಿಕೊಂಡಿರುವ ಶಿಲ್ಪಗಳೂ ಇವೆ. ಹುಂಜದ ತಲೆಯಿರುವ ನಾಗಗಳನ್ನು ಹಾವಿನ ತಲೆಯಿರುವ ಹುಂಜಗಳನ್ನು ಅಲ್ಲಲ್ಲಿ ಕಾಣಬಹುದು. ಕುಕ್ಕುಟಸರ್ಪವೆಂಬ ಜಾತಿಗೆ ಸೇರಿದ ಇಂಥ ವಿಚಿತ್ರ ಪ್ರಾಣಿಗಳು ಜಾನಪದ ನೆಲೆಯವೇ. ಮತ್ತೆ ರಂಗೋಲಿ

ಕಾಲು-ನಾಗಮಂಡಲದ ಶಿಲ್ಪ

ಯಲ್ಲಿ ನಾಗದ ಹೆಡೆಗಳನ್ನೂ ಸುರುಳಿಗಳನ್ನೂ ಕಾಣಿಸುವುದು ದಕ್ಷಿಣದೇಶದಲ್ಲಿ ಎಲ್ಲೆಲ್ಲೂ ಬಳಕೆಯಲ್ಲಿಲ್ಲವೆ ?

'ನಾಗ'ವೆನ್ನುವ ಮಾತಿಗೆ ಹಾವು, ಬೆಟ್ಟ ಎಂದು ಅರ್ಥಗಳಿರುವುದು ಆಕಸ್ಮಿಕವಲ್ಲ. ಎರಡೂ ಕಲ್ಪನೆಗಳು ಕಲೆತಿರುವಂಥವೇ. ನಾಗಾರಾಧನೆಯ ಚೌಕಟ್ಟಿನಲ್ಲಿ ಹಾವಿನ ಪೂಜೆಯೂ ಬೆಟ್ಟದ ಪೂಜೆಯೂ ಬೆರೆತಿವೆ. ಲಿಂಗವು ಬೆಟ್ಟಕ್ಕೆ ಪ್ರತೀಕವಾಗಿ, ಅದನ್ನು ಸುತ್ತಿ ಅದರ ಮೇಲೆ ನೆರಳನ್ನು ಒದಗಿಸುವ ಹಾವಿನ ಹೆಡೆ ನಾಗಲಿಂಗವಾದುದು ಈ ಸೇರ್ಪಡೆಯ ಸಂಕೇತ. ನಾಗಕಲ್ಲುಗಳೂ ಪರ್ವತಪ್ರಾಯವಾಗಿ, ಪರ್ವತಾಕಾರದಲ್ಲಿಯೇ ಇರುವುದು ವಾಡಿಕೆ. ನಾಗ ರೂಪಿಯಾದ ಸುಬ್ರಹ್ಮಣ್ಯನ ಆಲಯಗಳು ಸಾಮಾನ್ಯವಾಗಿ ಬೆಟ್ಟದ ಮೇಲೇ



ನಡುಮನೆಗುತ್ತಿನಲ್ಲಿ ಮನೆಯೊಂದರ ಕಂಬದಮೇಲೆ ಅರ್ಧ ನಾಗಮಂಡಲ

ಇರುವುದು ಗಮನಾರ್ಹವಾದುದು, (ಪಳನಿ, ಸ್ವಾಮಿಮಲೆ, ತಿರುತ್ತಣಿ ಇತ್ಯಾದಿ) ಬೆಟ್ಟವನ್ನು ಪೂಜೆಮಾಡುವ ಜಾನಪದ ಪದ್ಧತಿಯಲ್ಲಿ ನಾಗದ ಕಲ್ಪನೆಯೂ ವೃಕ್ಷದ ಕಲ್ಪನೆಯೂ ಸೇರಿಕೊಂಡುಬಂದುವು.

ಪಶ್ಚಿಮ ಕರಾವಳಿಯಲ್ಲೆಲ್ಲ ನಾಗಾರಾಧನೆ ಮುಖ್ಯವಾದುದು. ನಾಗ ಕನ್ನಿಕೆಯರನ್ನು ಕೇರಳದ ಕಡೆ ಮೊದಲಿಗೆ ಕಾಣಬಹುದಾಗಿದ್ದಿತು. ಮನೆಗಳ ಹಿಂಭಾಗದಲ್ಲಿ ನಾಗಬನಗಳನ್ನು (ಕಾವು) ಬಿಟ್ಟುಕೊಳ್ಳುವ ವಾಡಿಕೆಯೂ ಅಲ್ಲಿನದೇ. ನಾಗಕ್ಕೇದೇ ವಿಶಿಷ್ಟವಾದ ಆಲಡೆಗಳು, ನಾಗಬ್ರಹ್ಮ ಸ್ಥಾನಗಳು, ನಾಗಾಲಯಗಳು ತುಳುನಾಡಿನಲ್ಲೂ ವಿಶೇಷವೇ. ತುಳುನಾಡಿನಲ್ಲಿ ನಡೆಯುವ 'ನಾಗಮಂಡಲ'ವೆಂಬ ಪೂಜೆ ಸ್ವಾರಸ್ಯವಾದುದು. ಇದರ ಅಂಗವಾಗಿ ನಡೆಯುವ

ಬಂಕಾಪುರದಲ್ಲಿ ಏಳು ಹೆಡೆ ನಾಗದ ಮಂಡಲ

ಅಲಂಕರಣ, ಓರಣ, ಹಾಡು, ಹಸೆ, ಕುಣಿತ, ವಿಧಿ–ನಿಷೇಧಗಳೆಲ್ಲವೂ ಪ್ರಾಚೀನ ಕಲ್ಪನೆಗಳ ಸ್ತರದಿಂದ ಉಳಿದುಬಂದುವೇ. ಈ ಪೂಜೆಯಲ್ಲಿ ನಾಗ ಮಂಡಲವನ್ನು ಬಯಲಲ್ಲಿ ಸಿದ್ಧಪಡಿಸುತ್ತಾರೆ, ಗುಡಿಯೊಳಗಲ್ಲ. ಸುಮಾರು ಮೂವತ್ತೆರಡು ಅಡಿ ಉದ್ದ ಹದಿನಾಲ್ಕು ಅಡಿ ಅಗಲವಿರುವ ಒಳ ಚಪ್ಪರ ವನ್ನು ಹಾಕಿ, ಅದನ್ನು ಸೊಗಸಾಗಿ ಅಲಂಕರಿಸಿ ಅದರಡಿಯಲ್ಲಿ ನೆಲವನ್ನು ಶುದ್ಧಮಾಡಿ ನಾಗಮಂಡಲವನ್ನು ರಚಿಸುತ್ತಾರೆ. ಚಪ್ಪರದ ಸುತ್ತ ಜನರು ನೆರೆಯಲು ಅವಕಾಶ ಮಾಡಿಕೊಡುತ್ತಾರೆ. ನಾಗಮಂಡಲವು ಹಾವಿನ ಮೈ ಸುರುಳಿ ; ಅದರಲ್ಲಿ ಗಂಟುಗಳಿರುವುದೇ ವೈಶಿಷ್ಟ್ಯ. ಈ ಗಂಟುಗಳನ್ನು 'ಪವಿತ್ರ' ಗಳೆಂದು ಕರೆಯುತ್ತಾರೆ. ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಗಂಟುಗಳಿದ್ದರೆ ಅದು

ಸರಳವಾದ ವಿನ್ಯಾಸವಾಯಿತು ; ಅದನ್ನು 'ಕಾಲುಮಂಡಲ'ವೆಂದು ನಿರ್ದೇಶಿಸುತ್ತಾರೆ. ಎಂಟು ದಿಕ್ಕುಗಳಲ್ಲಿ ಎಂಟು ಗಂಟುಗಳಿರುವಂತಾದರೆ ಅದು 'ಅರ್ಧ ಮಂಡಲ' ; ಹನ್ನೆರಡು ಗಂಟುಗಳದ್ದು 'ಮುಕ್ಕಾಲುಮಂಡಲ' ; ಹದಿನಾರು ಗಂಟುಗಳು' ಪೂರ್ಣಮಂಡಲ.'

ನಾಗಮಂಡಲದ ರಚನೆ ಸುಮಾರು ಸ್ಥಳವನ್ನು ಆಕ್ರಮಿಸಿಕೊಳ್ಳುತ್ತದೆ. ಸುಮಾರಾಗಿ ಒಂದೊಂದು ಕಡೆಯೂ ಹನ್ನೆರಡು ಅಡಿಗಳಷ್ಟು ಇರುತ್ತದೆ. ಮಂಡಲದ ನಟ್ಟನಡುವೆ ಏಳು ಹೆಡೆಗಳಿರುವ ತಲೆಯನ್ನು ಕಾಣಿಸುತ್ತಾರೆ. ಮಂಡಲವನ್ನು ರೇಖೆಗಳನ್ನು ಬಿಡಿಸಿ ಅನಂತರ ಬಣ್ಣದ ಹುಡಿಗಳಿಂದ ತುಂಬಿಸುತ್ತಾರೆ. ಬಿಳಿ, ಕೆಂಪು, ಹಳದಿ, ಹಸಿರು ಮತ್ತು ಕಪ್ಪು ಈ ಬಣ್ಣಗಳನ್ನಷ್ಟೇ ಬಳಸುವುದು ವಾಡಿಕೆ. ಮಂಡಲವನ್ನು ಚೆನ್ನಾಗಿ ಸಿಂಗರಿಸುತ್ತಾರೆ. ಮಂಡಲವಿರುವ ಎಡೆಯನ್ನು ನಾಲ್ಕೂ ಕಡೆ ಸುತ್ತರಿದು ಹಿಂಗಾರದ, ಎಂದರೆ ಅಡಕೆ ಹೂಗಳ, ರಾಶಿಯಿರುತ್ತದೆ. ಇದು ನಾಗಮಂಡಲಕ್ಕೆ ಪ್ರಾಕಾರವಿದ್ದಂತೆ.

ನಾಗದ ಚೇತನವನ್ನು ತನ್ನ ಮೈಮೇಲೆ ಮೂಡಿಸಿಕೊಂಡ ನಾಗಪಾತ್ರಿ ಇಬ್ಬರು ಬೈದ್ಯರೊಂದಿಗೆ ನಡೆಸುವ ನಾಗನೃತ್ಯ ಮನೋಹರವಾದುದು, ಅದ್ಭುತವಾದುದು, ರೋಮಾಂಚಕವಾದುದು. ಡಕ್ಕೆಯೆಂಬ ವಾದ್ಯವನ್ನು ಬಡಿಯುತ್ತ ಬೈದ್ಯರು ನಾಗದ ಚೇತನವನ್ನು ಬಣ್ಣಿಸಿ, ಹೊಗಳಿ, ರೇಗಿಸಿ ಚಾಲನೆ ಮಾಡಿಸುತ್ತಾರೆ ; ಡಕ್ಕೆಯ ಶಬ್ದ ಮತ್ತು ಬೈದ್ಯರ ಮಾತು ಇವುಗಳ ಲಯಕ್ಕೆ ಸರಿಯಾಗಿ ನಾಗಪಾತ್ರಿಯು ಕುಣಿಯುತ್ತ ಮಂಡಲದೊಳಗೆ ಓಡಾಡುವ ದೃಶ್ಯ ಮೈನವಿರೇಳಿಸುತ್ತದೆ. ಹಾವಿನ ನಡೆಯನ್ನೇ ನೆನಪಿಗೆ ತರುವ ಈ ಧಾರ್ಮಿಕ ನೃತ್ಯ ತುಂಬ ಪುರಾತನವಾದ ಪದ್ಧತಿಯೆನ್ನುವುದರಲ್ಲಿ ಸಂಶಯವಿರದು.

ಇದರಲ್ಲಿ ಸ್ವಾರಸ್ಯವಾದ ವಿವರವೆಂದರೆ ಈ ಪೂಜೆಗಾಗಿಯೇ ಆವರಣವೊಂದನ್ನು ತಾತ್ಕಾಲಿಕವಾಗಿ ನಿರ್ಮಿಸಿಕೊಳ್ಳುವುದು. ನಾಗಾರಾಧನೆ ನಡೆಯುವಾಗಲೇ ಈ ಆವರಣ ಸಿದ್ಧವಾಗುತ್ತದೆ ; ತೆರೆದ ಚಪ್ಪರವಷ್ಟೇ. ಸ್ಥಿರವಾದ ಯಾವ ಕಟ್ಟಡವೂ ಈ ಆರಾಧನೆಗೆ ಬರುವುದಿಲ್ಲ. ಆವರಣವು ಪಾಲ್ಗೊಳ್ಳುವವರೆಲ್ಲ ನೆರೆಯುವಂತಿರಬೇಕು ; ದೇಗುಲದ ಗರ್ಭಗುಡಿಯಂತೆ ಮೂರ್ತಿಯೊಂದನ್ನು ಅಡಗಿಸಿಕೊಳ್ಳುವುದಾದರೆ ಸಾಲದು, ಈ ಆವರಣದಲ್ಲಿಯೂ ನೆಲೆಗೊಂಡ ಮೂರ್ತಿಯನ್ನೇನು ಪೂಜೆ ಮಾಡುವುದಿಲ್ಲ. ಮಂಡಲವನ್ನು ಅದೇ ಸಿದ್ಧಪಡಿಸಿ ಅದರಲ್ಲಿಯೇ ದೈವವನ್ನು ಬರಮಾಡಿಕೊಳ್ಳುತ್ತಾರೆ.



ಡಕ್ಕೆಬಲಿಗಾಗಿ ಸಿದ್ಧಪಡಿಸಿದ ನಾಗಮಂಡಲ

ಆರಾಧನೆ ಮುಗಿಯಿತೆಂದರೆ ಈ ಮಂಡಲದ ಪ್ರಯೋಜನವೂ ಮುಗಿಯಿತು, ಆವರಣದ ಅಗತ್ಯವೂ ಇಂಗಿತು. ಪ್ರಾಚೀನ ಕಾಲದ ಪೂಜೆ ಈ ರೀತಿಯಾಗಿಯೇ ಇದ್ದಿತು. ಕಾಲಕ್ರಮದಲ್ಲಿ ಶಾಶ್ವತವೆಂಬಂಥ ಗುಡಿ, ಅದರಲ್ಲಿ ಅಚಲವೆಂಬಂಥ ಬಿಂಬ, ಅದಕ್ಕೆ ದಿನನಿತ್ಯವೂ ಪೂಜೆ ಇವು ಸಿದ್ಧವಾದುವು. ಕಟ್ಟಡದ ಸಂಕೋಚ ವನ್ನನುಸರಿಸಿ, ಬಿಂಬದ ನಿಯತಿಗನುಗುಣವಾಗಿ ಆರಾಧನೆಯ ವಿವರಗಳೂ ಕಡಮೆಯಾದುವು ; ಮೊದಲಿನ ಭಾವಾವೇಶವಾಗಲೀ, ಎಲ್ಲರೂ ಪಾಲ್ಗೊಳ್ಳು ವುದಾಗಲೀ ಸಾಧ್ಯವಿರಲಿಲ್ಲ. ಜಾನಪದ ಚೌಕಟ್ಟಿನಲ್ಲಿ ಮುಖ್ಯವಾದುದು ಕಟ್ಟಡವಲ್ಲ, ಕಟ್ಟಳೆ, ಇದಕ್ಕೆ ನಾಗಮಂಡಲದ ಪೂಜೆಯೊಂದು ನಿದರ್ಶನ.

ನಮ್ಮ ದೇಶದ ಹಳ್ಳಿಗಳಲ್ಲಿ ಜನರೆಲ್ಲರೂ ಸೇರಿ ನಡೆಸುವ ಪೂಜೆಯ ಸಂದರ್ಭದಲ್ಲಿ, ಜನಾಂಗದ ಹಿರಿಯನೋ ಪೂಜಾರಿಯೋ ತನ್ನ ತಲೆಯ ಮೇಲೆ ಬುಟ್ಟಿಯೊಂದನ್ನು ಇರಿಸಿಕೊಂಡು, ಅದರಲ್ಲಿ ದೈವದ ಬಿಂಬವನ್ನೋ ಮುಖ ವಾಡವನ್ನೋ ಅಳವಡಿಸಿಕೊಂಡು ಹಳ್ಳಿಯ ಬೀದಿಗಳಲ್ಲಿ ಮೆರವಣಿಗೆ ಹೋಗುವ ವಾಡಿಕೆಯಿದೆ. ಬುಟ್ಟಿಯಲ್ಲದೆ ಸಿಂಗರಿಸಿದ ಪೆಟ್ಟಿಗೆಯೇ ಇರುವುದೂ ಉಂಟು. ಈ ಬಿದಿರಿನ ಬುಟ್ಟಿಯನ್ನಾಗಲೀ ಮರದ ಪೆಟ್ಟಿಗೆಯನ್ನಾಗಲೀ ಸಂದರ್ಭಕ್ಕೆಂದೇ ಸಿದ್ಧಪಡಿಸುತ್ತಾರೆ.ಅದರೊಳಗೆ ಇರುವ ಬಿಂಬ ಸಾಮಾನ್ಯವಾಗಿ ಒರಟಾಗಿ ಕಡೆದ ಮರದ ಶಿಲ್ಪ, ಬಹುಮಟ್ಟಿಗೆ ಹೆಣ್ಣು ದೈವದ್ದು–ಉಳಿದಂತೆ ಹಳ್ಳಿಯ ಹಿರಿಯನ ಮನೆಯಲ್ಲೋ ಪೂಜಾರಿಯ ಮನೆಯಲ್ಲೋ ಚಾವಡಿಯಲ್ಲೋ ಇರುತ್ತದೆ. ಹಾಗೆ ಇರುವಾಗ ಅದಕ್ಕೇನು ಪೂಜೆ ಪುನಸ್ಕಾರ ನಡೆಯುವುದಿಲ್ಲ ; ಜನರ ಗಮನವನ್ನು ಅದು ಸೆಳೆಯುವುದಿಲ್ಲ. ಉತ್ಸವ ಕಾಲದಲ್ಲಿ ಅದು ದೈವ ; ಉಳಿದಂತೆ ಬೊಂಬೆ. ಉತ್ಸವಕ್ಕೆ ಅಣಿಮಾಡಿಕೊಂಡಮೇಲೆ, ಅದನ್ನು ಸಿಂಗರಿಸಿ ಭಯಭಕ್ತಿಗಳಿಂದ ಹೊರತರುತ್ತಾರೆ. ಆಗ ಜನರೆಲ್ಲರ ಆದರವೂ ಅದರ ಮೇಲೇ.

ಕೆಲವೊಮ್ಮೆ ಹೀಗೆ ವರ್ಷವರ್ಷಕ್ಕೂ ಒದಗುವ ಮೂರ್ತಿಯೇ ಇರು ವುದಿಲ್ಲ. ಉತ್ಸವದ ಕಾಲದಲ್ಲೇ ಮಣ್ಣಿನಲ್ಲೋ ಸೆಗಣಿಯಲ್ಲೋ ಮಾಡು ತ್ತಾರೆ, ಅಥವಾ ಮರದಲ್ಲಿ ಆಗಲೇ ಕಡೆಯಿಸುತ್ತಾರೆ. ಉತ್ಸವ ಮುಗಿದಮೇಲೆ ಅದನ್ನು ವಿಸರ್ಜನೆಮಾಡಿಬಿಡುತ್ತಾರೆ. ಬಂಗಾಳದ ಕಡೆ ನವರಾತ್ರಿಯಂದು ವೈಭವದಿಂದ ಪೂಜೆಗೊಳ್ಳುವ ದುರ್ಗೆಯ ಮೂರ್ತಿ ಈ ಮಾತಿಗೆ ನಿದರ್ಶನ. ವರ್ಷವರ್ಷವೂ ಹೊಸ ಮೂರ್ತಿಯೇ. ಉತ್ಸವ ಮುಗಿದಮೇಲೆ ನದಿಯಲ್ಲಿ ಮುಳುಗಿಸಿ ಹಿಂದಿರುಗುತ್ತಾರೆ. ನಮ್ಮಲ್ಲಿ ಭಾದ್ರಪದ ಮಾಸದ ವಿನಾಯಕ ಚತುರ್ಥಿಯಂದು ಪೂಜೆಗೆ ಗಣೇಶನನ್ನು ಮಣ್ಣಿನಲ್ಲಿ ಹೊಸದಾಗಿ ಮಾಡಿ, ಪೂಜೆ

ಮುಗಿದ ಮೇಲೆ ನೀರಿನಲ್ಲಿ ಕಲಸುವುದಿಲ್ಲವೆ ? ಇಂಥ ನಿದರ್ಶನಗಳು ವರ್ಷದಲ್ಲಿ ಹಲವಾರು ಇವೆ.

ಯಾವ ಕಾಲಕ್ಕೂ ಇರಬೇಕೆಂದು ಮಾಡಿದ ಮೂರ್ತಿಯನ್ನು ಅಥವಾ ಮುಖವಾಡವನ್ನು ಇರಿಸಿಕೊಳ್ಳಲು ಗೂಡನ್ನೋ ಚೌಕಿಯನ್ನೋ, ಕೋಣೆಯನ್ನೋ, ಅಂಕಣವನ್ನೋ ಮೀಸಲಾಗಿಡುವ ಪದ್ಧತಿಯಿಂದಲೇ ಗುಡಿಗಳು ಆರಂಭವಾದುವು. ಮೊದಲಿಗೆ ಇಂಥ ಸ್ಥಳಕ್ಕೇನು ವಿಶೇಷ ಪ್ರಾಶಸ್ತ್ಯವಿರಲಿಲ್ಲ. ಅದರಲ್ಲಿ ಇರುತ್ತಿದ್ದ ಮೂರ್ತಿ ಉತ್ಸವಸಂದರ್ಭದಲ್ಲಿ ಅಲ್ಲಿಂದ ಹೊರಬಂದು ಊರ ಬೀದಿಗಳಲ್ಲಿ ಮೆರೆಯುವುದೇ ಮುಖ್ಯವಾದ ವಿವರವಾಗಿದ್ದಿತು. ಭಕ್ತರು ದೇವರಿದ್ದ ಕಡೆ ಹೋಗದೆ ದೇವರೇ ಭಕ್ತರ ಮನೆಮನೆಗೂ ಬಂದು ಪೂಜೆಗೊಳ್ಳುವುದು ಹಳೆಯ ಪದ್ಧತಿ. ಕೆಲವೊಮ್ಮೆ ಒಂದು ಗ್ರಾಮದ ದೇವತೆಯನ್ನು ಇತರ ಗ್ರಾಮಗಳಿಗೂ ಇಂಥ ಸಂಧರ್ಭಗಳಲ್ಲಿ ಒಯ್ಯುವುದುಂಟು. ದೈವದ ಹರಕೆಯ ಹರವು ಹೆಚ್ಚಾಗಿದ್ದಷ್ಟೂ ದೈವದ ಕಾರಣಿಕ ಹೆಚ್ಚು ! ಅಂತೂ ಇಲ್ಲಿ ಗುಡಿಯೆಂಬ ಕಟ್ಟಡ ಮುಖ್ಯವಲ್ಲ ; ಅದರಲ್ಲಿರುವ ಬಿಂಬ ಸ್ಥಿರವಾಗಿರದೆ ಚಲವಾಗಿರುವುದು ಮುಖ್ಯ. ನಮ್ಮಲ್ಲಿ ಮಾರಿಯನ್ನು ತಲೆಯ ಮೇಲೆ ಹೊತ್ತು ಬೀದಿಗಳಲ್ಲಿ ತಿರುಗಾಡುವ ಪೂಜಾರಿಗಳನ್ನು ನೋಡುವುದಿಲ್ಲವೆ ? ಇದು ನಡೆದೇಗುಲ ; ಚಲದೇವಾಲಯ.

ಸ್ಥಿರವಾದ ಗುಡಿಗೆ ಮೊದಲ ಹಂತ ನಡೆದೇಗುಲವೇ. ತಲೆಯ ಮೇಲೆ ಹೊತ್ತೋ, ಕೈಗಳಲ್ಲಿ ಆನಿಸಿಕೊಂಡೋ, ಪಲ್ಲಕ್ಕಿಯಲ್ಲಿ ಇರಿಸಿಕೊಂಡೋ, ಬಂಡಿಯ ಮೇಲೇರಿಸಿಯೋ ಅಲ್ಲಿಂದಿಲ್ಲಿಗೆ ಒಯ್ಯುವ ವ್ಯವಸ್ಥೆ ಮೊದಲಿಗೆ ಗ್ರಾಮದೇವತೆಗಳ ಸಂಬಂಧವಾಗಿ ಬಳಕೆಯಲ್ಲಿದ್ದಿತು. ಇದರ ಪಳಯುಳಿಕೆಯಾಗಿ ಈಗಲೂ ನಗರದ ದೊಡ್ಡ ದೇವಾಲಯಗಳಲ್ಲಿ ಬಲಿಹರಣ ಮಾಡುವಾಗ ಬಲಿದೇವರನ್ನು ಹೀಗೆಯೇ (ತಲೆಯ ಮೇಲೆ ಹೊತ್ತು ಅಥವಾ ಹೆಗಲಮೇಲೇರಿಸಿಕೊಂಡು, ಇಲ್ಲವೇ ಸಣ್ಣ ಪಲ್ಲಕ್ಕಿಯಲ್ಲಿ ಇರಿಸಿಕೊಂಡು) ಗುಡಿಯ ಒಳಪ್ರಾಕಾರದ ಸುತ್ತ ಕರೆದೊಯ್ಯುವ ಪದ್ಧತಿಯಿದೆ. ದೇವಾಲಯದ ಬೇರೆ ಬೇರೆ ಭಾಗಗಳಲ್ಲಿರುವ ಕ್ಷುದ್ರದೇವತೆಗಳಿಗೆ, ದಿಕ್ಪಾಲಕರಿಗೆ, ದ್ವಾರಪಾಲಕರಿಗೆ ದೇವರೇ ಅವರಿದ್ದಲ್ಲಿಗೆ ಬಂದು ಎಡೆಯಿಯುವುದು ಇದರ ತಾತ್ಪರ್ಯ.

ಗ್ರಾಮಜೀವನ ಸುವ್ಯವಸ್ಥಿತವಾದಾಗಲೂ, ಸ್ಥಿರವಾದ ಗುಡಿಯ ಭಾವನೆ ಬಂದದ್ದು ನಾಗರಪ್ರಭಾವ ಪ್ರಬಲವಾದಾಗಲೇ. ಹರಿದಾಡುವ ಹಾವಿನ ಕಲ್ಪನೆ ಜಾನಪದ ಮನೋಧರ್ಮದಲ್ಲಿ ಬಲವಾಗಿ ಬೇರೂರಿದ್ದುದರಿಂದ ಪೂಜೆಗೊಳ್ಳುವ



ಬಳ್ಳಾರಿ ಜಿಲ್ಲೆಯ ಮೈಲಾರದಲ್ಲಿ ಮೂಲಸ್ಥಾನ

ದೈವವು ನಡೆದಾಡುವಂತಿದ್ದರೇ ಜನರ ಒಲುವು ಊರುತ್ತಿದ್ದಿತು. ಹಳ್ಳಿಯ ನೆಮ್ಮದಿಯ ಬದುಕಿನಲ್ಲಿ ದೈವಗಳು ಮನೆಯ ಸುತ್ತ, ಹೊಲಗದ್ದೆಗಳಲ್ಲಿ, ಕೆರೆ ಕೊಳಗಳ ನೆರೆಯಲ್ಲಿ ಹಾರಾಡಿ, ಅಲೆದಾಡಿ, ಆಗಾಗ ಬೆಳಕಾಗಿ ಕಾಣಿಸಿಕೊಂಡು, ಬೇಡಿಕೊಂಡವರನ್ನು ಕಾಪಾಡಿ, ಹಗೆಗಳನ್ನು ಕಾಡಿ ತಮ್ಮ ಇರವನ್ನು ಸಾರುವುದೇ ದೊಡ್ಡ ಸುದ್ದಿಯಾಗುತ್ತದೆ. ಅವಕ್ಕೆ ನೆಲೆಯೆಂಬುದಿಲ್ಲದೆ, ಗಾಳಿಯಂತೆ ಅಲೆದಾಡುವುವೆಂಬುದೇ ಜನರ ಭಾವನೆ ; ಅವಕ್ಕೆ ನಿರ್ದಿಷ್ಟವಾದ ಆಕಾರವೂ ಇರದು, ಯಾವ ರೂಪವೆಂದರೆ ಅದನ್ನು ತಾಳಿಕೊಳ್ಳಬಲ್ಲವು. ಹಳ್ಳಿಯ ಚೌಕಟ್ಟಿನಲ್ಲಿ ಬಿಸಿಲುಮಾರಿ, ಮಳೆರಾಯ, ಗಾಳಿ, ಕೊಳ್ಳಿ ದೈವ, ನಾಗ, ಯಕ್ಷ, ಗಂಧರ್ವ, ಮುನೀಶ್ವರ, ಭೂತ, ದೈಯ, ತಟ್ಟು ಮೊದಲಾದುವು ಪ್ರಭಾವ ಶಾಲಿಗಳು. ಅವು ಗಂಡಾಗಬಹುದು, ಹೆಣ್ಣಾಗಬಹುದು, ಹಿತಕಾರಿಗಳಾಗಬಹುದು, ದುಷ್ಟದೈವಗಳಾಗಬಹುದು, ಚೆಲುವಾಗಬಹುದು, ಭೀಕರವಾಗಬಹುದು. ಒಂದು ಕಾಲದಲ್ಲಿ ಮನುಷ್ಯರಾಗಿದ್ದು ತಮ್ಮ ಕೆಚ್ಚೆದೆಯಿಂದ ಜನರ ಆದರವನ್ನು ಗಳಿಸಿಕೊಂಡು, ಕಾದಾಡಿ ಮಡಿದು ಜನರ ನೆನಪಿನಲ್ಲಿ ಉಳಿದುಕೊಂಡವರಾಗಬಹುದು, ಭೂಮಿಯ ನೆಂಟನ್ನು ಎಂದೂ ಪಡೆದುಕೊಂಡವರೇ ಅಲ್ಲದಿರಬಹುದು.

ಏನಾದರಾಗಲಿ ಈ ದೈವಗಳ ಆಸಕ್ತಿ, ಉತ್ಸಾಹಗಳು ಪ್ರಾದೇಶಿಕವಾದುವು. ಹಳ್ಳಿ, ಮಾಗಣೆ, ಬೀಡು, ಹೊಲ, ಗದ್ದೆ, ತೋಟ ಇಷ್ಟೇ ಅವರ ಸಂಚಾರದ ಹರವು ; ಅದರೊಳಗೆ ಇದ್ದವರನ್ನು ನೋಡಿಕೊಳ್ಳುವುದಷ್ಟೇ ಅವರ ಕೆಲಸ. ಇಷ್ಟರಾಚೆ ಅವರು ಸಾಗುವುದಿಲ್ಲ. ಜನಾಂಗದ ಒಬ್ಬೊಬ್ಬ ವ್ಯಕ್ತಿಯನ್ನೂ ಅವರು ಬಲ್ಲರು, ಅವನ ಬಯಕೆಗಳನ್ನೂ ತೊಂದರೆಗಳನ್ನೂ ಅರಿತುಕೊಳ್ಳುವರು, ಅವನನ್ನು ಎಚ್ಚರಿಸುವರು, ಅವನಿಗೆ ನೆರವಾಗುವರು, ಮಾತಿಗೆ ತಪ್ಪಿದರೆ ಮುನಿಸಿಕೊಳ್ಳುವರು. ದೈವಕ್ಕೂ ವ್ಯಕ್ತಿಗೂ ನೇರವಾದ ನೆಂಟು, ಅವರ ನಡುವೆ ಸರಳವಾದ ಒಪ್ಪಂದ ; ಅವರ ನಡುವಣ ವ್ಯವಹಾರ ನಿತ್ಯ ಜೀವನಕ್ಕೆ ಸಂಬಂಧಪಟ್ಟುದೇ. ಅವನನ್ನು ಕಾಪಾಡಲೆಂದು, ಕಾಡಲೆಂದು ಯಾವ ರೂಪವನ್ನಾದರೂ ತಾಳಿಕೊಳ್ಳುವರು.

ಹೀಗೆ ಎಂದೂ ಅಡ್ಡಾಡುತ್ತ ಕೆಲಸ ಮಾಡುವ ದೈವಗಳ ದೂರದ ನೆಲೆ ಅಳ್ಳಾಡದೆ ನಿಲ್ಲುವ ಬೆಟ್ಟವೆಂದು ಬಗೆದದ್ದು ಸೋಜಿಗವೆನಿಸುತ್ತದೆ. ಬೆಟ್ಟ-ಗುಡ್ಡಗಳನ್ನೇ ದೈವಗಳೆಂದು ಬಗೆಯುವ ಮನೋಧರ್ಮ ತುಂಬ ಪ್ರಾಚೀನವಾದುದು. ಪ್ರಪಂಚದ ಹಲವು ಹಳೆಯ ಜನರಲ್ಲಿ ಇಂದಿಗೂ ಉಳಿದುಬಂದಿ

ರುವ ಭಾವನೆ ಇದು. ಜಪಾನೀಯರ 'ಕಮಿ', ಚೀಣೀ ಜನರ 'ಶೆನ್', ಪರ್ಶಿಯದೇಶದವರ 'ಅಲ್-ಬೂರ್ಸ್', ಗ್ರೀಕರ 'ಒಲಿಂಪಸ್', ಕೆಲ್ಟಿಕ್‌ಜನರ 'ಫೋಇನಿನಸ್', ಬೆಬಿಲೋನಿಯದವರ 'ಎನ್‌ಲಿನ್' ಮೊದಲಾದುವೆಲ್ಲ ಬೆಟ್ಟದ ಜೀವಗಳೇ, ಗಿರಿದೈವಗಳೇ. ನಮ್ಮ ದೇಶದಲ್ಲಂತೂ ಹಿಮಾಲಯ, ಸಹ್ಯ, ವಿಂಧ್ಯ, ಮಲಯ, ಶ್ರೀಶೈಲ, ಸಿಂಹಾಚಲ, ಮಹಾಬಲ ಮೊದಲಾದುವೆಲ್ಲ ಸಾವಿರಾರು ವರ್ಷಗಳಿಂದ ಪೂಜೆಗೊಳ್ಳುತ್ತ ಬಂದಿರುವ ಬೆಟ್ಟಗಳೇ. ಮುಂಡರು, ಸಂತಾಲರು, ಮಿಹಿಲಿಗಳು, ಕೊರವರು, ಕೋಲರು, ಕುರುಂಬರು, ಮಲೈ-ಪಂತುರನ್ ಜನರು, ತೋಡರು ಮೊದಲಾದ ಆದಿವಾಸಿಗಳಲ್ಲಿ ಬೆಟ್ಟದ ಪೂಜೆ ಮುಖ್ಯವಾದ ವಿವರವೇ.

ದಕ್ಷಿಣದ ಕಡೆ ತೋಡರು, ಬಡಗರು, ಸೋಲಿಗರು, ಕುರುಂಬರು ಮತ್ತಿತರ ಬುಡಕಟ್ಟಿನ ಜನರು ಸಣ್ಣಸಣ್ಣ ಕಲ್ಲುಗಳಲ್ಲಿ ಬೆಟ್ಟದ ಜೀವವನ್ನು ಬರ ಮಾಡಿಕೊಂಡು, ಈ ಕಲ್ಲುಗಳನ್ನು ತಮ್ಮ ಬೀಡಿನಲ್ಲಿರಿಸಿಕೊಂಡು ಪೂಜೆಮಾಡು ವರು. ಬೆಟ್ಟವು ಅಚಲದೈವವಾದರೂ, ಈ ಕಲ್ಲುಗಳು ಚಲದೈವಗಳು. ಬೆಟ್ಟವು ದೂರದಲ್ಲೇ ಇದ್ದು ತನ್ನ ಮೈ ಹರವಿನಿಂದ ಬೆದರಿಸುವುದಾದರೆ, ಈ ಕಲ್ಲು ಗಳು ಬೀಡಿನಲ್ಲೇ ಇದ್ದುಕೊಂಡು ಕಾಪಾಡುವುವು. ಶಿವಲಿಂಗವೂ ಪರ್ವತದ ಪ್ರತೀಕವೇ ಅಲ್ಲವೆ ? ಮಲ್ಲಿಕಾರ್ಜುನ ಮಲೆಯ ದೇವರಲ್ಲವೆ ? ಗುಡಿಯು ಮನುಷ್ಯ ಮಾಡಿಟ್ಟುಕೊಂಡ ಬೆಟ್ಟ, ಅದರೊಳಗಿರುವ ಬಿಂಬ ಬೆಟ್ಟದ ಸತ್ತ್ವ.

ಹಳೆಯ ಜನರು ಹೆಣಗಳನ್ನು ಒಪ್ಪಮಾಡುವ ಬಗೆಯಲ್ಲೂ ಬೆಟ್ಟದ ನೆಂಟಿದೆ. ಹೆಣವನ್ನು ಗುಡ್ಡದ ಮೇಲೊಯ್ದು ಅಲ್ಲಿ ಬಿಟ್ಟು ಬರುವ ಪದ್ಧತಿ ಹಳೆಯದೇ. ಸತ್ತವನನ್ನು ಬೆಟ್ಟದ ಸತ್ತ್ವವು ಸ್ವೀಕರಿಸಿಕೊಳ್ಳುವುದೆಂದು ಹಿಂಬದಿಯ ನಂಬುಗೆ. ಸತ್ತವನ ಜೀವವು ಬೆಟ್ಟದ ಮೇಲೇರಿ ಹೋಗುವುದೆಂಬ ಭಾವನೆ ಪ್ರಪಂಚದ ಹಲವು ಜನರಲ್ಲುಂಟು. ಬೆಟ್ಟವೇ ಎಲ್ಲ ಜೀವಗಳ ಸಹಜ ತಾಣ ; ಜನಾಂಗದ ಹಿರಿಯರು ಸತ್ತಮೇಲೆ ಬೆಟ್ಟವನ್ನೇರಿ ಅಲ್ಲಿ ನೆಲೆಸುವರು. ಬೆಟ್ಟವನ್ನು ಆಶ್ಚರ್ಯದಿಂದ ಭೀತಿಯಿಂದ ಭಕ್ತಿಯಿಂದ ಹಿಂದಿನವರು ಕಾಣು ತ್ತಿದ್ದರಲ್ಲವೆ ? ಬೆಟ್ಟದ ಎತ್ತರ, ಮಂಜು ಮುಸುಕಿದ ತಲೆ, ಮೈಮೇಲೆಲ್ಲ ಅಡರಿದ ಕಾಡು, ಚಾಚಿ ನಿಂತ ಕೋಡುಗಳು ಇವನ್ನೆಲ್ಲ ನೋಡಿದಾಗ ಎದೆಯಲ್ಲಿ ಅಳುಕು ಒದಗುವುದು ಸಹಜವೇ. ಸತ್ತವನು ಮಾತ್ರ ಬೆಟ್ಟದ ಮೇಲೆ ನೆಲೆಸಿ ಯಾನು ; ಉಸಿರಾಡುತ್ತಿರುವಾಗ ನೆಲೆಸುವುದಾಗದು. ಆದುದರಿಂದಲೇ ಸತ್ತವ ನನ್ನು ಬೆಟ್ಟಕ್ಕೆ ಎಳೆದೊಯ್ಯುತ್ತಿದ್ದರು. ವಸತಿಯ ನೆರೆಯಲ್ಲಿ ಬೆಟ್ಟವಿರದಿದ್ದಾಗ

ಹೆಣವನ್ನು ಭೂಮಿಯೊಳಗೆ ಹುಗಿದು ಅದರ ಮೇಲೆ ಬೆಟ್ಟವನ್ನು ಪ್ರತಿನಿಧಿಸುವ ಮಣ್ಣುಗುಡ್ಡೆಯನ್ನು, ಕಲ್ಲುಗಳನ್ನು ಪೇರಿಸುತ್ತಿದ್ದರು.

ಸತ್ತವನಿಗಾಗಿ ನಡೆಯುವ ಸಂಸ್ಕಾರಗಳೆಲ್ಲವೂ ಬೆಟ್ಟವನ್ನು ಪ್ರತಿನಿಧಿಸುವ ಕಲ್ಲಿನ ಮುಂದೆ, ಅದರ ಸಾಕ್ಷಿಯಾಗಿ ನಡೆಯುತ್ತಿದ್ದುವು. ಸತ್ತವನನ್ನು ಕಲ್ಲಿನಿಂದಲೇ ಪ್ರತಿನಿಧಿಸುವ ವಾಡಿಕೆಯೂ ಬಳಕೆಯಲ್ಲಿದ್ದಿತು. ಹಿಂದೆ ಸತ್ತ ಹಿರಿಯರನ್ನೆಲ್ಲ ಕಲ್ಲುಗಳಿಂದಲೇ ಕಾಣಿಸಿ, ಕಲ್ಲಿನ ರಾಶಿಯೇ ಹಳೆಯ ಜನಾಂಗಗಳಲ್ಲಿ ಇರುತ್ತಿದ್ದಿತು. ಜನಾಂಗದ ವ್ಯಕ್ತಿಯೊಬ್ಬ ಸತ್ತನೆಂದರೆ ಅವನಿಗಾಗಿ ಒಂದು ಕಲ್ಲನ್ನು ಈ ರಾಶಿಗೆ ಸೇರಿಸುತ್ತಿದ್ದರು. ತೀರಿಕೊಂಡವನನ್ನು ಪ್ರೇತವಾಗಿ ಭಾವಿಸಿ ಕಲ್ಲೊಂದರಿಂದ ಅದನ್ನು ಪ್ರತಿನಿಧಿಸುವ ವಾಡಿಕೆ ನಮ್ಮ ದೇಶದಲ್ಲಿ ಸಭ್ಯಜನರಲ್ಲಿಯೂ ಉಂಟು ; ಇದನ್ನು 'ಪ್ರೇತಶಿಲೆ'ಯೆಂದು ಕರೆಯುತ್ತಾರೆ. ಹಲವು ಹಳೆಯ ಜನರಲ್ಲಿ, ವ್ಯಕ್ತಿಯೊಬ್ಬ ಸತ್ತರೆ ಅವನನ್ನು ಕುರಿತ

ನಂದಾವರದ ಶಂಕರನಾರಾಯಣ

ಅಪರಕ್ರಿಯೆಗಳು ಮುಗಿದ ಮೇಲೆ, ನೆರೆಯಲ್ಲಿನ ಬೆಟ್ಟದ ಕಡೆ ಕಲ್ಲೊಂದನ್ನು ಎಸೆಯುವ ಪದ್ಧತಿ ಕಾಣಬರುತ್ತದೆ. ಸತ್ತವನ ಜೀವವು ಬೆಟ್ಟದ ಕಡೆ ಓಡುವುದೆಂದು ಇದರ ತಾತ್ಪರ್ಯ.

ಬೆಳ್ತಂಗಡಿಯ ಸೂರ್ಯಾಲಯದಲ್ಲಿ ಶಿವ

ನಮ್ಮ ದೇಶದಲ್ಲಿ ಲಿಂಗಪೂಜೆ ಹೀಗೆಯೇ ಮೊದಲಾಯಿತೆಂದು ತೋರುತ್ತದೆ. ಲಿಂಗಪೂಜೆಯ ಗುಟ್ಟನ್ನು ಲೈಂಗಿಕವ್ಯಾಪಾರದ ವಿವರಣೆಯಿಂದ ಬಿಡಿಸುವ ಯತ್ನ ನಡೆದಿದೆಯಷ್ಟೆ ? ಲಿಂಗಪೂಜೆಯ ವಿವರಗಳನ್ನು ಅರಿಯದವರು, ನಮ್ಮ ನಾಡಿನ ಧರ್ಮದ ಮೂಲರೂಪವನ್ನು ತಿಳಿಯದವರು ಮಾಡಿರುವ



ಗಂಗಾನದಿಯ ಬಯಲಿನಲ್ಲಿ ದೊರೆತ ಕ್ರಿಸ್ತಪೂರ್ವ ಸಾವಿರ ವರ್ಷಗಳಷ್ಟು
ಹಳೆಯ ತಾಮ್ರ ಪುತ್ಥಳಿ. ಇದರ ತಾತ್ಪರ್ಯ ತಿಳಿಯುವುದಿಲ್ಲವಾದರೂ
ಬೆಟ್ಟ, ಮರ ಎರಡರ ಆಕಾರವೂ ಬೆರೆತುಕೊಂಡಿರುವುದನ್ನು ಗಮನಿಸಬಹುದು

ಯತ್ನ ಇದು. ಶಿವಲಿಂಗದ ಕಲ್ಪನೆಯಲ್ಲಿ ಶಿಶ್ನದ ಸಂಬಂಧ ಏನೇನೂ ಇರದು; ಕಾಮುಕತೆಗೂ ಶಿವಪೂಜೆಗೂ ಯಾವ ಬಗೆಯ ನೆಂಟೂ ಕಾಣದು. ಲಿಂಗವು ಪರ್ವತದ ಪ್ರತೀಕವೆಂಬುದು ಲಿಂಗದ ಆಕಾರದಿಂದಲೂ ಅದಕ್ಕೆ ಸಂಬಂಧಿಸಿದ ಪೂಜಾಕಲ್ಪಗಳಿಂದಲೂ ಮಂತ್ರಗಳಿಂದಲೂ ಸ್ಪಷ್ಟವಾಗುತ್ತದೆ. ತೀರ ಪ್ರಾಚೀನ ವೆನಿಸಿ ಪೂಜೆಗೊಳ್ಳುತ್ತಿರುವ ಯಾವ ಲಿಂಗವನ್ನಾದರೂ ನೋಡಿದರೆ ಸ್ಥಾವರ ಪರ್ವತದ ನೆನಪು ಬರದಿರದು.

ಬಾರಕೂರು ಗುಡಿಯ ಪಂಚಲಿಂಗೇಶ್ವರ

ಅಷ್ಟಲ್ಲದೆ, ಬೆಟ್ಟದ ಕೋಡುಗಳಂತೆ ಕಾಣುವ ಹಾವಿನ ಹುತ್ತಗಳನ್ನು ಶಿವನ ಪ್ರತೀಕವೆಂದು ಪೂಜಿಸುವುದಿದೆ; ವಲ್ಮೀಕೇಶ್ವರನೆಂಬ ಹೆಸರು ಈ ಪೂಜಾ ಬಿಂಬಗಳಿಗೆ ಸಲ್ಲುತ್ತದೆ. ಹಲವಾರು ಗುಡಿಗಳಲ್ಲಿ ಮೂಲಸ್ಥಾನ ಈ

ಘಟ್ಟದ ಕಡೆ ಚಾಮುಂಡಿಯ ಶಾಸ್ತಾವು - ಕಲ್ಲುಗಳು

ಬಗೆಯ ಹುತ್ತವೇ. ಹಾವಿಗೂ ಬೆಟ್ಟಕ್ಕೂ, ಹಾವಿನ ಜೀವಕ್ಕೂ ಬೆಟ್ಟದ ಜೀವಕ್ಕೂ ಸಂಬಂಧವನ್ನು ತೋರಿಸುವ ಹಲವಾರು ಜಾನಪದ ಕಥೆಗಳುಂಟು; ಧಾರ್ಮಿಕ ಚೌಕಟ್ಟಿನಲ್ಲಿ ಈ ಕಥೆಗಳು ಸೇರಿಬಂದಿವೆ. ಲಿಂಗಕ್ಕೂ ಹಾವಿಗೂ ನೆಂಟನ್ನು ಕಲ್ಪಿಸಿಕೊಂಡಿರುವುದನ್ನು ಹಿಂದೆಯೇ ಪ್ರಸ್ತಾಪಿಸಿದೆವಲ್ಲವೆ? 'ನಾಗಲಿಂಗ' ಎಂಬ ಮಾತು ಈ ಕಲ್ಪನೆಯ ನಿದರ್ಶನ.

ಪ್ರಾಚೀನ ಜನಾಂಗದ ಕಟ್ಟಳೆಗಳು ಜರುಗುವ ಆವರಣದೊಳಗೆ ಗುಡಿಯನ್ನು ಬೆಟ್ಟದ ಪ್ರತಿನಿಧಿಯೆಂದೇ ಬಗೆಯಬೇಕು. ಈ ಬೆಟ್ಟ ಮತ್ತು ಸ್ಥಳ ವೃಕ್ಷ ಎರಡೂ ದೈವದ ಕಲ್ಪನೆಯ ಎರಡು ಮುಖಗಳು. ವೃಕ್ಷವು ಹೊರ ಮೈಯಾಗಿ ಹರಡಿಕೊಂಡರೆ, ಬೇರುಗಳನ್ನು ಅಡಗಿಸಿಕೊಂಡು ರೆಂಬೆ – ಕೊಂಬೆಗಳನ್ನು ಮೇಲೆ ಕಾಣಿಸಿದರೆ, ಬೆಟ್ಟವು ಮೇಲ್ಮುಖನಾಗಿ ಎದ್ದು ನಿಲುತ್ತದೆ, ತುದಿಯನ್ನು ಬಾನಿನಲ್ಲಿ ಅಡಗಿಸಿಕೊಳ್ಳುತ್ತದೆ. ಬೆಟ್ಟವು "ಊರ್ಧ್ವಮೂಲ, ಅವಾಕ್‌ಶಾಖ"ವಾದ ವೃಕ್ಷ. ಸೈಂಧವಸಂಸ್ಕೃತಿಯ ಮುದ್ರೆಗಳಲ್ಲಿ ಇಂಥ ಸಂಕೇತಗಳು ಚಿತ್ರಿತವಾಗಿರುವುದನ್ನು ಕಾಣಬಹುದು. ಗಿರಿ–ವೃಕ್ಷಗಳ ಯುಗಳ ಕಲ್ಪನೆ ಅಲ್ಲಿ ಮಾತ್ರವಲ್ಲದೆ ವೈದಿಕಸಂಸ್ಕೃತಿಯ ಸಾಹಿತ್ಯದಲ್ಲೂ ಕಾಣಸಿಗುತ್ತದೆ. ಸಭ್ಯತೆಯ ನೆಲೆಯಲ್ಲಿ ಮೂಡಿಕೊಂಡ ಗುಡಿಯ ವಿಮಾನವೂ ಗುಡ್ಡದಾಕಾರದಲ್ಲಿಯೇ ಇರುವುದು, ಗೋಪುರವು ಬೆಟ್ಟದ ಕೋಡಿನಂತೆ ಬಾನಿನತ್ತ ಚಾಚಿ

ಗಂಗನಾಡಿನ ನರಸಿಂಹ

ನಿಲ್ಲುವುದು ಆಕಸ್ಮಿಕವಲ್ಲ ; ಒಂದೊಂದು ಗುಡಿಗೂ ವಿಶಿಷ್ಟವಾದ ಸ್ಥಳವೃಕ್ಷವಿರುವುದೂ, ಯಾದೃಚ್ಛಿಕವಲ್ಲ. ಶೈವಾಗಮವೊಂದು ಹಾವಿನ ಹುತ್ತವನ್ನು ಬೆಟ್ಟವೆಂದೂ ಹೆಡೆಯನ್ನು ಬಿಚ್ಚಿ ನಿಂತಿರುವ ಹಾವನ್ನು ಮರವೆಂದೂ ಬಣ್ಣಿಸಿದೆ. ಲಿಂಗವು ಬೆಟ್ಟ; ಅದರ ಮೇಲೆ ಹೆಡೆಗಳನ್ನುಳ್ಳ ಹಾವು ವೃಕ್ಷ. ಹೀಗೇ ನಾಗಲಿಂಗದಲ್ಲಿ ಗಿರಿ–ವೃಕ್ಷಗಳ ಯುಗಳಸಂಕೇತವಿದೆ.

ನಾಡಿನ ಹಲವಾರು ಗುಡಿಗಳಲ್ಲಿ ಬರಿಯ ಕಲ್ಲುಗುಂಡುಗಳನ್ನೋ ಮರದ ಕೊರಡುಗಳನ್ನೋ ಪೂಜಿಸುವುದಿದೆ. ಹೀಗೆ ಹೇಳಿದರೆ ಶ್ರದ್ಧಾಳುಗಳಿಗೆ ಬೇಸರವಾದೀತೇನೋ ; ಆದರೆ ಇದು ದಿಟ. ಕಾಶಿಯ ವಿಶ್ವನಾಥಲಿಂಗ ಯಾವುದೋ ಕಾಲದಲ್ಲಿ ನರ್ಮದಾನದಿಯ ಮಡಿಲಿಂದ ಆಯ್ದುಕೊಂಡ ಒಂದು ಕಲ್ಲುಗುಂಡು; ಮಹಾಕವಿ ಕಾಳಿದಾಸನು ಹಾಡಿ ಹೊಗಳಿರುವ ಉಜ್ಜಯಿನಿಯ ಮಹಾಕಾಲಲಿಂಗವೂ ಇಂಥದೇ. ಕಾಂಚೀಪುರ ಮತ್ತು ರಾಮೇಶ್ವರ ದೇವಾಲಯಗಳಲ್ಲಿರುವ ಲಿಂಗಗಳು ಮರಳುಗುಡ್ಡೆಗಳು (ಸೈಕತಲಿಂಗಗಳು). ಉತ್ತರ ದೇಶದಲ್ಲಿ



ಕನಕಗಿರಿಯ ನರಸಿಂಹ



ಸಾವನದುರ್ಗದ ನರಸಿಂಹ

ತುಂಬ ಜನಪ್ರಿಯನಾದ ವೈದ್ಯನಾಥ ಲಿಂಗವು ಉಳಿ ಮುಟ್ಟದ ಗಟ್ಟಿಕಲ್ಲು. ಹಲವಾರು ಬೆಟ್ಟದೇವಾಲಯಗಳಲ್ಲಿರುವ ನರಸಿಂಹಮೂರ್ತಿಗಳು ಕಲ್ಲುಬಂಡೆಗಳೇ, ಅಥವಾ ಕಂಬದಂತೆ ಕಡೆದ ಕಲ್ಲು ಹಲಗೆಗಳೇ; ಅದರ ಮೇಲೆ ಶಂಖ-ಚಕ್ರಗಳ ಚಿಹ್ನೆಗಳನ್ನು ಮೂಡಿಸಿರುತ್ತಾರೆ ಅಷ್ಟೆ. ಪ್ರಸಿದ್ಧವಾದ ಜಗನ್ನಾಥ-ಪುರಿಯ ದೇವರುಗಳು ಸ್ಥೂಲವಾಗಿ ಕಡೆದ ಮರದ ದಿಮ್ಮಿಗಳು. ಕಾಮರೂಪದ ಸುವಿಖ್ಯಾತ ಕಾಮಾಖ್ಯ ದೇವಾಲಯದ ಮೂಲಸ್ಥಾನ ಡೊಗರಿರುವ ಬಂಡೆಯೊಂದು. ಇಂಥ ನಿದರ್ಶನಗಳು ನೂರಾರು ದೊರೆಯುವುವು.

ಗುಡಿಯ ಹಿರಿಮೆಯಿರುವುದು ಶಿಲ್ಪಿಯ ಕೈಕೆಲಸದಲ್ಲಲ್ಲ, ಜಾನಪದ ಲಕ್ಷಣದಲ್ಲಿ ಎಂದು ಈ ನಿದರ್ಶನಗಳ ತಾತ್ಪರ್ಯ. ಶಿಲ್ಪಿಗಳು ಗುಡಿಯನ್ನು

ಪುರಿ - ಜಗನ್ನಾಥ ಕ್ಷೇತ್ರದ ದೇವರು

ಕಟ್ಟುವ ಕಲೆಯನ್ನು ಕಲಿಯುವ ಕಾಲಕ್ಕೆ ತುಂಬ ಮೊದಲೇ ಗುಡಿಗಳಿದ್ದುವು. ಮೂರ್ತಿಲಕ್ಷಣವನ್ನು ಹೇಳುವ ಆಗಮಗಳು ಮೈದಳೆಯುವ ಮೊದಲೇ ಪೂಜೆಗೊಳ್ಳುತ್ತಿದ್ದ ಮೂರ್ತಿಗಳಿದ್ದುವು. ಬೆಟ್ಟ-ಗುಡ್ಡಗಳ ಆಕೃತಿಗಳು ಪೂಜಾರ್ಹವಾದುವೆಂಬ ಭಾವನೆ ಬೇರೂರಿದ ಮೇಲೇ ಗುಡಿಗಳು ಮೂಡಿಕೊಂಡುವು.

ಈಗಿನ ಗುಡಿಗಳಲ್ಲಿ ಕಾಣಸಿಗುವ ಇನ್ನೊಂದು ವಿವರವೂ ಗಮನಾರ್ಹವಾದುದು. ಗುಡಿಗಳಲ್ಲಿ ಮೂಲಸ್ಥಾನದ ಮೂರ್ತಿಗೆ 'ಅಚಲ-ಬೇರ' ಅಥವಾ 'ಧ್ರುವಬೇರ'ವೆಂದು ಹೆಸರು. ಇದು ಬೆಟ್ಟದಂತೆ ಇರುವುದರಿಂದ ಅಚಲ ಎಂದು ವಿವರಣೆಯಿದೆ. ಮೂಲಸ್ಥಾನ ಬೆಟ್ಟದ ಕಲ್ಪನೆಯೇ. ಉತ್ಸವಗಳಿಗೆ,

ಉಳಿದ ಕಟ್ಟಳೆಗಳಿಗೆ 'ಚಲಬೇರ', ಎಂದರೆ ಅಲ್ಲಿಂದಿಲ್ಲಿಗೆ ಒಯ್ಯುವ ಮೂರ್ತಿಗಳು. ಧ್ರುವಬೇರವನ್ನಾದರೆ ಗರ್ಭಗುಡಿಯಿಂದ ಹೊರಗೆ ತರುವುದೇ ಇಲ್ಲ; ಚಲಬೇರವು ಊರಿನಲ್ಲೆಲ್ಲ ಅಡ್ಡಾಡಬಹುದು. ಧ್ರುವಬೇರವು ಗರ್ಭಗುಡಿಯಲ್ಲೇ ಅಡಗಿರುವುದರಿಂದ ಅದು ಮರದ ಬೇರಿದ್ದಂತೆ ಎನ್ನುವ ವಿವರಣೆಯೂ ಇದೆ; ಕಾಂಡದಿಂದ ಹೊರಗೆ ಹರಡಿಕೊಂಡು ಎಲ್ಲೆಲ್ಲೂ ಕಾಣಿಸಿಕೊಳ್ಳುವ ರೆಂಬೆ-ಕೊಂಬೆಗಳಂತೆ ಚಲಬೇರ. ಚಲಬೇರವನ್ನು ಲೋಹದಲ್ಲಿ ಮಾಡುತ್ತಾರೆ. ಆದರೆ ಧ್ರುವಭೇರ ಎಂದೂ ಕಲ್ಲಿನದೇ. ಹಳೆಯ ಗುಡಿಗಳಲ್ಲಿ ಮರದಿಂದ ಕಡೆದ ಮೂರ್ತಿಗಳೂ ಇರುತ್ತಿದ್ದುವು. ಕೆಲವು ಕಡೆ ಗಾರೆಗಚ್ಚಿನ ಮೂರ್ತಿಗಳೂ ಇವೆ. ಗುಡಿಯ ಬೇರವ್ಯವಸ್ಥೆಯಲ್ಲಿ ಮೂಲಬೇರವೆನಿಸಿಕೊಳ್ಳುವುದು ಧ್ರುವವಾದುದೇ. ಇದರ ಹಿರಿಮೆಯಿಂದಲೇ ಉಳಿದ ಬೇರಗಳಿಗೆ ಮರ್ಯಾದೆ ನಡೆಯುವುದು.

ಧ್ರುವಬೇರಕ್ಕೆ ಸಲ್ಲುವ ಈ ಅಗ್ರಸನ್ಮಾನ ಅದು ಬೆಟ್ಟದ ಪ್ರತಿನಿಧಿಯೆಂಬ ಜಾನಪದ ಚೌಕಟ್ಟಿನಲ್ಲಿಯೇ ಅರ್ಥವಾಗುವುದು. ಆಗಮಗಳು ಮೈದಳೆದಾಗ ಕಟ್ಟಳೆಗಳ ಬಗೆಗಳು ಹೆಚ್ಚಿಕೊಂಡು ಒಂದೊಂದು ಕಟ್ಟಳೆಗೆ ಒಂದೊಂದು ಬೇರವು ಸಿದ್ಧವಾಯಿತು. ದಕ್ಷಿಣದ ವೈಷ್ಣವ ಸಂಪ್ರದಾಯದ ಗುಡಿಗಳಲ್ಲಿ 'ಪಂಚಬೇರ'ಗಳ ಏರ್ಪಾಡಿದೆ; ಉತ್ಸವಬೇರ, ಸ್ನಪನಬೇರ, ಬಲಿಬೇರ, ಕೊಲುವುಬೇರ ಇವು ಚಲಬೇರಗಳು; ಧ್ರುವಬೇರವು ಇವು ನಾಲ್ಕೂ ಬೇರಗಳಿಗೆ ತಾಯಿಬೇರಿದ್ದಂತೆ. ಆಗಮಸಂಪ್ರದಾಯವು ಸಭ್ಯತೆಯ ದಾರಿಯಲ್ಲಿ ಬೆಳೆದು ಬಂದ ಪ್ರಕ್ರಿಯೆ. ಆದರೂ ಆಗಮದ ವಿಧಿಗಳೂ ಜಾನಪದ ತಾತ್ಪರ್ಯವಿರುವ ಧ್ರುವಬೇರಕ್ಕೆ ಆದ್ಯತೆಯನ್ನು ಕೊಟ್ಟಿರುವುದನ್ನು ಗಮನಿಸಬೇಕು. ಉತ್ಸವಬೇರಗಳಿಲ್ಲದ ಗುಡಿಯಿರಬಹುದು, ಆದರೆ ಧ್ರುವಬೇರವಿಲ್ಲದ ಗುಡಿಯಿರಲಾರದು. ಧ್ರುವಬೇರವು ಲೋಹದ್ದಾಗಿರಬಾರದೆಂಬ ನಿಷೇಧವೂ ಆಗಮದಲ್ಲಿದೆ; ಕಲ್ಲಿನದೇ ಆಗಿರಬೇಕು. ಮೇಲಾಗಿ, ತಾನೇ ತಾನಾಗಿ ಮೈದುಂಬಿ ಬಂದ 'ಸ್ವಯಂಭು' ಬಿಂಬವಾದರೆ ಅದರ ಹೆಗ್ಗಳಿಕೆ ಸ್ವತಃಸಿದ್ಧವಾಗಿಯೇ ಬರುತ್ತದೆ. ಎಂದರೆ ಶಿಲ್ಪಿಯ ಕೈಕೆಲಸವನ್ನು ಕಾಣದ ಕಲ್ಲುಬಂಡೆಗೇ ಆಗಮದಲ್ಲಿ ಹೆಚ್ಚಿನ ಸನ್ಮಾನ, ಬೆಟ್ಟದ ಪ್ರತೀಕವೆಂಬ ಕಾರಣದಿಂದ.

ಮಾತೃದೇವತೆಗಳು

ಎರ್ಹ್ವಿನ್‌ಫೆಲ್ಸ್ ಮೊದಲಾದ ಮಾನವಶಾಸ್ತ್ರಜ್ಞರು ನಮ್ಮ ನಾಡಿನಲ್ಲಿ ಮಾತೃದೇವತೆಯ ಪೂಜೆಮಾಡುವ ಬುಡಕಟ್ಟುಗಳನ್ನೂ 'ಹಿಂದುಳಿದ' ಜನಾಂಗಗಳನ್ನೂ ಪಟ್ಟಿಮಾಡಲು ಹೆಣಗಾಡಿದ್ದಾರೆ. ಇದು ಈ ಬುಡಕಟ್ಟುಗಳಿಗಾಗಲೀ 'ಹಿಂದುಳಿದ'ವರೆಂಬ ಜನರಿಗಾಗಲೀ ಸೀಮಿತವಾದ ಕಲ್ಪನೆಯಲ್ಲವೆಂದು ಈ ವಿಜ್ಞಾನಿಗಳಿಗೆ ತಿಳಿಯದು. ಮಾತೃದೇವತೆಯ ಕಲ್ಪನೆಗಳು, ಕಟ್ಟಳೆಗಳು ಇಲ್ಲದಿರುವ ಜನಾಂಗವೇ ಇರದು. 'ಹಿಂದುಳಿದ'ವರಿರಲಿ, ಸಭ್ಯಸಮಾಜದಲ್ಲಿ ಕೂಡ ಮಾತೃದೇವತೆಯ ಆರಾಧನೆ ಹರಡಿಕೊಂಡಿದೆ. 'ಮುಂದುವರೆದ' ಜನರಲ್ಲಿಯೇ ಇದು ಬಲವಾಗಿ ಬೇರೂರಿರುವುದು. ಈ ಆರಾಧನೆಯ ಆಕರ್ಷಣೆ ನಮ್ಮ ದೇಶದಲ್ಲಿ ಎಲ್ಲ ಕಾಲದಲ್ಲಿಯೂ ಉಳಿದು, ಬೆಳೆದು ಬಂದದ್ದೇ ; ದೇಶದ ಎಲ್ಲ ಪ್ರಾಂತ್ಯಗಳಲ್ಲಿಯೂ ಹರಡಿಕೊಂಡಿರುವುದೇ. ಸೈಂಧವಸಂಸ್ಕೃತಿಯಿಂದ ಇಂದಿನವರೆಗೂ ಈ ಆರಾಧನೆಯ ಕುರುಹುಗಳು ಸ್ಪಷ್ಟವಾಗಿಯೇ ಕಾಣಿಸುತ್ತವೆ.

ಮಾತೃಪ್ರಧಾನವಾದ ಜನಾಂಗದಲ್ಲಿ, ಬೇಸಾಯವೇ ಮುಖ್ಯವೃತ್ತಿಯಾಗಿ ಉಳ್ಳ ಜನರಲ್ಲಿ ಮಾತೃದೇವತೆಯ ಆರಾಧನೆ ಮೊದಲಾಯಿತೆಂಬ ವಾದದಲ್ಲಿ ಸ್ವಲ್ಪಮಟ್ಟಿಗೆ ಹುರುಳಿದೆ. ನಮ್ಮ ದೇಶದಲ್ಲಿ ಮಾತ್ರವಲ್ಲದೆ, ಸಿರಿಯ, ಏಷ್ಯಾಮೈನರ್, ಈಜಿಪ್ಟ್‌ಗಳಲ್ಲೂ ಒಂದು ಕಾಲಕ್ಕೆ ಮಾತೃದೇವತೆಯ ಪೂಜೆ ರೂಢಮೂಲವಾಗಿದ್ದಿತು. ದನಕಾಯುವುದು ಮುಖ್ಯ ಕಸುಬಾಗಿ ಕಾಣಿಸಿಕೊಂಡಾಗ ಅಲೆಮಾರಿಜೀವನ ಅಗತ್ಯವಾಗಿ, ಇದರ ನೆರಳಿನಲ್ಲಿ ಮಾತೃದೇವತೆಯರು ಹಿಂದೆಸರಿದು ಗಂಡುದೈವಗಳು ಪ್ರಬಲವಾದುವು ಎನ್ನುವ ವಾದವೂ ಕೊಂಚಮಟ್ಟಿಗೆ ಸರಿಯಿರಬಹುದು. ಆದರೆ ಈ ಸಾಮಾಜಿಕ, ಆರ್ಥಿಕ ವಿವರಗಳಿಂದ ಮಾತೃದೇವತಾರಾಧನೆಯ ಒಗಟನ್ನು ಬಿಡಿಸುವುದು ತಪ್ಪು. ಮಾತೃದೇವತೆಯ ಕಲ್ಪನೆ ಸಮುದಾಯಜೀವನದ ಒಂದು ಪ್ರಕಾರವೆಂದು ಹೇಳುವುದು ಅತ್ಯುಕ್ತಿಯಾಗುತ್ತದೆ.

ಮಾತೃದೇವತೆಗಳನ್ನು ಕಲ್ಪಿಸಿಕೊಂಡು, ಅವುಗಳ ಸುತ್ತ ಕೆಲವು ಕಟ್ಟಳೆಗಳನ್ನು ಅಳವಡಿಸಿಕೊಳ್ಳುವುದು ಮಾನವ ಸ್ವಭಾವದ ಒಳಪದರಗಳಲ್ಲೇ ಹುದುಗಿಕೊಂಡಿರುವ ಒಂದು ಪ್ರವೃತ್ತಿಯೆಂದು ತೋರುತ್ತದೆ. ಹಾಗಲ್ಲವಾದರೆ ಈ ಪದ್ಧತಿಯು ಇಷ್ಟು ದೃಢವಾಗಿ ಬೇರೂರಿ ಬೆಳೆದುಬಂದಿರುವುದು ಸಾಧ್ಯವಿಲ್ಲ. ಸೈಂಧವಸಂಸ್ಕೃತಿಯಲ್ಲಿ ಈ ಪದ್ಧತಿಯು ಹರಡಿದ್ದಿತೆನ್ನುವುದು ಮೊಹೆನ್‌ಜಾದಾರೋ ಮತ್ತು ಹರಪ್ಪಾಗಳಲ್ಲಿ ದೊರೆತಿರುವ ಅವಶೇಷಗಳಿಂದ ಎದ್ದುಕಾಣುತ್ತದೆ. ವೈದಿಕ ಸಂಸ್ಕೃತಿಯ ಹರವಿನಲ್ಲಿ ಗಂಡುದೇವತೆಗಳ ಹೆಚ್ಚಳ

ಸೈಂಧವ ಸಂಸ್ಕೃತಿಯ ಮಾತೃದೇವತೆ - ಹರಪ್ಪಾದಲ್ಲಿ ದೊರೆತದ್ದು

ವೆಂದೂ ಆ ಯುಗದ ಆರ್ಥಿಕನೆಲೆ ಪಶುಪ್ರಾಣಿಗಳ ಸಾಕಾಣಿಕೆಯದೆಂದೂ ಹೇಳುವುದಿದೆ ; ಆದರೂ ಮಾತೃದೇವತೆಗಳನ್ನು ಕುರಿತ ವೈದಿಕಮಂತ್ರಗಳ ಸಂಖ್ಯೆ ಕಡಮೆಯೇನಿಲ್ಲ. ವೇದವಾಙ್ಮಯದ ಬಹುಭಾಗ ಸಿದ್ಧವಾಗುವ ಕಾಲಕ್ಕೆ ಮಾತೃದೇವತೆಗಳ ಆರಾಧನೆ ನಾಡಿನಲ್ಲಿ ಬಳಕೆಯಲ್ಲಿದ್ದಿತೆಂದು ಹೇಳಲು ಯಾವ ಅಡ್ಡಿಯೂ ಇರದು.

ಮಾತೃದೇವತೆಗಳ ಪೂಜೆ ಆರ್ಯಸಂಸ್ಕೃತಿಗೆ ಹೊರತಾದುದೆಂದೂ, ದ್ರಾವಿಡರ ಕೊಡುಗೆಯೆಂದೂ ಒಂದು ವಾದವಿದೆಯಷ್ಟೆ. ನಮ್ಮ ಜನಸ್ತೋಮ ದಲ್ಲಿ ಪ್ರಾಗಾರ್ಯ, ಆರ್ಯ, ದ್ರಾವಿಡ ಎಂಬ ವಿಭಜನೆಗೆ ಆಧಾರ ಸಾಲದು. ನಮ್ಮ ನಾಡಿನ ಜನಸಮುದಾಯ ಎಂದಿಗೂ ಸಂಕೀರ್ಣವಾದುದೇ, ಹಲವಾರು ಬುಡಕಟ್ಟುಗಳ ಸಮ್ಮಿಳನ ಇಲ್ಲಿ ಆರಂಭಕಾಲದಿಂದಲೂ ನಡೆಯುತ್ತಲೇ ಬಂದಿದೆ. ಆರ್ಯರು, ದ್ರಾವಿಡರು ಎಂದು ಖಚಿತವಾಗಿ ಅಡ್ಡಗೆರೆಯನ್ನಿರಿಸಿ ಪ್ರತ್ಯೇಕಿಸು ವುದು ಸಾಧ್ಯವಿಲ್ಲ ; ಯಾವ ಕಾಲದಲ್ಲೂ ಇದು ಸಾಧ್ಯವಿರಲಿಲ್ಲ. ಈ ಬಗೆಯ ವಿಂಗಡಣೆ ಬಹುಮಟ್ಟಿಗೆ ಭಾಷೆಗೆ, ಪ್ರಾಂತ್ಯಕ್ಕೆ ಸಂಬಂಧಿಸಿದ್ದು ಅಷ್ಟೆ. ವೇದ ಮಂತ್ರಗಳನ್ನು ರಚಿಸಿದವರು, ಸಂಹಿತೆಗಳನ್ನು ಸಿದ್ಧಪಡಿಸಿದವರು ಆರ್ಯ ರೆಂದೂ ಸೈಂಧವಸಂಸ್ಕೃತಿಯು ದ್ರಾವಿಡವೆಂದೂ ಸಾಧಿಸುವುದು ತಪ್ಪಾಗುತ್ತದೆ. ವೈದಿಕಋಷಿಗಳು ಇಂಥದೇ ಬುಡಕಟ್ಟಿಗೆ ಸೇರಿದವರೆಂದು ನಿರ್ದೇಶಿಸುವುದಾ ಗದು. ಸೈಂಧವಸಂಸ್ಕೃತಿಯ ಜನ ಯಾರೆಂಬುದು ಇಂದಿಗೂ ಖಚಿತವಾಗಿಲ್ಲ.

ವೈದಿಕ ಮಂತ್ರಗಳನ್ನು ನೋಡಿದಾಗ ಈಗ ಅನಾರ್ಯವೆಂಬಂಥ ಪದ್ಧತಿಗಳು ಹಲವು ಬಳಕೆಯಲ್ಲಿದ್ದುದು ಕಂಡುಬರುತ್ತದೆ ; ಸೈಂಧವ ಸಂಸ್ಕೃತಿಯ ಅವಶೇಷಗಳಿಂದ ತೋರಿಬರುವಂಥ ಕಲ್ಪನೆಗಳೂ ಕಟ್ಟಳೆಗಳೂ ವೇದಕಾಲದಲ್ಲೂ ಇದ್ದುವು ಎನ್ನುವುದು ಸ್ಪಷ್ಟವಾಗುತ್ತದೆ. ಸೈಂಧವ ಸಂಸ್ಕೃತಿ ಯಲ್ಲಿ ವೇದಯುಗದ ಮನೋಧರ್ಮವಿದ್ದಿತೆಂದು ಊಹಿಸಿಕೊಳ್ಳುವುದೂ ಕಷ್ಟವಲ್ಲ. ಉಳಿದ ವಿಚಾರ ಹೇಗಾದರೂ ಇರಲಿ, ಮಾತೃದೇವತೆಗಳ ಆರಾಧನೆ ಸೈಂಧವ ಮತ್ತು ವೈದಿಕ ಎರಡೂ ಸಂಸ್ಕೃತಿಗಳಲ್ಲಿ ಸಮನಾಗಿಯೇ ಕಾಣಸಿಗು ತ್ತದೆ. ವೈದಿಕ ಸಂಸ್ಕೃತಿಯು ಸೈಂಧವ ಸಂಸ್ಕೃತಿಯ ಮುಂದುವರಿಕೆಯೇ ಎನ್ನು ವುದು ದಿಟ.

ಭಾರತ ದೇಶದ ಸಾಮಾಜಿಕ ಮತ್ತು ಧಾರ್ಮಿಕ ಇತಿಹಾಸದುದ್ದಕ್ಕೂ ಬಳಕೆಯಲ್ಲಿರುವ ಈ ಪಂಥವು ಈಚೆಗೆ ಹಳ್ಳಿಗಳಲ್ಲೇ ಹೆಚ್ಚಾಗಿ ಕಾಣಿಸಿಕೊಳ್ಳು ತ್ತದೆ, ಪಟ್ಟಣಗಳಲ್ಲಿ ಅಷ್ಟಾಗಿ ಕಾಣಸಿಗುವುದಿಲ್ಲ. ಈ ಪಂಥವನ್ನು ಬೆಳೆಸಿದುದು

ಜಾನಪದ ಕ್ರಿಯಾಕಲಾಪಗಳ ಸಮಷ್ಟಿ ; ಇದನ್ನು ತಾಂತ್ರಿಕ ಮನೋಧರ್ಮ ವೆನ್ನಬಹುದು. ಇದರಲ್ಲಿ ಮಾಟ, ಮದ್ದು, ಯಕ್ಷಿಣಿ, ಮಂತ್ರ, ರಕ್ಷೆ, ಮಂಡಲ, ತಾಯಿತ, ಪ್ರಶ್ನೆ ಎಲ್ಲವೂ ಸೇರುತ್ತವೆ. ತಾಂತ್ರಿಕ ಪ್ರಕ್ರಿಯೆಗಳು ಪ್ರಮುಖ ವಾಗಿ ಜಾನಪದ ಪ್ರಯೋಜನಗಳನ್ನು ಅನುಕರಿಸುವುವು. ಇಲ್ಲಿನ ಬದುಕು ನೆಮ್ಮದಿಯಿಂದ, ಅಚ್ಚುಕಟ್ಟಾಗಿ, ಆತಂಕವಿಲ್ಲದೆ ಇರಬೇಕೆಂದೇ ತಾಂತ್ರಿಕ ಪ್ರಕ್ರಿಯೆಗಳ ಉದ್ದೇಶ. ಪರಲೋಕದ ಗೀಳು ಅವುಗಳಲ್ಲಿ ಕಾಣುವುದಿಲ್ಲ ; ಮುಕ್ತಿಯ ಹಂಬಲವೂ ಅಷ್ಟಷ್ಟೇ.

ತಂತ್ರವೆಂಬುದು ಊಡೆಯಾದ ಒಂದು ಮನೋಧರ್ಮ ಅಥವಾ ಧರ್ಮ ಎಂದು ಬಗೆಯಬಾರದು. ಇಡೀ ಜನಸ್ತೋಮಕ್ಕೆ ಹಿಡಿಸಿದುದು ಒಂದೇ ತಂತ್ರ ಪದ್ಧತಿಯೆಂದೂ ಹೇಳಲಾಗುವುದಿಲ್ಲ. ಬುಡಕಟ್ಟುಗಳು ಬೇರೆ ಬೇರೆಯಾದಂತೆ ತಾಂತ್ರಿಕ ಪದ್ಧತಿಗಳೂ ಬದಲಾಗುತ್ತವೆ ; ಪ್ರದೇಶಗಳನ್ನನುಸರಿಸಿಯೂ ತಾಂತ್ರಿಕ ಪ್ರಕ್ರಿಯೆಗಳು ಬೇರೆ ಬೇರೆಯಾಗುತ್ತವೆ. ಜನಾಂಗದ ಜೀವನದ

ಕದರಿಯ ದುರ್ಗೆ

ಚಿತ್ರಾಪುರದ ಗುಡಿಯಲ್ಲಿ ಹಾವಿನ ಹುತ್ತವನ್ನೇ ದುರ್ಗೆಯೆಂದು ಪೂಜಿಸುತ್ತಾರೆ

ರೀತಿನೀತಿಗಳನ್ನೂ ಬಯಕೆ–ಬಿನ್ನಾಣಗಳನ್ನೂ ಅಂಕೆ–ಆತಂಕಗಳನ್ನೂ ಅನುಭವ ಇತಿಹಾಸಗಳನ್ನೂ ಅವಲಂಬಿಸಿ ತಾಂತ್ರಿಕ ಚೌಕಟ್ಟು ಮೈದೋರಿಕೊಳ್ಳುತ್ತದೆ. ಈ ಚೌಕಟ್ಟಿನಲ್ಲಿ ಹತ್ತಾರು ಪದ್ಧತಿಗಳೂ ನೂರಾರು ಕಟ್ಟಳೆಗಳೂ ಕಾಣಿಸಿ ಕೊಳ್ಳುತ್ತವೆ. ಇವೆಲ್ಲವನ್ನೂ ಸೇರಿಸುವ ಸೂತ್ರ – ಮಣಿಗಳನ್ನು ಪೋಣಿಸಿದ ದಾರದಂತೆ–ಮಾತೃದೇವತೆಯ ಪ್ರಾಥಮ್ಯ. ಮಾತೃದೇವತೆಯೇ ಎಲ್ಲ ಜನರ ವೈಯಕ್ತಿಕ ಮತ್ತು ಸಾಮುದಾಯಿಕ ಸಂಪದಭ್ಯುದಯಗಳಿಗೂ, ಸಾಮರ್ಥ್ಯ ಸಂರಕ್ಷಣೆಗಳಿಗೂ ಮೂಲವೆಂಬ ನಂಬಿಕೆ ಈ ಮನೋಧರ್ಮದ ಮುಖ್ಯ ವಿವರ. ಇದು ಪ್ರತಿಯೊಬ್ಬನ ಅರಿವಿನ ಅಂತರಾಳದಲ್ಲೂ, ಇಡೀ ಜನಾಂಗದ ಚೇತನದ ಒಳಪದರದಲ್ಲೂ ಅಡಗಿರುವುದೇ ; ಮತ್ತೆ ಮತ್ತೆ ಮೇಲೆ ಎದ್ದು ಬರುವುದೇ.

ತಂತ್ರದ ಚೌಕಟ್ಟಿನಲ್ಲಿ ಲೈಂಗಿಕ ಪ್ರಸಕ್ತಿ ಕೊಂಚಮಟ್ಟಿಗೆ ಇದೆಯೆಂಬು ದನ್ನು ಯಾರೂ ಇಲ್ಲವೆನ್ನಲಾರರು. ಕಾಮ, ಭೋಗ, ಸಂತಾನ ಈ ರಹಸ್ಯ ವನ್ನು ಆದಿಮಜನರು ಬಿಡಿಸಲಾರದೆ ತಮ್ಮ ಧರ್ಮದ ಕಟ್ಟಳೆಗಳಲ್ಲಿ ಅದನ್ನು ಅಳವಡಿಸಿಕೊಂಡುದು ಸಹಜವೇ ; ಪ್ರಪಂಚದಲ್ಲೆಲ್ಲೂ ಇದನ್ನು ಗುರುತಿಸ

ಬಹುದು. ಗ್ರೀಕರ ಬೆಕ್ಕನೇಲಿಯ, ರೋಮನ್ನರ ಸಾತರ್ನೇಲಿಯ, ಫ್ರೆಂಚರ ಫೆತಿ ದೆ ಫೋಸ್ ಮತ್ತು ಆಂಗ್ಲ ಜನರ ಮೇ ಡೇ ಕಾರ್ನಿವಾಲ್‌ಗಳಲ್ಲಿ ಲೈಂಗಿಕ ವಿವರವಿಲ್ಲವೇ ? ತಂತ್ರದಲ್ಲಿ ವಾಸ್ತವಿಕತೆಗೆ ಬೆಲೆ ಹೆಚ್ಚು ; ಲೈಂಗಿಕ ವ್ಯವಹಾರ ವಾಸ್ತವಿಕತೆಯ ಒಂದು ಮುಖ. ರಹಸ್ಯವನ್ನು ದಿಟದ ನೆಲೆಯಲ್ಲಿ ತಂತ್ರ ನಿಲ್ಲಿಸಲೆತ್ನಿಸುತ್ತದೆ, ವಾಸ್ತವವಾದುದನ್ನು ಆದರ್ಶದ ಮಟ್ಟಕ್ಕೇರಿಸುತ್ತದೆ. ತಾಂತ್ರಿಕಪರಿಭಾಷೆಯಲ್ಲಿ ಸ್ತ್ರೀತತ್ವವೆಂದರೆ ಮಾತೃ, ಮೂಲಪ್ರಕೃತಿ, ಗರ್ಭ, ಸಂತಾನಶಕ್ತಿ. ಇಲ್ಲಿ ಧ್ವನಿತವಾಗುವುದು ಕಾಮುಕತೆಯಲ್ಲ, ಪ್ರಸೂತಿ.

ಬದುಕಿನಲ್ಲಿ ಅಗತ್ಯವಾಗಿ ಸೇರಿಬಂದ ಪ್ರಸೂತಿಯನ್ನು ಜೈವಿಕ ನೆಲೆಯಿಂದ ತಂತ್ರವು ವಿಶ್ವಪ್ರವೃತ್ತಿಯ ನೆಲೆಗೇರಿಸುತ್ತದೆ. ಇಡೀ ವಿಶ್ವದ ರಚನೆಯಲ್ಲಿ ಪ್ರಸೂತಿ ತತ್ತ್ವವನ್ನು 'ಯೋನಿ'ಯೆಂದು ನಿರ್ದೇಶಿಸಿ ಅದನ್ನು ದೇವಿಯೆಂದು ಕರೆಯುತ್ತದೆ. ಈ ಪ್ರಸೂತಿ ತತ್ತ್ವದ ಬೇರೆ ಬೇರೆ ಅಭಿವ್ಯಕ್ತಿಗಳೇ



ಒಡಿಸ್ಸದ ಅಸ್ಕದಲ್ಲಿ ಕಂಬೇಶ್ವರಿ - ಮರದ ಕಂಬ

ವೃಕ್ಷ, ಭೂಮಿ, ಹಾವು, ಬೆಟ್ಟಗಳು. ತಾಂತ್ರಿಕ ಪರಿಭಾಷೆಯಲ್ಲಿ ಹೆಣ್ಣು-ಗಂಡ ಎಂಬ ವಿಭಜನೆ ಆತ್ಯಂತಿಕವಾದುದಲ್ಲ. ಬೆಟ್ಟವು ಗಂಡಾಗಬಹುದು ; ಅದನ್ನೇ ಲಿಂಗದಲ್ಲಿ, ಹಾವಿನ ಹುತ್ತದಲ್ಲಿ, ಬಲಿಪೀಠದಲ್ಲಿ, ಗರ್ಭಗುಡಿಯಲ್ಲಿನ ಕಲ್ಲು ಬಂಡೆ ಅಥವಾ ಮರದ ಕೊರಡಿನಲ್ಲಿ ಸಂಕೇತವಾಗಿ ಕಾಣಬಹುದು. ಆದರೆ ಇವೆಲ್ಲ ದೇವಿಯ, ಮಾತೃದೇವತೆಯ, ಶಕ್ತಿಯ ಆವಾಸಸ್ಥಾನಗಳೇ. ಲಿಂಗದಲ್ಲಿ ಗಂಡೂ ಹೆಣ್ಣೂ ಅಡಗಿವೆ ; ಹಾವಿಗೆ ಪುರುಷ ಸ್ವಭಾವವೂ ಉಂಟು, ಸ್ತ್ರೀ ಸ್ವಭಾವವೂ ಉಂಟು. ಪುರುಷಾಕಾರದ ದಾರುಸ್ತಂಭ 'ಕಂಭೇಶ್ವರಿ'ಯಾಗ ಬಹುದು.

ಭಾರತದೇಶದ ದೇವೀದೇಗುಲಗಳು ಬಹುಮಟ್ಟಿಗೆ ಬೆಟ್ಟದ ಮೇಲೇ ಇವೆ. ಬಯಲಲ್ಲಿ ಇದ್ದ ದೇವೀಗುಡಿಗಳಿಗೆ ಕೂಡ ಬೆಟ್ಟದ ನೆಂಟು ತಪ್ಪುವುದಿಲ್ಲ. 'ದುರ್ಗಾ' ಎನ್ನುವ ಮಾತಿಗೆ ಬೆಟ್ಟವೆಂದೇ ಅರ್ಥ. ಬೆಟ್ಟವೊಂದು ಕೋಟೆಯೂ ಹೌದು, ಅದನ್ನು ಏರುವುದು ಕಷ್ಟ (ದುರ್ಗ-ದುರ್ಗಮ). ಅದರ ತಪ್ಪಲಲ್ಲಿ ರುವ ಜನವಸತಿಯನ್ನು ಇದು ಕಾಪಿಡುತ್ತದೆ. ಊರನ್ನು ಕಾಪಾಡುವ ದೇವಿ ಯರು ಹಲವಾರು ಮಂದಿ ನಮ್ಮಲ್ಲಿ ಪರಿಚಿತರೇ. ರಾಜಾಸ್ಥಾನದಲ್ಲಿ ಅಂಬೇರಿನ ಅಂಬಾ ಮತ್ತು ಬಿಕನೇರಿನ ಕರ್ನಿಮಾತಾ, ಒಡಿಸ್ಸದಲ್ಲಿ ಸಂಬಲಪುರದ ಸಮಲೇಶ್ವರಿ,ಅಬುಪರ್ವತದ ಅರ್ಬುದ-ಮಾತಾ, ಪಟನಾದ ಪಟನದೇವಿ, ಗಯೆಯ ಗಯೇಶ್ವರಿ, ಪಂಜಾಬಿನ ಕಾಂಗ್ರಾದಲ್ಲಿ ಜ್ವಾಲಾಮುಖಿ, ಕಲಕತ್ತೆಯ ಕಾಳಿ, ಮೈಸೂರಿನ ಚಾಮುಂಡೇಶ್ವರಿ ಮೊದಲಾದ ದೇವತೆಗಳೆಲ್ಲ ನಗರರಕ್ಷಕಿ ಯರೇ. ದೇವಿಯನ್ನು ಬೆಟ್ಟದೊಂದಿಗೆ ಸೇರಿಸಿರುವುದರ ಸ್ವಾರಸ್ಯ (ವಿಂಧ್ಯ ವಾಸಿನಿ, ಗಿರಿದುರ್ಗೆ, ಗಿರಿಜೆ, ಪರ್ವತೇಶ್ವರಿ ಮೊದಲಾಗಿ) ನೆರೆಯ ಊರನ್ನು ಕಾಪಾಡುವ ತಾಯಿಯೆಂದು.

ತಾಂತ್ರಿಕ ಪರಿಭಾಷೆಯಲ್ಲಿ ಬೆಟ್ಟವನ್ನು ತ್ರಿಕೋಣವನ್ನಾಗಿ ನಿರೂಪಿಸುವು ದುಂಟು ; ತ್ರಿಕೋಣವು ದೇವೀ ಸಂಕೇತವೂ ಹೌದು. ತ್ರಿಕೋಣವು ಮೇಲು ಮುಖನಾಗಿದ್ದರೆ ಪುರುಷರೂಪವೆಂದೂ ಕೆಳಮುಖನಾಗಿದ್ದರೆ ಸ್ತ್ರೀರೂಪ ವೆಂದೂ ಎಣಿಕೆಯಿದೆ. ಸ್ತ್ರೀರೂಪವಾದ ತ್ರಿಕೋಣವೇ ಮಾತೃ ಸ್ವರೂಪಿಣಿ ಯಾದ ದೇವಿ, ಶಕ್ತಿ. ಪುರುಷರೂಪದ ತ್ರಿಕೋಣ ಶಿವ. ಎರಡೂ ಬಗೆಯ ತ್ರಿಕೋಣಗಳನ್ನು ಪರಸ್ಪರವಾಗಿ ಕೂಡಿಸಿ ಶಿವ-ಶಕ್ತಿಯರ ಸಂಯೋಗವನ್ನು ಸಂಕೇತಿಸುವುದಿದೆ. ಇದು ಸಂಭೋಗದ ಪ್ರತೀಕವೆನ್ನುವುದಕ್ಕಿಂತ ಪ್ರಸೂತಿಯ ಪ್ರತಿಮೆಯೆಂದರೆ ಒಪ್ಪುತ್ತದೆ. ಏಕೆಂದರೆ ಇದನ್ನೇ 'ಮಾಯೆ'ಯೆಂದು ನಿರ್ದೇ

ಶಿಸುವುದು, ಮಾಯಾತತ್ವವು ಜಗತ್ ಪ್ರಸೂತಿ ತತ್ತ್ವ. ದುರ್ಗೆಯ ಇನ್ನೊಂದು ಹೆಸರು ಮಹಾಮಾಯೆ. ಎರಡು ತ್ರಿಕೋಣಗಳ ಮೇಳನವೇ ವೈದಿಕ ಪ್ರತಿಮೆಯಾದ 'ದ್ಯಾವಾ-ಪೃಥಿವೀ'.

ಮಾತೃದೇವತೆಗೂ ವೃಕ್ಷಕ್ಕೂ ಸಂಬಂಧವಿರುವುದು ಪ್ರಚಲಿತವಾದ ವಿವರ. ಭೂಮಿಯನ್ನು 'ಗೌರಿ'ಯೆಂದು ಬಗೆದು, ಅದು ಗರ್ಭವತಿಯಾಗಿ ಗಿಡಮರಗಳನ್ನು ಹೊರಕಾಣಿಸುವುದು 'ಶಾಕಂಭರಿ'ಯೆಂದೂ, ಅದರಿಂದ ಪ್ರಾಣಿಗಳಿಗೆ ಆಹಾರವನ್ನೊದಗಿಸುವ ಪ್ರಕಾರವೇ 'ಅನ್ನಪೂರ್ಣೆ'ಯೆಂದೂ ಕಲ್ಪನೆಗಳಿವೆ. ಸೈಂಧವಸಂಸ್ಕೃತಿಯಲ್ಲಿ ಮರದಿಂದಲೇ ಹೊರಹೊಮ್ಮಿದಂತೆ, ಮರವಾಗಿ ತೋರಿಕೊಂಡಂತೆ ದೇವೀಚಿತ್ರಗಳಿವೆ. ಭೂಮಿಯಿಂದ ಗಿಡ ಮೇಲೆದ್ದು ಕಾಣಿಸಿಕೊಳ್ಳುವುದು ಪ್ರಕೃತಿಯ ತತ್ತ್ವ ; ಭೂಮಿಯು ಫಲವತ್ತಾಗಿದೆಯೆಂಬ ಸೂಚನೆ. ಇದನ್ನು ವೈದಿಕಮಂತ್ರಗಳೂ ಪ್ರಸ್ತಾಪಿಸುತ್ತವೆ. ಪ್ರಕೃತಿ ತತ್ತ್ವವನ್ನು ಕೆಂಪು ಬಣ್ಣದಿಂದ ನಿರ್ದೇಶಿಸುವುದು ಹಳೆಯ ಪದ್ಧತಿ. ದೇವಿಯ ಮೈಬಣ್ಣ, ಉಡುಗೆ, ಅಲಂಕರಣ, ಪ್ರಿಯವಾದ ಹೂಗಳು ಎಲ್ಲವೂ ಕೆಂಪುಬಣ್ಣದವೇ. ಮೊಹೆನ್‌ಜಾದಾರೋವಿನಲ್ಲಿ ದೊರೆತಿರುವ ದೇವಿಯ ಮೃಣ್ಮಯ ಪುತ್ಥಳಿಗಳಿಗೆ ಕೆಂಪುಬಣ್ಣ ಬಳಿದಿರುವುದನ್ನು ಕಾಣಬಹುದು. ಈಗಲೂ ಕುಂಕುಮ, ಕೆಂಪು ದಾಸವಾಳ, ರಕ್ತವಸ್ತ್ರ, ರಕ್ತಫಲ ಮೊದಲಾದುವು ದೇವಿಗೆ ಪ್ರಿಯವಾದುದೆಂದೇ ಕಲ್ಪನೆಯಿದೆಯಲ್ಲವೆ ?

ಹುಲುಸಾಗಿ ಬೆಳೆದು ಹರಡಿಕೊಂಡು ಹಸಿರಾಗಿ ಹೊಳೆಯುವ ಸಸ್ಯವರ್ಗವೆಲ್ಲ ಈ ದೇವಿಯ ಸತ್ತ್ವವೇ. ಆದುದರಿಂದ ಆಕೆಯನ್ನು ನಿಂಬ, ಕದಂಬ, ಅಶೋಕ ಮೊದಲಾದ ಮರಗಳಲ್ಲಿಯೂ, ದುರ್ಗಾಪೂಜೆಯಲ್ಲಿ ನವಪತ್ರಿಕೆಯೆಂಬ ಒಂಬತ್ತು ಗಿಡಗಳಲ್ಲಿ ಅಥವಾ ಎಲೆಗಳಲ್ಲಿಯೂ, ಅಪರಾಜಿತ (ಶಂಖಪುಷ್ಪ, ಗಿರಿಕರ್ಣಿಕಾ) ಮೊದಲಾದ ಬಳ್ಳಿಗಳಲ್ಲಿಯೂ, ಅಕ್ಕಿ ಗೋಧಿ ಮೊದಲಾದ ಧಾನ್ಯಗಳಲ್ಲಿಯೂ ಪೂಜೆ ಮಾಡುತ್ತಾರೆ. ನೀರು ತುಂಬಿದ ಮಣ್ಣಿನ ಮಡಿಕೆಯ ಬಾಯಲ್ಲಿ ಮಾವಿನ ಎಲೆಗಳನ್ನು ಇರಿಸಿ ಘಟ ಅಥವಾ ಕುಂಭವೆಂದು ಪೂಜಿಸುವುದು ಉಂಟು. ತೆಂಗಿನಕಾಯಿಗೆ ಕುಂಕುಮವಿಟ್ಟು, ಅಥವಾ ಶ್ರೀಯಂತ್ರ ಸರ್ವತೋಭದ್ರಮಂಡಲ ಮೊದಲಾದ ಹಸೆಗಳನ್ನು ಬರೆದು ಅದರಲ್ಲಿ ದೇವಿಯನ್ನು ಕಾಣುವುದೂ ಇದೆ.

ಜಾನಪದ ಕಲ್ಪನೆಯಲ್ಲಿ ಗಂಡು-ಹೆಣ್ಣುಗಳೆಂಬ ತತ್ತ್ವಗಳು ಬೇರೆ ಬೇರೆಯಾಗಿ ಕಂಡುಕೊಳ್ಳುತ್ತವೆ. ಗಂಡು (ಶಿವ) ಬರಿಯ ಚಿಹ್ನೆ, ಸಂಕೇತ

(ಲಿಂಗ ಎನ್ನುವ ಮಾತಿಗೆ ಇದೇ ಮೂಲಾರ್ಥ). ಯಾವುದರ ಸಂಕೇತ ? ಹೆಣ್ಣು (ಶಕ್ತಿ) ಇರುವುದರ ಸಂಕೇತ. ಹೆಣ್ಣು ಭೂಮಿಯಾದರೆ ಅದನ್ನು ಉಳುವ ನೇಗಿಲು (ಲಾಂಗಲ) ಗಂಡು ; ಹೆಣ್ಣಿನಿಂದಲೇ ಸಸ್ಯಗಳ ಉತ್ಪತ್ತಿ, ಗಂಡು ಅದಕ್ಕೆ ನೆರವಾಗುತ್ತದೆ ಅಷ್ಟೆ. ಹೆಣ್ಣು ಶಕ್ತಿ, ಗಂಡು ಜಡ. ಶಕ್ತಿಯಿಲ್ಲದ ಶಿವ ಶವನೆಂದು ಭಾವನೆ. ಆದರೆ ವಾಸ್ತವವಾಗಿ ತಂತ್ರಗಳು ಈ ಭೇದವನ್ನು ಮುಖ್ಯವೆಂದು ಎಣಿಸುವುದಿಲ್ಲ. ಶಕ್ತಿಯಲ್ಲಿ ಶಿವನೂ ಅಡಗಿದ್ದಾನೆಂದು ಅಲ್ಲಿನ ಕಲ್ಪನೆ. ಹೆಣ್ಣಿನಲ್ಲಿ ಗಂಡು ಕೂಡಿಕೊಂಡಿದೆ ; ಹೆಣ್ಣು ತನ್ನಷ್ಟಕ್ಕೆ ತಾನೇ ಪೂರ್ಣವಾದ ತತ್ತ್ವ, ಅದರ ಪರಿಪೂರ್ಣತೆಗಾಗಲೀ ಸಾಮರ್ಥ್ಯಕ್ಕಾಗಲೀ ಬೇರೆಯಾದ ಗಂಡಿನ ಅಗತ್ಯವಿರದು. ಬೇಕೆಂದಾಗ ತನ್ನೊಡಲಿಂದಲೇ ಗಂಡನ್ನು ಹೊರಮಾಡಿ ಬೇರೆಯಾಗಿ ಕಾಣಿಸುತ್ತದೆ. ವೈದಿಕ ನೆಲೆಯ ಗಂಡು ದೇವತೆಗಳಿಗೂ ತಾಂತ್ರಿಕನೆಲೆಯ ಹೆಣ್ಣು ದೇವತೆಗಳಿಗೂ ವಿರೋಧವಿದೆಯೆಂದು ಬಗೆಯಬಾರದು ; ಮಾತೃದೇವತೆಯ ಕಲ್ಪನೆಯಲ್ಲಿ ಗಂಡು ದೇವತೆಗಳನ್ನೂ ಅಳವಡಿಸಿವೆ ತಂತ್ರಗಳು.

ಆದುದರಿಂದಲೇ ಶಕ್ತಿಯನ್ನು ಪೂರ್ಣವೃತ್ತವಾಗಿ ಕಾಣಿಸುವುದು. ಇದನ್ನೇ 'ಚಕ್ರ'ವೆಂದು ಕರೆಯುತ್ತಾರೆ. ಅದರ ನಟ್ಟನಡುವೆ ಇರುವ ಬಿಂದು ಶಿವತತ್ತ್ವ (ಗಂಡು). ಚಕ್ರದಲ್ಲಿ ಬಿಂದು ಅಂತರ್ಗತ. ಸೈಂಧವಸಂಸ್ಕೃತಿಯ ಹರಪ್ಪಾ ಅವಶೇಷಗಳಲ್ಲಿ ಹೆಣ್ಣು ದೇವತೆಯೊಂದು ತಲೆ ಕೆಳಗಾಗಿದ್ದು ಆಕೆಯ ಗುಹ್ಯಸ್ಥಾನದಿಂದ ವೃಕ್ಷವೊಂದು ಹೊರಹೊಮ್ಮಿದಂತೆ ಚಿತ್ರಣವಿದೆ. ಇದು ಮಾತೃದೇವತೆಯ ಪಾರಮ್ಯವನ್ನು ಎತ್ತಿತೋರಿಸುತ್ತದೆ. ಇಲ್ಲಿ ವೃಕ್ಷ ಗಂಡು ತತ್ತ್ವ ; ಅದರ ಇರವು, ಹರವು ತೋರಿಕೊಳ್ಳುವುದು ಮಾತೃವಿನ ಪ್ರಸವ ಧರ್ಮದಲ್ಲಿಯೇ.

ಹಳೆಯ ಪ್ರತೀಕಗಳು ಮಾತೃದೇವತೆಯನ್ನೇ ಲಿಂಗಾಕಾರದಲ್ಲಿ ಸೂಚಿಸುವುದನ್ನು ಗಮನಿಸಬೇಕು ; ಅಥವಾ ಲಿಂಗಕ್ಕೆ ಪರ್ಯಾಯವಾಗಿ ಬೆಟ್ಟ, ಬಂಡೆ, ಹಾವಿನ ಹುತ್ತ, ಬಲಿಪೀಠಗಳಲ್ಲಿಯೂ ದೇವಿಯನ್ನು ಸಂಕೇತಿಸಿರುವುದಿದೆ. ಕಂಬದಮ್ಮಗಳ ಪ್ರಸ್ತಾಪ ಬಂದಿತು ; ಅಮ್ಮ ಮೊದಲಿಗೆ ಗುಡ್ಡದವಳೇ. ಹಲವಾರು ಪ್ರಸಿದ್ಧ ದೇವಾಲಯಗಳಲ್ಲಿ ದೇವಿಯ ಮೂಲಸ್ಥಾನ ಲಿಂಗವೇ. ನಿದರ್ಶನಕ್ಕೆ ಕೊಲ್ಲೂರಿನ ಮೂಕಾಂಬಿಕೆ ಲಿಂಗವೇ. ಲಿಂಗದ ಮೇಲ್ಭಾಗದಲ್ಲಿ ಬಂಗಾರದಂತೆ ಹೊಳೆಯುವ ಗೆರೆಯೊಂದಿದೆ, ಇದನ್ನು ಸ್ವರ್ಣರೇಖೆಯೆಂದು ಕರೆಯುತ್ತಾರೆ. ಈ ಗೆರೆಯಿಂದ ಲಿಂಗದ ಮೇಲ್ಭಾಗ ಎರಡು ಭಾಗಗಳಾಗಿ



ಕೊಲ್ಲೂರಿನ ಮೂಕಾಂಬಿಕೆಯ ಮೂಲಸ್ಥಾನ

ವಿಂಗಡಿಸಲ್ಪಟ್ಟಿದೆ ; ಎಡಭಾಗದ ಹರವು ಬಲಕ್ಕಿಂತ ಹೆಚ್ಚಾಗಿರುವುದರಿಂದ ಇದನ್ನು ದೇವಿಯೆಂದು ನಿರ್ದೇಶಿಸುತ್ತಾರೆ. ಬಲಭಾಗ ಗಂಡಿಗೂ ಎಡಭಾಗ ಹೆಣ್ಣಿಗೂ (ವಾಮ) ವಿಶಿಷ್ಟವಾದುದೆಂದು ಹಳೆಯ ಕಲ್ಪನೆ. ಅಸಾಮ ಪ್ರಾಂತ್ಯದ ಕಾಮಾಖ್ಯೆ ಡೊಗರಿರುವ ಒಂದು ಬಂಡೆ ; ಹೀಗಿರುವುದರಿಂದ ಅದು ಯೋನಿಯೆನಿಸಿಕೊಳ್ಳುತ್ತದೆ. ಅದರ ಮೇಲೆ ಕುಂಕುಮವನ್ನು ಬಳಿಯುವ ವಾಡಿಕೆಯಿದೆ. ಬಳ್ಳಾರಿಯ ದುರ್ಗಮ್ಮ ಒಂದು ಹುತ್ತ. ಬಂಗಾಳದ ಕಡೆ ಹಲಸಿನ ಮರದಡಿಯಲ್ಲಿ ಕಲ್ಲೊಂದನ್ನು ಇರಿಸಿ ಷಷ್ಠಿಯೆಂಬ ದೇವತೆಯನ್ನು ಪ್ರತಿನಿಧಿಸುತ್ತಾರೆ. ದೇವಿಯ ಸಂಕೇತವೆಂದು ಕವಡೆಗಳನ್ನು ಧರಿಸಿಕೊಳ್ಳುವ ಸಂಪ್ರದಾಯವಿದೆ. ಒಡಿಸ್ಸದ ಫೂಲ್‌ಬನಿ ಜಿಲ್ಲೆಯಲ್ಲಿ ಖೋಂಡ್ ದೇಗುಲದ ದೇವೀಮೂರ್ತಿ ಬರಿಯ ಮರದ ಕಂಬ ; ನಮ್ಮ ಕಂಬದಮ್ಮನಂತೆ. ಒಡಿಸ್ಸ ದಲ್ಲಿಯೇ ಅಸ್ಕದ ಕಂಬೇಶ್ವರಿ ಜನಪ್ರಿಯಳಾದ ದೇವತೆ; ದೇವಿಯನ್ನು ಎರಡು ಸಣ್ಣ ಮರದ ಕಂಬಗಳು ಪ್ರತಿನಿಧಿಸುತ್ತವೆ. ಅದೇ ಪ್ರಾಂತ್ಯದ ಗಂಧರ್ಢಿಯ ಕಂಬೇಶ್ವರಿಯೂ ಮರದ ಕೊರಡೇ ; ಆದರೆ ಅದರ ಮೇಲ್ಭಾಗದಲ್ಲಿ ಹೆಣ್ಣಿನ ಮುಖವನ್ನು ಒರಟಾಗಿ ಕಡೆದಿದ್ದಾರೆ.

ಹಳ್ಳಿಗಳ ಕಡೆ ದೇವಿಯನ್ನು ಪ್ರತಿನಿಧಿಸಲು ಸಣ್ಣಕಲ್ಲುಗಳನ್ನು ಬಳಸುವುದಿದೆ. ಅವುಗಳ ಮೇಲೆ ಎಣ್ಣೆಯನ್ನು ಮತ್ತೆ ಮತ್ತೆ ಬಳಿಯುವುದರಿಂದ ಅವು ಕಪ್ಪಾಗಿ ಕಾಣುತ್ತವೆ. ಮರದ ಅಡಿಯಲ್ಲಿ ಕಟ್ಟೆಯ ಮೇಲೆ ಚಚ್ಚೌಕವಾದ ಕಲ್ಲು ಕಂಬವನ್ನೂ ನೆಟ್ಟು ಅದನ್ನೇ ದೇವಿಯೆಂದು ಪೂಜೆ ಮಾಡುವುದನ್ನೂ ಕಾಣಬಹುದು. ಬಯಲಲ್ಲೂ ಕಲ್ಲುಕಂಬಗಳು ದೇವಿಯನ್ನು ಪ್ರತಿನಿಧಿಸಿ ನಿಂತಿರುತ್ತವೆ.

ಒಡಿಸ್ಸದ ಗಂಧರ್ದಿಯ ಕಂಬೇಶ್ವರಿ ; ಮೊದಲಿಗೆ
ಬಲಿಗಂಬವಾಗಿದ್ದಂತೆ ತೋರುತ್ತದೆ.

ಒಮ್ಮೊಮ್ಮೆ ಅವಕ್ಕೆ ಆವರಣಗಳನ್ನೂ ಏರ್ಪಡಿಸಿರುತ್ತಾರೆ. ಆದರೆ ಗುಡಿಗಳಂಥ ಕಟ್ಟಡಗಳು ಅಪುರೂಪ. ದೇವಿಯ ಮಹಿಮೆ ಜನರಲ್ಲಿ ಹರಡಿಕೊಂಡರೆ, ಕಲ್ಲು ಕಂಬಕ್ಕೆ ಜೋಪಡಿಯೊಂದು ಸಿದ್ಧವಾದೀತು. ಸಾಂಕ್ರಾಮಿಕ ಬೇನೆಗಳಿಗೆ ಕಾರಣಳೂ ಪರಿಹಾರಕಳೂ ಆದ ಮಾರಮ್ಮನನ್ನು ಬಹುಕಡೆ ಬೇವಿನಮರದ ಕೊರಡೊಂದರಲ್ಲಿ ಕಾಣಿಸುತ್ತಾರೆ. ಬೇವಿನಮರ ಈಕೆಗೆ ಪ್ರಿಯವಾದುದೆಂದು ಪ್ರತೀತಿ. ಹಳ್ಳಿಯ ಬಡಗಿ ಅದರ ಮೇಲೆ ಕೈಯಾಡಿಸಿ ಒರಟು ಒರಟಾಗಿ ಹೆಣ್ಣಿನ ತಲೆಯನ್ನು ಮರದ ಕೊರಡಲ್ಲಿ ಮೂಡಿಸಬಹುದು. ಹಳ್ಳಿಗಳ ಎಲ್ಲೆಯನ್ನು ನಿರ್ದೇಶಿಸಲೆಂದು ನೆಟ್ಟ ಕಲ್ಲುಗಳೇ ಎಲ್ಲಮ್ಮನಾಗಿ ಪೂಜೆಗೊಳ್ಳುವುದೂ ಇದೆ. ಎಲ್ಲೆಯ ಅಮ್ಮನಾದವಳು ಎಲ್ಲರ ಅಮ್ಮನಾಗಿ ಮೇಲೇರುವುದೂ



ಮಣ್ಣಿನಲ್ಲಿ ಮಾಡಿದ ಜಾನಪದ ದೈವ - ಉತ್ತರ ಭಾರತದ್ದು

ಉಂಟು. ಕೆರೆಕೊಳಗಳ ದಂಡೆಯ ಮೇಲೆ, ಹಳ್ಳಿಯ ಬಾವಿಯ ಪಕ್ಕದಲ್ಲಿ, ಹಳ್ಳಿಯ ಒಳಗೆ ಹೋಗುವ ಎಡೆಯಲ್ಲಿ, ನಾಲ್ಕು ಬೀದಿಗಳು ಕಲೆಯುವ ಕಡೆ ಕಲ್ಲುಗುಂಡುಗಳನ್ನು ದೇವಿಯರೆಂದು ಬಗೆಯುವ ವಾಡಿಕೆಯಿದೆ.

ವರ್ಷಕ್ಕೊಮ್ಮೆಯೋ, ಅಗತ್ಯ ಬಿದ್ದಾಗಲೋ ಮಣ್ಣಿನಲ್ಲಿ ಹೆಣ್ಣು

ದೇವತೆಯ ಗೊಂಬೆಯನ್ನು ಮಾಡಿ, ಅದನ್ನು ಆಗ ಎಬ್ಬಿಸಿದ ಚಪ್ಪರದಡಿಯಲ್ಲಿರಿಸಿ, ಜಾನಪದ ಕಟ್ಟಳೆಗಳಂತೆ ಪೂಜಿಸಿ. ಸಮಾರಂಭ ಮುಗಿದಮೇಲೆ ಗೊಂಬೆಯನ್ನು ನೀರಿನಲ್ಲಿ ಕರಗಿಸುವುದು ಬಹುಕಡೆ ಕಾಣಬರುವ ಪದ್ಧತಿ. ಹಳ್ಳಿಯಲ್ಲಿ ಸ್ಥಿರವಾದ ಗುಡಿಯೆಂಬುದಿರದೆ ಇಂಥ ತಾತ್ಕಾಲಿಕ ಗುಡಿಗಳನ್ನು ಏರ್ಪಡಿಸಿಕೊಳ್ಳುವುದು ಹಳೆಯ ಪದ್ಧತಿ. ಆದರೆ ಆವರಣವೊಂದು ಇದಕ್ಕೆ ಮೀಸಲಾಗಿರುತ್ತದೆ. ಮುತ್ಯಾಲಮ್ಮ, ಅಂಕಮ್ಮ, ಗಂಗಮ್ಮ, ದೊಡ್ಡಮ್ಮ (ಮಹೇಶ್ವರಿ), ಪೂಜಮ್ಮ, ಪೆದ್ದಮ್ಮ ಮೊದಲಾದ ದೇವೀಮೂರ್ತಿಗಳೆಲ್ಲ ಮಣ್ಣಿನಿಂದ ಮಾಡಿದವೇ ; ಇಂಥ ಚಪ್ಪರಗಳಲ್ಲಿ ಪೂಜೆಗೊಳ್ಳುವುವೇ. ಅವರ ಇರವು ಮತ್ತು ಹಿರಿಮೆ ಸಂದರ್ಭೋಚಿತವಾದುದು. ಇಲ್ಲಿಯೂ ಮೂರ್ತಿಗಿಂತ ಗುಡಿಗಿಂತ ಮುಖ್ಯವಾದುದು ಅಲ್ಲಿ ನಡೆಯುವ ಕಟ್ಟಳೆಗಳು. ಹಳ್ಳಿಯವರೆಲ್ಲರೂ ಪೂಜೆಯಲ್ಲಿ ಪಾಲ್ಗೊಳ್ಳುವುದೂ ಮುಖ್ಯವಾದ ವಿವರವೇ.

ಒಂದೊಂದು ಹಳ್ಳಿಗೂ ಅದರದ್ದೇ ಆದ ದೇವತೆಯಿರುತ್ತದೆ. ದಕ್ಷಿಣದಲ್ಲಿ ಇದನ್ನು ಗ್ರಾಮದೇವತೆಯೆಂದೂ ಉತ್ತರ ದೇಶದಲ್ಲಿ ಠಾಕುರಾಣಿ ಎಂದೂ ಕರೆಯುತ್ತಾರೆ. ಊರಿನ ಪ್ರಮುಖವಾದ ಸ್ಥಳದಲ್ಲಿ ಮರದ ಕೆಳಗೆ ಈಕೆಯ ಸ್ಥಾನವನ್ನು ಏರ್ಪಡಿಸುತ್ತಾರೆ. ಸಾಮಾನ್ಯವಾಗಿ ಈಕೆ 'ಊರಮ್ಮ', ಊರಿನ ಅಮ್ಮ. ಸಾಮಾನ್ಯವಾಗಿ ಈ ಬಗೆಯ ದೇವತೆಗಳಿಗೂ ಹಳ್ಳಿಗಳನ್ನು ಕಾಡುವ ಉಪದ್ರವಗಳಿಗೂ ನೆಂಟು ಇರುವುದುಂಟು ; ಕಾಲರಾ (ದಕ್ಷಿಣದಲ್ಲಿ ಮಾರಿಯಮ್ಮ, ಮಧ್ಯಭಾರತದಲ್ಲಿ ಮೋತಿಮಾತಾ ಅಥವಾ ಮಾರಿಭವಾನಿ), ಪ್ಲೇಗ್ (ಗಯಾ ಜಿಲ್ಲೆಯಲ್ಲಿ ಬೊಂಬಯಿ ಮಾಯಿ, ಬಂಗಾಳದ ಕಡೆ ಓಲಾಯ್ ಚಂಡಿ, ದಕ್ಷಿಣದೇಶದಲ್ಲಿ ಪೆದ್ದಮ್ಮ, ಅಣ್ಣಮ್ಮ, ನೂಕಲಮ್ಮ, ಮರಿದಿಯಮ್ಮ, ಕೊಕ್ಕಲಮ್ಮ), ಸಿಡುಬು (ಮುತ್ಯಾಲಮ್ಮ, ಸುಖಾಜಮ್ಮ, ಉದ್ದಾಲಮ್ಮ) ಇತ್ಯಾದಿ. ಇಂಥ ಉಪದ್ರವಗಳನ್ನು, ಎಂದರೆ ಪೀಡೆಗಳನ್ನು ಓಡಿಸುವ ತಾಯಿ ಅವಳೆಂದು 'ಪೀಡಾರಿ' ಎಂದು ಕರೆಯುವುದು ವಾಡಿಕೆ.

ಪೂಜೆ ಸರಿಯಾಗಿ, ಕಟ್ಟಳೆಯಂತೆ, ನಡೆದರೆ ಈ ದೇವತೆ ಸುಮುಖಳು, ಅವಳಿಂದ ಊರವರಿಗೆ ಅನುಕೂಲ. ಪೂಜೆ ತಪ್ಪಿದರೆ, ಕಟ್ಟಳೆ ಮುರಿದರೆ ದೇವತೆಯಿಂದ ಕೆಡುಕು ತಪ್ಪಿದ್ದಲ್ಲ ; ಹಲವಾರು ಬಗೆಯ ಬೇನೆಗಳು ಕಾಡತೊಡಗುತ್ತವೆ, ಜನರೂ ದನಗಳೂ ಇದ್ದಕ್ಕಿದ್ದಂತೆ ಸಾಯತೊಡಗುತ್ತಾರೆ. ದವಸಧಾನ್ಯಗಳು ಕಾರಣವಿಲ್ಲದೆ ಕೆಡುತ್ತವೆ, ನೀರಮೇಲೆ ಉರಿ ಕಾಣಿಸಿಕೊಳ್ಳುತ್ತದೆ, ಆಸರೆಯಾಯುವ ಮರಗಳು ಸಿಡಿಲಿಗೆ ತುತ್ತಾಗಿ ಬೀಳುತ್ತವೆ, ಗಿಡಗಳು



ಗೋಕರ್ಣದ ಭದ್ರಕಾಳಿ

ಭುವನೇಶ್ವರದ ವೈತಾಳ ದೇವಾಲಯದ ಮೂಲಮೂರ್ತಿ ಚಾಮುಂಡಾ

ಹುಳು ಹಿಡಿದು ಕೊಳೆಯುತ್ತವೆ. ಇವೆಲ್ಲ ತಾಯಿಯ ಮುನಿಸು ಎಂದು ಜನರ ಎಣಿಕೆ. ಇದನ್ನು ತಪ್ಪಿಸಲು ಕಟ್ಟಳೆಗಳು ಸರಿಯಾಗಿ ಜರುಗಬೇಕು. ಎಡೆಗಳನ್ನು ಓರಣವಾಗಿ ಇಡಬೇಕು ; ಕೋಳಿ, ಕುರಿ, ಎಮ್ಮೆ ಇವು ಬಲಿಯಾಗಬೇಕು ; ಕೆಂಡದ ಮೇಲೆ ನಡೆದಾಡಬೇಕು ; ಸಿಡಿ ತಿರುಗಬೇಕು ; ಮೈಕೈ ಗಾಸಿಮಾಡಿ ಕೊಳ್ಳಬೇಕು ; ನೆತ್ತರು ಸುರಿಯಬೇಕು ಇತ್ಯಾದಿ ಇತ್ಯಾದಿ. ಕೆಲವು ಕಟ್ಟಳೆಗಳು ಭೀಕರವಾದುವು, ಕೆಲವು ಅಚ್ಚರಿಯನ್ನುಂಟುಮಾಡುವುವು. ಸಭ್ಯತೆಯ ಗಾಳಿ ಕುಡಿದು ಸ್ವಭಾವ ಹಸಿಯಾಗಿಯೇ ಇರುವವರಿಗೆ ಇವೆಲ್ಲ ಅಸಭ್ಯ, ಘೋರ, ಬರ್ಬರವೆನ್ನಿಸಬಹುದು ; ಆದರೆ ಗ್ರಾಮೀಣ ವಾತಾವರಣದಲ್ಲಿ ಇವು ಅಸಭ್ಯ

ಕೋಲಾರಮ್ಮ

ಶಿರ್ಸಿಯ ಮಾರಿಕಾಂಬೆ

ವೆನಿಸುವುದಿಲ್ಲ, ಅಗತ್ಯವೆನಿಸುತ್ತವೆ. ಹಾಗೆಂದೇ ಅವರು ಅದನ್ನು ತಪ್ಪದೆ ನಡೆಸುತ್ತಾರೆ. ಈ ಕಟ್ಟಳೆಗಳಲ್ಲಿ ವೈಯಕ್ತಿಕ ವಿವರಗಳನ್ನು ಮೀರಿ ನಿಲ್ಲುವುದು ಸಾಮುದಾಯಿಕ ವಿವರ.

ದೇವಿಯ ಮೊದಮೊದಲ ಶಿಲ್ಪಗಳು ಒರಟಾಗಿಯೇ ಇವೆ. ಜಾನಪದ ಮನೋಧರ್ಮಕ್ಕೆ ಅನುಗುಣವಾದ ಆಕಾರ ಅವುಗಳವು. ಕೆಲವೊಮ್ಮೆ ಘೋರ ವಾದ ಆಕಾರ (ಮಾರಿ, ಕಾಳಿ, ದುರ್ಗೆ ಮೊದಲಾದ ಮೂರ್ತಿಗಳು)–ತಲೆಯ ಮೇಲೆ ಹಾವಿನ ಸುರುಳಿ, ಹಣೆಗಣ್ಣು, ಉಳಿದೆರಡು ಬಿರಿಗಣ್ಣುಗಳು, ಬಾಯಲ್ಲಿ ಕೋರೆದಾಡೆ, ಹೊರಚಾಚಿ ಇಳಿಬಿದ್ದ ನಾಲಗೆ, ಮೊರದಗಲ ಹರಡಿಕೊಂಡ ತಲೆಗೂದಲು, ಮುನಿಸಿನಿಂದ ಮೇಲೆದ್ದು ನಿಂತ ಜಟೆಗಳು, ಕೈಯಲ್ಲಿ ಹಿಡಿದ ಕತ್ತಿ, ಈಟಿ ಭರ್ಜಿ ಮತ್ತು ಕಡಿದ ತಲೆ, ನಡುವಿಗೆ ರುಂಡಮಾಲೆ, ವಾಹನಕ್ಕೆ ಸಿಂಹವೋ ಹುಲಿಯೋ ಹೀಗೆ. ಇಷ್ಟೆಲ್ಲ ವಿವರಗಳಿಲ್ಲದ ಶಿಲ್ಪವೂ ಸಾಮಾನ್ಯವೇ. ಮರದ ದಿಮ್ಮಿಯನ್ನು ಅಥವಾ ಕಲ್ಲಿನ ಕಂಬವನ್ನು ನಿಲ್ಲಿಸಿ ಮೇಲ್ಭಾಗವನ್ನು ಮಾತ್ರ ತಲೆಯಂತೆ ಕಂಡರಿಸಿದ ದೇವೀಮೂರ್ತಿಗಳು ಬಹುಕಡೆ ಕಾಣಸಿಗುತ್ತವೆ. ಹೀಗಿರುವಾಗ ತಲೆಯನ್ನು ಸಿಂಗರಿಸಿರುವರು, ಕತ್ತಿನಿಂದ ಸರಗಳನ್ನು ಇಳಿಬೀಳಿ ಸುವರು, ಉಳಿದ ಭಾಗವನ್ನು ಸೀರೆಯಿಂದ ಮುಚ್ಚುವರು. ಕೈಗಳಾಗಲೀ ಕಾಲುಗಳಾಗಲೀ ಇರುವುದಿಲ್ಲವಷ್ಟೆ. ಮರದ ಮೂರ್ತಿಗಳು ಮೊದಲೇ ಹೀಗಿ ದ್ದರೂ ಕಾಲಕ್ರಮದಲ್ಲಿ ಕೈಗಳನ್ನೂ ಕಾಲುಗಳನ್ನೂ ಬೇರೆಯಾಗಿ ಕಂಡರಿಸಿ ಇದಕ್ಕೆ ಸೇರಿಸುವುದು ಬಳಕೆಗೆ ಬಂದಿತು.

ಜಾನಪದ ಗುಡಿಗಳಲ್ಲಿ ಧ್ರುವಬೇರ, ಚಲಬೇರ ಎಂಬ ಭೇದವಿಲ್ಲ. ಮೂಲಸ್ಥಾನದ ಮೂರ್ತಿಯನ್ನೇ ಉತ್ಸವಕ್ಕೂ ಹೊರಗೊಯ್ಯುವರು. ಒಮ್ಮೊಮ್ಮೆ ಮಣ್ಣಿನ ಮೂರ್ತಿಯನ್ನು ಮಾಡಿ ಬಣ್ಣ ಬಳಿದು ಸಿದ್ಧಪಡಿಸಿ ದಾಗ, ಅದನ್ನು ನೆಲೆಯಾಗಿ ಒಂದೇ ಕಡೆ ಇರಿಸಿಕೊಳ್ಳುವರು. ಮೆರವಣಿಗೆಗೆ ಅದರ ಮುಖವಾಡವನ್ನೋ ಆಯುಧವೊಂದನ್ನೋ ಒಯ್ಯುವರು. ಅಥವಾ ಮರದ ಸಣ್ಣ ಪ್ರತಿಕೃತಿಯನ್ನು ಮಾಡಿ ಬಳಸುವರು.

ಮಣ್ಣಾಗಲೀ, ಮರವಾಗಲೀ, ಕಲ್ಲಾಗಲೀ ಜಾನಪದ ಚೌಕಟ್ಟಿನ ಮಾತೃದೇವತೆಯ ಆಕಾರ ಮೇಲೆ ಕಾಣಿಸಿದಂತೆ ಘೋರವಾಗಿರುವುದು ವಾಡಿಕೆ. ಸ್ವರೂಪ ಘೋರವಾಗಿರುವುದು ಆಕೆಯ ಸ್ವಭಾವ ಕ್ರೂರವಾಗಿದೆಯೆಂದಲ್ಲ. ಆಕೆ ಎಷ್ಟಾದರೂ ತಾಯಿಯಲ್ಲವೆ ? ಕಾಪಿಡುವವಳಲ್ಲವೆ ? ಆಕೆಯ ಘೋರ ರೂಪ ಅವಳು ಎದುರಿಸಬೇಕಾದ ರೋಗ–ರುಜಿನೆ, ಅಡ್ಡಿ–ಆತಂಕ, ಹಗೆಗಳ



ಗೌರಿ - ಮರದ್ದು



ಮಧ್ಯಭಾರತದ ಜಾನಪದ ಪುತ್ಥಳಿ - ಮರದ್ದು

ಕಾಟ, ನಿಸರ್ಗದ ಹಾವಳಿ ಇವನ್ನೆಲ್ಲ ಅನುಸರಿಸಿದ್ದು. ದುರದೃಷ್ಟ ಕ್ರೂರವಾಗಿದ್ದರೆ ಅದನ್ನು ಹತ್ತಿಕ್ಕಬೇಕಾದ ದೇವಿಯ ರೂಪವೂ ಕ್ರೂರವಾಗಿ ಕಾಣಬೇಕಲ್ಲವೆ ? ಸಾಮಾನ್ಯವಾಗಿ ಪಾಪಪುರುಷನನ್ನೋ ರೋಗಯಕ್ಷನನ್ನೋ ತುಳಿಯುತ್ತಿರುವಂತೆ, ಅಂಥ ಆತಂಕಕಾರಿಯ ಮೇಲೆ ಕುಳಿತಂತೆ, ಅಂಥ ಹಗೆಯ ತಲೆಯನ್ನು ಕಡಿದು ಕೈಯಲ್ಲಿ ಹಿಡಿದಿರುವಂತೆ ಮೂರ್ತಿಯ ರೂಪ ಇರುತ್ತದೆ. ಚಾಮುಂಡೇಶ್ವರಿಯು ಸಿಂಹವನ್ನೇರಿ ಕುಳಿತು ಎಮ್ಮೆಯ ರೂಪದ ಅಸುರನನ್ನು ಕೊಲ್ಲುವುದು ಇದಕ್ಕೆ ನಿದರ್ಶನ.

ಹಗೆಯನ್ನು ಮರುಕವಿಲ್ಲದೆ ಕೊಲ್ಲುವಂತೆ ಭಕ್ತನ ಮೇಲೆ ಮರುಕಗೊಂಡು ಅವನನ್ನು ಕಾಪಾಡುವವಳೂ ಅವಳೇ. ಆದರೆ ಕಟ್ಟಳೆಯನ್ನು



ಅಂಬಲಪಾಡಿಯ ಮಹಾಕಾಳಿ (ಜಯದುರ್ಗೆ)

ಮೀರಿದರೆ ಭಕ್ತನಾದರೂ ಆಕೆಯ ಕ್ರೂರಸ್ವಭಾವ ಕಾಣಿಸಿಕೊಳ್ಳುತ್ತದೆ. ಹಾಗೆಂದೇ ಹಿಂದಿನಿಂದ ಬಂದ ಕಟ್ಟಳೆಯನ್ನು ಮೀರಲು ಆ ಜನ ಅಂಜುವರು. ಆಕೆಯ ಉಗ್ರರೂಪಗಳು ಕಾಳಿ, ಕರಾಳಿ, ಚಾಮುಂಡಾ, ಜ್ವಲಜ್ಜಿಹ್ವಾ, ಛಿನ್ನಮಸ್ತಾ, ಉಗ್ರತಾರಾ, ಮಾರಿ ಮೊದಲಾದುವು. ಆಕೆಗೆ ಸೌಮ್ಯರೂಪವೂ ಇದೆ—ಗೌರೀ, ಅಂಬಾ, ಲಕ್ಷ್ಮಿ ಮೊದಲಾದುವು.

ಆಕೆಯ ಗುಡಿಯೆಂದು ನಿರ್ದೇಶಿಸಲು ಗುಡಿಯ ಗೋಡೆಯ ಮೇಲೋ,

ಬಾಗಿಲ ಮೇಲೋ ವಿಮಾನದ ಮೇಲೋ ಸಿಂಹಗಳನ್ನು ಕಾಣಿಸುತ್ತಾರೆ; ಗುಡಿಯ ಮುಂದೆ ಆಕೆಯ ಕಡೆ ಮುಖ ಮಾಡಿ ಸಿಂಹವಿರುವುದೂ ಉಂಟು. ದುರ್ಗೆಗೆ ಸಿಂಹದ ನೆಂಟಿರುವುದು ನಮ್ಮ ದೇಶದಲ್ಲಿ ಮಾತ್ರವಲ್ಲ; ಒಂದು ಕಾಲದಲ್ಲಿ ಪ್ರಪಂಚದ ಹಲವು ದೇಶಗಳ ದೇವಿಯರಿಗೂ ಸಿಂಹಕ್ಕೂ ಸಂಬಂಧವಿದ್ದಿತು. ಕ್ರಿಸ್ತಪೂರ್ವ ೨೨೫೦ರ ಸುಮಾರಿಗೆ ಸಿದ್ಧವಾದ ಸುಮೇರಿಯಾ ದೇಶದ ಮುದ್ರೆಯೊಂದರಲ್ಲಿ ಮಾತೃದೇವತೆಯು ಸಿಂಹದೊಂದಿಗಿರುವ ಚಿತ್ರಣವಿದೆ. ಹೀಗೆಯೇ ಹಲವು ಇತರ ಹಳೆಯ ಸಂಸ್ಕೃತಿಗಳಲ್ಲೂ ಹೆಣ್ಣುದೇವತೆಗಳಿಗೂ ಸಿಂಹಕ್ಕೂ ನೆಂಟಿದ್ದಿತು.

ಮಾತೃದೇವತೆಯರ ಇತಿಹಾಸ ಆರಂಭವಾಗುವುದು ಜಾನಪದ ಕಟ್ಟಳೆಗಳ ಬುನಾದಿಯ ಮೇಲೆ. ಪ್ರತಿಯೊಂದು ಹಳ್ಳಿ, ಮಾಗಣೆ, ಬೀಡು, ತಂಡಕ್ಕೂ ತನ್ನದೇ ಆದ ಮಾತೃದೇವತೆಯಿದ್ದು ಅದರ ಬಗ್ಗೆ ಕಥೆಗಳು ಜನರಲ್ಲಿ ಬಳಕೆಯಲ್ಲಿರುತ್ತವೆ. ಈ ಕಥೆಗಳನ್ನು ವಿಶ್ಲೇಷಣೆ ಮಾಡಿದರೆ ಜನವಸತಿಗೆ ಯಾವುದಾದರೊಂದು ಬಗೆಯಲ್ಲಿ ನೆರವಾದ ಹೆಂಗಸು ತೀರಿಕೊಂಡಮೇಲೆ ದೇವತೆಯೆಂದು ಪ್ರಸಿದ್ಧಳಾಗುವುದು ಕಂಡುಬರುತ್ತದೆ. ತನ್ನ ಶೌರ್ಯದಿಂದ ಸಾಹಸದಿಂದ ಹಗೆಗಳನ್ನು ಹೊಡೆದೋಡಿಸಿ ತಾನು ಸತ್ತವಳು, ತಂಡಗಳ ಕಾದಾಟದಲ್ಲಿ ತನ್ನ ಕೆಚ್ಚೆದೆಯಿಂದ ಜನರನ್ನು ಅಚ್ಚರಿಗೊಳಿಸಿದವಳು, ಕೆರೆಯ ಕೋಡಿ ನಿಲ್ಲದಿರಲು ತನ್ನನ್ನು ತಾನು ಬಲಿಕೊಟ್ಟುಕೊಂಡು ಕೆರೆಯಲ್ಲಿ ನೀರನ್ನು ನಿಲ್ಲಿಸಿದವಳು, ಹಳ್ಳಿಯ ಬಾವಿಗೆ ನೀರು ಬೀಳಲು ತನ್ನ ಪ್ರಾಣವನ್ನು ನೀಗಿಕೊಂಡವಳು, ತನ್ನ ಶೀಲವನ್ನು ಉಳಿಸಿಕೊಳ್ಳಲು ಆತ್ಮಹತ್ಯೆ ಮಾಡಿಕೊಂಡವಳು, ಕುಟುಂಬದ ಹಿತಕ್ಕೆ ಗೌರವಕ್ಕೆ ನೆರವಾಗುವಂಥ ಕಷ್ಟದ ಕೆಲಸಮಾಡಿ ಹೋದವಳು, ಹೀಗೆ ಹಲವು ಹೆಂಗಳೆಯರು ಜನರ, ಜನಾಂಗದ ಕೃತಜ್ಞತೆಗೆ ಪಾತ್ರರಾಗಿ ಅವರ ನೆನಪಿನಲ್ಲಿ ಬಹುಕಾಲ ಉಳಿಯುತ್ತಾರೆ.

ಮುಂದಿನ ತಲೆಮಾರಿನವರು ಅಂಥ ಅಸಾಧಾರಣ ಹೆಂಗಸಿನ ಸ್ಮಾರಕಕ್ಕೆ ಗುಡಿಯನ್ನೋ, ಮೂರ್ತಿಯನ್ನೋ ಮಾಡಿಟ್ಟುಕೊಂಡು, ಗೊತ್ತಾದ ದಿನ ಆಕೆಯ ನೆನಪಿನಲ್ಲಿ ಕಟ್ಟಳೆಯೊಂದನ್ನು ನಡೆಸುತ್ತಾರೆ. ಹಾಗೆ ಸಾಹಸದಿಂದ ಅಸುವನ್ನು ತೊರೆದ ಹೆಂಗಸು ದಿಟವಾಗಿ ದೈವವೆಂದೂ, ಆಕೆಯ ದೇಹ ಮರೆಯಾದರೂ ಆಕೆಯ ಚೇತನ ಎಲ್ಲ ಕಾಲಕ್ಕೂ ಇದ್ದುಕೊಂಡು ಜನರ, ಜನಾಂಗದ ಹಿತವನ್ನು ಕಾಪಾಡುವುದೆಂಬ ನಂಬಿಕೆ ಮಾತೃದೇವತೆಯರ ಕಲ್ಪನೆಯ ಹಿನ್ನೆಲೆಯಲ್ಲಿದೆ. ಆಕೆ ಮಾಡಿದುದು ಒಂದು ಕೆಲಸವಾದರೂ, ಆಕೆಯ ಬಗ್ಗೆ ಹಲ

ವಾರು ಕಥೆಗಳು ಅದ್ಭುತ, ರೋಮಾಂಚಕ, ಎನ್ನುವ ರೀತಿಯಲ್ಲಿ ಹುಟ್ಟಿಕೊಳ್ಳು ತ್ತವೆ. ಆಕೆಯ ಕುಟುಂಬದ ನೆಂಟು ಹಿಂದಕ್ಕೆ ಸರಿದು ಇಡೀ ಬುಡಕಟ್ಟಿನ ನೆಂಟು ಬೇರೂರುತ್ತದೆ. ಮಧುರೆಯ ಮೀನಾಕ್ಷಿ, ವಾಸವೀ (ಕನ್ಯಾಕುಮಾರಿ), ಮಾನಸಾ, ದ್ರೌಪದಿಯಮ್ಮ, ಹಾಸನಾಂಬಾ ಹೀಗೆ ಸಾವಿರಾರು ಹೆಣ್ಣುದೇವತೆ ಗಳು ಹೀಗೆಯೇ ಒದಗಿಬಂದವರು. ಅವರ ಐತಿಹಾಸಿಕ ಹಿನ್ನೆಲೆಗಿಂತ ದೈವ ಸನ್ನಿಧಾನ ಪ್ರಧಾನವಾಗುವುದು ಸಹಜವೆ.

ಮಾತೃದೇವತೆಯರು ಹೀಗೆ ಸಣ್ಣ ಸಣ್ಣ ತಂಡಗಳ ಆಸರೆಯಲ್ಲಿ ಬೆಳೆದವ ರಾದುದರಿಂದ ಸಾವಿರಾರು ಮಾತೃದೇವತೆಯರ ಪ್ರತೀತಿ ಇರುವುದು ಸರಿಯೇ. ಆದರೆ ಅವರೆಲ್ಲರ ಹೆಸರು, ಕಥೆ, ಪ್ರಭಾವಗಳಲ್ಲಿ ತುಂಬ ಸಾದೃಶ್ಯವಿರುತ್ತದೆ. ಈ ಸಾದೃಶ್ಯವನ್ನವಲಂಬಿಸಿ ಮುಂದೆ ಒಬ್ಬಳೇ ಮಾತೃದೇವತೆ ಹೀಗೆ ಹಲವಾರು ರೂಪಗಳನ್ನು ತಳೆಯುವಳೆಂಬ ಭಾವನೆ ಬೆಳೆಯಿತು. ಹಲವಾರು ದೇವಿಯರು ಒಬ್ಬಳು ಜಗದಂಬೆಯ, ಎಲ್ಲಮ್ಮನ (ಎಲ್ಲರ ಅಮ್ಮನ) ತೋರಿಕೆಗಳು. ದೇವಿಗೆ ಪ್ರಾದೇಶಿಕವಾದ ನೆಲೆಯೂ ಉಂಟು, ಸಾರ್ವತ್ರಿಕವಾದ ತಾತ್ಪರ್ಯವೂ ಉಂಟು. ಹಾಸನದ ಹಾಸನಾಂಬೆ, ಕೋಲಾರದ ಕೋಲಾರಮ್ಮ, ಮಧುರೆಯ ಮೀನಾಕ್ಷಿ, ಮುಂತಾದವರೆಲ್ಲ ವಾಸ್ತವವಾಗಿ ಮಾತೃದೇವತೆಯಾದ, ಜಗಜ್ಜನನಿ ಯಾದ, ಧಾತ್ರಿಯಾದ ದುರ್ಗೆಯ ರೂಪಗಳೇ ಎಂಬ ಕಲ್ಪನೆ ಇರದಿದ್ದರೆ ಅವ ರಿಗೆ ನಡೆಯುವ ಪೂಜೆಗೆ ಅರ್ಥವಿಲ್ಲದೆ ಹೋಗುತ್ತದೆ. ಜಾನಪದನೆಲೆಗೂ ಸಭ್ಯನೆಲೆಗೂ ಅನುಕ್ರಮವಾದ ಒಂದು ಸಂಬಂಧವಿರುವುದನ್ನು ಗಮನಿಸಬೇಕು.

ಮೊದಲಿಗೆ ಒಬ್ಬಳೇ ಆದ ಮಾತೃದೇವತೆ ಭೂಮಿಯ ಪ್ರಸವಶಕ್ತಿಯ ಸಂಕೇತ. ಆಕೆಯನ್ನು 'ಮಾ' ಅಥವಾ 'ಅಮ್ಮ' ಎಂದು ಕರೆಯುವ ವಾಡಿಕೆ ವ್ಯಾಪಕವಾದುದು. 'ಅಂಬಾ' ಎನ್ನುವ ಸಂಸ್ಕೃತಪದದಿಂದ 'ಅಮ್ಮ'ನೆಂಬ ಪದ ಬರಲಿಲ್ಲ; 'ಅಮ್ಮ'ನೇ ಮಾರ್ಪಟ್ಟು 'ಅಂಬಾ' ಆಯಿತು. 'ಅಮ್ಮ' ಎಂಬ ಪದ ಶುದ್ಧಾಂಗವಾಗಿ ನಮ್ಮ ದೇಶದ್ದು ಎಂದೂ ಹೇಳುವಂತಿಲ್ಲ. ಆಸ್ಟ್ರಿಕ್ ಭಾಷೆಯ 'ಅಮ್ಮ', ಸುಮೇರಿಯನ್ ಜನರ 'ಉಮ್ಮ', ಅಕ್ಕೇಡಿ ಯನ್ನರ 'ಉಮ್', ಸಿಥಿಯನ್ನರ 'ಓಮ್ಮೋ' ಇವೆಲ್ಲ ನಮ್ಮ 'ಅಮ್ಮ' ಅಥವಾ 'ಉಮಾ' ಎಂಬ ಮಾತುಗಳಿಗೆ ಸಂಬಂಧವಿರುವವೇ. ಇದೇ ಹೆಸರಿನ ದೇವತೆಯು ಪರ್ಶಿಯಾದೇಶದ ಖಾರಿಯಲ್ಲಿ, ಕೆಂಪುಸಮುದ್ರದ ನೆರೆಯಲ್ಲಿ, ಏಶಿಯಾ ಮೈನರ್‌ನಲ್ಲಿ ಪೂಜೆಗೊಳ್ಳುತ್ತಿದ್ದಳು. ಆಕೆಯನ್ನು ಭೂಮಿಯ

ಸಾಮ್ರಾಜ್ಞಿಯೆಂದೂ, ಸಸ್ಯಸಂಪತ್ತಿನ ಒಡತಿಯೆಂದೂ, ಪ್ರಾಣಿಗಳೆಲ್ಲದರ (ಅದರಲ್ಲೂ ಬಸವ, ಸಿಂಹಗಳ) ಹಿತಕಾರಿಣಿಯೆಂದೂ, ಕೋಟೆಗಳನ್ನು ಕಾಪಾಡುವವಳೆಂದೂ, ಬೆಟ್ಟಗಳಲ್ಲಿ ವಾಸಮಾಡುವವಳೆಂದೂ, ಕಾಡುಮೇಡುಗಳಲ್ಲಿ ಅಲೆದಾಡುವವಳೆಂದೂ ಭಾವಿಸಿಕೊಂಡಿದ್ದರು. ನಮ್ಮ ದುರ್ಗೆಯ ಸ್ವರೂಪ ಇದೇ ಅಲ್ಲವೆ ?

ದೈವಗಳ ಪ್ರಪಂಚ

ಮನುಷ್ಯನು ಸತ್ತಮೇಲೆ ಏನಾಗುತ್ತಾನೆ ? ಇಲ್ಲಿಂದ ಹೊರಟು ಎಲ್ಲಿಗೆ ಹೋಗುತ್ತಾನೆ ? ತೀರಿಕೊಂಡನಂತರ ಏನೂ ಇರದಂತೆ ಮರೆಯಾಗುವನೆ ? ಮನುಷ್ಯನಿಗೆ ಉಳಿಯಬೇಕೆಂಬ ಗೀಳು ಬಲವಾಗಿರುವುದರಿಂದ ತಾನು ಸತ್ತು ಗಾಳಿಯಂತೆ ಮರೆಯಾಗುವೆನೆಂದು ನಂಬಲು ಹಿಂಜರಿಯುತ್ತಾನೆ. ಸತ್ತಮೇಲೂ ಉಳಿದೇ ಇರುವೆನೆಂದು ಬಗೆಯುತ್ತಾನೆ. ಸಾಯುವಾಗ ಬಿದ್ದು ಮಣ್ಣಾಗುವುದು ಅಥವಾ ಬೂದಿಯಾಗುವುದು ನಮ್ಮ ಶರೀರವಷ್ಟೆ, ಚೇತನ ಉಳಿದುಕೊಳ್ಳುತ್ತದೆ. ಮೈಯ ನೆಂಟು ಇರದಿದ್ದರೂ ಅದರ ಇರವಿಗೇನು ತೊಂದರೆಯಿರದು. ಸಾಮಾನ್ಯಮನುಷ್ಯರ ವಿಚಾರವಾಗಿಯೂ ಈ ಮಾತು ದಿಟವಾದರೆ ತಮ್ಮ ಪ್ರತಿಭೆಯಿಂದಲೂ ಪ್ರಭಾವದಿಂದಲೂ ಹಿರಿಯರೆನಿಸಿದವರ ಚೇತನ ಉಳಿಯುವುದರಲ್ಲಿ ಸಂಶಯವೇನು ? ಜಾನಪದಮನೋಧರ್ಮದಲ್ಲಿ ಮನುಷ್ಯನ ಹಿರಿಮೆಯನ್ನು ಅವನ ಸಾಮರ್ಥ್ಯ, ಸೌಂದರ್ಯ, ಸಾಮುದಾಯಿಕನೆಲೆ, ಮುಂತಾದುವು ನಿರ್ಧರಿಸುತ್ತವೆ. ಕಾದಾಡುವಾಗ ಕೆಚ್ಚೆದೆಯನ್ನು ಕಾಣಿಸುವವನು, ರೋಗ–ರುಜಿನಗಳು ಗುಂಪನ್ನು ಕಾಡಿದಾಗ ತನ್ನ ಮಂತ್ರಗಳಿಂದ ಅವನ್ನು ತಡೆಯುವವನು, ತಂಡವನ್ನು ನಡೆಸಿಕೊಂಡುಹೋಗುವವನು, ಸಮುದಾಯದ ನಾಯಕ ಅಥವಾ ಪುರೋಹಿತ ಇವರೆಲ್ಲರೂ ಹಿರಿಯರೇ. ಹಾಗೆಯೇ ಕೊಲೆಪಾತಕ, ಕ್ರೂರಿ, ಕಳ್ಳ, ಕಾಮುಕ ಇವರ ಚೇತನಗಳೂ ಹಿರಿಯವೇ !

ಸತ್ತವನ ಸ್ವಭಾವ ತೀರ ಉದಾತ್ತವಾದುದಾದರೆ ಅಥವಾ ತೀರ ನೀಚವಾದುದಾದರೆ ಅವನ ಚೇತನ ಸ್ಪಷ್ಟವಾಗಿಯೇ ಉಳಿದುಕೊಳ್ಳುತ್ತದೆ. ಹೀಗೆ ಮೈಯಿಂದ ಮುಕ್ತವಾಗಿ ಬಿಡಿಯಾಗಿ ಬಿಡುವಾಗಿ ಉಳಿದುಕೊಳ್ಳುವ ಚೇತನವು ತಂಡವನ್ನು ಕಾಪಾಡಬಹುದು, ಇಲ್ಲವೇ ಕಾಡಬಹುದು. ಆದುದರಿಂದ ಬದುಕಿರುವವರು ಇಂಥ ಚೇತನಗಳನ್ನು ಒಲಿಸಿಕೊಳ್ಳಬೇಕಾಗುತ್ತದೆ; ಅವರ ನೆರ

ವನ್ನು ಪಡೆದುಕೊಳ್ಳುವುದು, ಅವರ ಕಾಟವನ್ನು ತಪ್ಪಿಸಿಕೊಳ್ಳುವುದು ಎರಡೂ ಅಗತ್ಯವಾಗುತ್ತವೆ. ಅವರಿಗೆ ಕಾಲಕಾಲಕ್ಕೆ ಎಡೆಯಿಟ್ಟು, ಅವರ ಹೆಗ್ಗಳಿಕೆಯನ್ನು ಹಾಡಿ ಹೊಗಳಿ, ಅವರಿಗೆ ತಾಣವೊಂದನ್ನು ಏರ್ಪಡಿಸಿ, ಅವರ ಪ್ರತಿಕೃತಿಗಳನ್ನು ಮಾಡಿ ನಿಲ್ಲಿಸಿ ಅವರನ್ನು ಒಲಿಸಿಕೊಳ್ಳಲು ತೊಡಗುತ್ತಾರೆ.

ಹಿರಿತನದಿಂದ ಬದುಕನ್ನು ನಡೆಸಿದವರು, ಹೆದರಿಸಿ ಬಾಳಿದವರು ಸತ್ತ ಮೇಲೆ ಪ್ರೇತಗಳಾಗಿ, ದೈವಗಳಾಗಿ, ಭೂತಗಳಾಗಿ ಮುಂದರಿಯುತ್ತ ತಾವು ಬದುಕಿದ್ದಾಗ ತಮ್ಮ ನೆರೆಯಲ್ಲಿದ್ದವರ ತಮ್ಮ ಒಡನಾಡಿಗಳಾಗಿದ್ದವರ, ತಮ್ಮ ತಂಡದವರ ದಿನದಿನದ ವ್ಯವಹಾರಗಳಲ್ಲಿ ಆಸಕ್ತಿತಳೆಯುತ್ತಾರೆ. ಅವರ ಚೇತನದಲ್ಲಿನ ಸತ್ತ್ವ ಅವರಿಗೆ ನೆರವಾಗುವ ಸಾಮರ್ಥ್ಯವನ್ನೂ ಒದಗಿಸುತ್ತದೆ.

ಭುವನೇಶ್ವರದ ವೈತಾಳ ದೇವಾಲಯದಲ್ಲಿ ಭೈರವ

ಅವರನ್ನು ಬವಣೆಪಡಿಸುವ ಬಲವನ್ನೂ ಒದಗಿಸುತ್ತದೆ. ಹೀಗೆ ಅವರಲ್ಲಿ ಇಷ್ಟದೈವಗಳೂ ಉಂಟು, ದುಷ್ಟದೈವಗಳೂ ಉಂಟು. ಇಷ್ಟದೈವ ದುಷ್ಟವೂ ಆಗಬಹುದು, ದುಷ್ಟವಾದುದು ಇಷ್ಟವೂ ಆಗಬಹುದು. ಹೀಗೆ ಮೈಯಿಲ್ಲದಿದ್ದರೂ ಸಾಮರ್ಥ್ಯವಿರುವ ದೈವಗಳು ಬುಡಕಟ್ಟಿನ ಬದುಕಿನಲ್ಲಿ ಮುಖ್ಯವೆನಿಸಿ

ದುವು. ಅವರ ಅನುಗ್ರಹ, ನಿಗ್ರಹ ಶಕ್ತಿಗಳು ಮುಖ್ಯವಾದುವು. ಅವರು ಮುನಿಸಿಕೊಳ್ಳದಂತೆ ನೋಡಿಕೊಳ್ಳುವ ಕಟ್ಟಳೆಗಳು ಬಳಕೆಗೆ ಬಂದುವು. ಅವರ ನೆರವನ್ನು ಪಡೆದುಕೊಳ್ಳುವ ಉಪಾಯಗಳೂ ಸಿದ್ಧವಾದುವು.

ಬರುಬರುತ್ತ ಪ್ರೇತಕ್ಕೂ ಭೂತಕ್ಕೂ ವ್ಯತ್ಯಾಸಮಾಡುವ ಕಲ್ಪನೆ ಮೂಡಿಕೊಂಡಿತು. ತಾನು ಸತ್ತು ತನ್ನ ದೇಹ ಒಪ್ಪವಾದ ಸ್ಥಳದಿಂದ ಕದಲಲಾರದೆ, ತಾನು ಬದುಕಿದ್ದಾಗ ವಾಸಿಸಿದ ಮನೆಯನ್ನು ಮರೆಯಲಾರದೆ ಅಲ್ಲೇ ಮರೆಯಾಗಿ ಸುಳಿದಾಳಿಕೊಂಡು ಕಾಲಕಳೆಯುವ ಚೇತನಗಳು ಪ್ರೇತಗಳೆನಿಸಿಕೊಂಡುವು. ಬದುಕಿದ್ದಾಗ ಬಲವಾಗಿದ್ದು, ಅಧಿಕಾರವನ್ನು ಹೊಂದಿದ್ದು, ಸಾಹಸದಿಂದ ಹೆಸರನ್ನು ಪಡೆದಿದ್ದು ತೀರಿಕೊಂಡ ಚೇತನಗಳು ಭೂತಗಳು. ಮೊದಲನೆಯ ಬಗೆಯ ಚೇತನಗಳು ಜನರ ನೆರವಿಗೆ ಬರಲಾರವು ; ಅವುಗಳಿಂದ ತೊಂದರೆಯಾದೀತು ಅಷ್ಟೆ. ಆದರೆ ಭೂತಗಳಿಂದ ನೆರವು ಸಾಧ್ಯ; ಬಯಸಿದಾಗ ಅವು ಬಂದು ನಮಗಾಗದ ಕೆಲಸವನ್ನು ಮಾಡಿಹೋಗಬಲ್ಲುವು. ಇಷ್ಟು ಸಮರ್ಥವಾದ ಭೂತಗಳನ್ನು ಬರಮಾಡಿಕೊಳ್ಳುವ, ಒಲಿಸಿಕೊಳ್ಳುವ ಉಪಾಯಗಳು ಭೂತಾರಾಧನೆಯ ವಿವರಗಳು. ಎಲ್ಲ ಹಳೆಯ ಜನರಲ್ಲೂ ಈ ಕಲ್ಪನೆಯೂ, ಇಂಥ ಕಟ್ಟಳೆಗಳೂ ಕಾಣಿಸಿಕೊಳ್ಳುತ್ತವೆ.

ಈ ತೆರನಾದ ಭೂತಗಳಲ್ಲದೆ ಮತ್ತೊಂದು ಬಗೆಯ ಚೇತನಗಳೂ ಇವೆ. ಬದುಕಿದ್ದಾಗ ಕೆಟ್ಟವನೆನಿಸಿಕೊಂಡಿದ್ದು, ತಂಡದ ನೀತಿನಿಯಮಗಳನ್ನು ನಿರ್ಲಕ್ಷಿಸಿ, ದುರ್ಮರಣಕ್ಕೆ ತುತ್ತಾದ ಅಥವಾ ಆತ್ಮಹತ್ಯೆಮಾಡಿಕೊಂಡ ಮನುಷ್ಯ ಸತ್ತು ದೆವ್ವ ಅಥವಾ ಪಿಶಾಚಿಯಾಗುತ್ತಾನೆ; ದಕ್ಷಿಣಕನ್ನಡ ಜಿಲ್ಲೆಯವರು ತುಳುಮಾತಿನಲ್ಲಿ 'ಕುಲೆ' ಎನ್ನುತ್ತಾರೆ. ಇಂಥ ಚೇತನಗಳು ಬದುಕಿರುವವರನ್ನು ನೆಮ್ಮದಿಯಾಗಿರಲು ಬಿಡುವುದಿಲ್ಲ. ಅಸೂಯೆಯಿಂದ, ರೋಷದಿಂದ, ನಿರ್ದಯೆಯಿಂದ ಜನರನ್ನು ಅವು ಕಾಡುತ್ತವೆ. ಬದುಕಿರುವ ಮಂದಿ ಇಂಥ ಚೇತನಗಳನ್ನು ದೂರವಿರಿಸಲು ಯತ್ನಿಸುತ್ತಾರೆ. ಈ ಚೇತನಗಳು ಬದುಕಿದ್ದಾಗ ಜನ ಹೇಗೆ ಅವರನ್ನು ಕಂಡು ಅಂಜುತ್ತಿದ್ದರೋ ಹೀನಾಯವಾಗಿ ಕಾಣುತ್ತಿದ್ದರೋ ಸತ್ತಮೇಲೂ ಹಾಗೆಯೇ ಅಂಜುವರು, ಹೀನಾಯವಾಗಿ ಕಾಣುವರು. ಅವುಗಳ ತಂಟೆ–ತಕರಾರುಗಳು, ಪೀಡೆ – ಉಪದ್ರವಗಳು, ಕಾಟ-ಕಾರ್ಪಣ್ಯಗಳು ಜನರಿಗೆ ಆತಂಕವನ್ನುಂಟುಮಾಡುವಂಥವು. ಜನ ಅವನ್ನು ಒಲಿಸಿಕೊಳ್ಳುವ ಹವಣಿಕೆಯನ್ನೇನು ಮಾಡದೆ ಅವನ್ನು ಹೊಡೆದಟ್ಟುವ ಮಾಟ-ಮಂತ್ರಗಳನ್ನು ಬಳಸುವರು.

ಜಾನಪದ ನೆಲೆಯಲ್ಲಿ ಪೂಜೆಗೊಳ್ಳುವ ಚೇತನಗಳು ಭೂತಗಳು; ಪಿಶಾಚಿಗಳಲ್ಲ, ದೆವ್ವಗಳಲ್ಲ. ಹಿಮಾಲಯದ ಪರಿಸರದಲ್ಲಿ, ಪಶ್ಚಿಮ ಕರಾವಳಿಯಲ್ಲಿ ನಡೆಯುವ ಭೂತಾರಾಧನೆಯನ್ನು ಪಾಶ್ಚಾತ್ಯರು ದೆವ್ವಗಳ ಪೂಜೆ (ಡೆವಿಲ್–ವರ್‌ಷಿಪ್ ಅಥವಾ ಡೆಮನ್–ವರ್‌ಷಿಪ್) ಎಂದು ಕರೆಯುವುದು ಸರಿಯಲ್ಲ. 'ಡೆವಿಲ್' ಅಥವಾ 'ಡೆಮನ್' ಎನ್ನುವ ವಿವರಗಳು ಭೂತಗಳಿಗೆ ಸಲ್ಲುವುದಿಲ್ಲ. 'ಸ್ಪಿರಿಟ್' ಎನ್ನುವುದು ಹೆಚ್ಚು ಸಮರ್ಪಕವಾದ ಪದವೆಂದು ತೋರುತ್ತದೆ. ಭೂತಗಳು (–ಇವುಗಳನ್ನು ಸ್ಥೂಲವಾಗಿ ದೈವಗಳೆಂದೂ ಕರೆಯುವುದುಂಟು, ಆದರೆ ಅವುಗಳ ನಡುವೆ ಸೂಕ್ಷ್ಮವಾದ ಭೇದವಿದೆ–) ದಿಟವಾಗಿ ಉಪಕಾರಕ ಸತ್ತ್ವಗಳು ; ಜನಾಂಗದ ಜನರು ನೆಮ್ಮದಿಯಿಂದಲೂ ಒಮ್ಮತದಿಂದಲೂ ಬದುಕಲು ನೆರವಾಗುವಂಥವು. ಅವು ದೇವತೆಗಳೆಂದೇ ಹೇಳಬಹುದು; ಮನುಷ್ಯನ ವ್ಯವಹಾರದಲ್ಲಿ ಆಸಕ್ತಿಯಿರುವ, ಮನುಷ್ಯನ ದಿನದಿನದ ಬದುಕಿನಲ್ಲಿ ಸೇರಿಬರುವ ಸತ್ತ್ವಗಳು. ಅವಕ್ಕೆ ಜನಾಂಗದ ಉಳಿವಿನಲ್ಲಿ ಏಳಿಗೆಯಲ್ಲಿ ವಿಶ್ವಾಸವಿರುತ್ತದೆ. ಆದುದರಿಂದ ಜನರನ್ನು ಸರಿಯಾದ ನೇರವಾದ ದಾರಿಯಲ್ಲಿ ನಡೆಸಿಕೊಂಡು ಹೋಗಲು ಅವು ಸಿದ್ಧವಾಗಿರುತ್ತವೆ. ಜನರಿಗೆ ನ್ಯಾಯವನ್ನು ದೊರಕಿಸಿಕೊಡಲು, ಅನ್ಯಾಯಮಾಡಿದವರನ್ನು ದಂಡಿಸಲು, ಗುಂಪಿನ ಕಟ್ಟಳೆಗಳನ್ನು ಕಾಪಾಡಲು ಭೂತಗಳು ನೆರವಾಗುತ್ತವೆ. ಆದುದರಿಂದ ಜನಾಂಗದವರೆಲ್ಲರಿಗೂ ಇಷ್ಟವಾದ ಚೇತನಗಳು ಇವು. ಅವುಗಳ ಬಗ್ಗೆ ಅವರು ಆದರದಿಂದಲೇ, ಅಭಿಮಾನದಿಂದಲೇ ನಡೆದುಕೊಳ್ಳುತ್ತಾರೆ.

ಅವುಗಳನ್ನು ಕುರಿತು ಜನಾಂಗದವರು ಜರುಗಿಸುವ ಕಟ್ಟಳೆಗಳನ್ನು 'ಮಾಟ','ಇಂದ್ರಜಾಲ', 'ಕಾಡುಕಟ್ಟಳೆಗಳು' ಎಂದು ಕರೆಯುವುದು ಸರಿಯಲ್ಲ. ಭೂತಗಳನ್ನು ಆಹ್ವಾನಿಸುವಾಗ ಅವು ಕೆಡುಕನ್ನುಂಟುಮಾಡಲೆಂಬ ಬಯಕೆಯೇ ಇರುವುದಿಲ್ಲ ; ನೆಮ್ಮದಿಯ ಬದುಕಿಗೆ ಆಸರೆಯಾಗಲೆನ್ನುವ ಕಾತರವಿರುತ್ತದೆ. ಭೂತಗಳನ್ನು ಪ್ರತಿನಿಧಿಸುವ ಅಥವಾ ಸಂಕೇತಿಸುವ ಮುಖವಾಡಗಳು ಮತ್ತು ಪರಿಕರಗಳು ಭಯಂಕರವಾಗಿರುವುವೆಂಬುದೇನೋ ದಿಟವೇ; ಸಭ್ಯರು ನೋಡಿದರೆ ಹೆದರುವಂತಿರುತ್ತವೆ. ಭೂತದ ಮಾನಿಯನ್ನು ಮೈಮೇಲೆ ತಳೆದ ಪಾತ್ರಿಯ ವರ್ತನೆಯೂ ಭಯಾನಕವಾಗಿಯೇ ತೋರುತ್ತದೆ. ಆದರೆ ಭೂತದ 'ದರ್ಶನ' ಕಾಲದಲ್ಲಿ ಪಾಲ್ಗೊಳ್ಳುವ ಜನರಿಗೆ ಹೀಗನಿಸುವುದಿಲ್ಲವೆಂಬುದು ಮುಖ್ಯವಾದ ಮಾತು. ಇತರರಿಗೆ ಏನನಿಸಿದರೆ ಏನು ? ಭೂತಗಳು ಯಾರಿಗೆ ಪ್ರಸಕ್ತವೋ ಅವರಿಗೆ ಅವು ಹಿತವೆನಿಸಿದರೆ ಆಯಿತಲ್ಲವೆ ? ಅವರ ನೋಟದಲ್ಲಿ

ಇದು ಶ್ರದ್ಧೆಗೆ ಪಾತ್ರವಾದ ವಿಚಾರ; ಅವರ ದಿನದಿನದ ಬದುಕಿನಲ್ಲಿ ಬಿಡಿಸಲಾಗದೆ ಸೇರಿಕೊಂಡುಬಂದಿರುವ ವಿವರ. 'ದರ್ಶನ'ವು ಅವರಿಗೆ ತೃಪ್ತಿಕೊಡುತ್ತದೆ, ಅವರ ಬಾಳಿಗೊಂದು ತಾತ್ಪರ್ಯವನ್ನು ತುಂಬಿಕೊಡುತ್ತದೆ.

ಬದುಕಿಗೆ ಹಲವು ಮುಖಗಳುಂಟು ; ಹಲವು ಸಮಸ್ಯೆಗಳು, ಆತಂಕಗಳು, ಅಡ್ಡಿಗಳು, ಸುಖಗಳು, ದುಃಖಗಳು. ವೈದಿಕಧರ್ಮವು ನಿಸರ್ಗದ ಚೇತನಗಳನ್ನು ವ್ಯಕ್ತಿಗಳೆಂದು ಬಗೆದು ದೈವಗಳೆಂದು ಎಣಿಸಿದರೆ ಜಾನಪದ ಧರ್ಮವು ಜೀವನದ ಈ ಮುಖಗಳನ್ನು ವ್ಯಕ್ತಿಗಳೆಂದು ಬಗೆದು ದೈವಗಳೆಂದು ಎಣಿಸುತ್ತದೆ. ಭೂತಗಳು ಬದುಕಿನ ಹಲವು ಮುಖಗಳನ್ನು ಸಂಕೇತಿಸುತ್ತವೆ. ಕುಟುಂಬದ, ಸಮುದಾಯದ, ನೆರೆಹೊರೆಯ ಸಮಸ್ಯೆಗಳನ್ನು ಈ ಭೂತಗಳು ಪರಿಹರಿಸಲು ಸಿದ್ಧವಾದುವೆಂಬುದನ್ನು ಮರೆಯಬಾರದು. ಹಳ್ಳಿಯ ಬದುಕಿನ ಚೌಕಟ್ಟಿನಲ್ಲಿ ಇದಕ್ಕೆ ವಿಶಿಷ್ಟವಾದೊಂದು ಮೌಲ್ಯವಿದೆ. ಈ ಬದುಕಿನಲ್ಲಿ ಪ್ರಾಣಿಗಳ ಪಾತ್ರ ಹೆಚ್ಚಿನದು. ಕಾಡುಮೇಡುಗಳ, ಬೆಟ್ಟಗುಡ್ಡಗಳ ಪಕ್ಕದಲ್ಲಿ ಜನಾಂಗವು ಇದ್ದರಂತೂ ಪ್ರಾಣಿಗಳ ಆತಂಕ, ನೆರವು ತಪ್ಪಿದ್ದಲ್ಲ. ಹೀಗಾಗಿ ಭೂತದ ಕಲ್ಪನೆಯಲ್ಲಿ ಪ್ರಾಣಿಗಳ ಗುಣಲಕ್ಷಣಗಳು ಆಕಾರ-ವ್ಯವಹಾರಗಳು ಸೇರಿಕೊಂಡು ಬರುವುದು ಸಹಜವೇ. ಕಾಡು ಪ್ರಾಣಿಗಳ, ಕ್ರೂರಮೃಗಗಳ ಕಾಟದಿಂದ ಜನರನ್ನು ತಪ್ಪಿಸುವ ಭೂತಗಳಿರುತ್ತವೆ. ಕಾಡೆಮ್ಮೆಯಿಂದ ಮಹಿಸಂದಾಯ ಅಥವಾ ದುರ್ಗೆ, ಹುಲಿಯಿಂದ ಪಿಲಿಚಾವುಂಡಿ, ಹಾವುಗಳಿಂದ ಮಾನಸೀ ಅಥವಾ ಜಾಂಗುಲೀ, ಆನೆಗಳಿಂದ ವಿನಾಯಕ (ಪಿಳ್ಳೈಯಾರ್) ಅಥವಾ ಅಯ್ಯಪ್ಪ ಮುಂತಾದ ಭೂತಗಳು ನಿದರ್ಶನ. ಕೆಲವು ಭೂತಗಳು ಪ್ರಾಣಿಗಳನ್ನೇರಿ ಬರುವಂತೆ ಕಲ್ಪಿಸಿಕೊಂಡಿರುವುದೂ ಇದೇ ತಾತ್ಪರ್ಯದಿಂದಲೇ : ಸಿಂಹವನ್ನೇರಿರುವ ದುರ್ಗೆ, ಕಾಡುಗೂಳಿಯನ್ನೇರಿರುವ ಶಿವ, ಕಾಡೆಮ್ಮೆಯನ್ನೇರಿರುವ ಕುಟ್ಟಿ-ಚಾತ್ತನ್, ಹುಲಿಯನ್ನೇರಿರುವ ಅಯ್ಯಪ್ಪ ಇತ್ಯಾದಿ.

ತಾವು ದಮನಮಾಡಿ ವಶಪಡಿಸಿಕೊಂಡ ಪ್ರಾಣಿಗಳ ಆಕಾರವನ್ನು ಭೂತಗಳು ಸ್ವಲ್ಪಮಟ್ಟಿಗಾದರೂ ತಳೆಯುವುದು ಜಾನಪದ ಕಲ್ಪನೆಯಲ್ಲಿ ಕಾಣಬರುತ್ತದೆ. ಬಹುಮಟ್ಟಿಗೆ ಜಾನಪದ ದೈವಗಳು ಈ ಬಗೆಯವು. ಆನೆಯ ತಲೆಯ ಗಣೇಶ, ಕೋತಿಯ ಮುಖದ ಹನುಮಂತ, ಹಂದಿಯ ಮುಖದ ವರಾಹ (ಅಥವಾ ವಾರಾಹಿ), ಕುದುರೆಯ ಮುಖದ ಹಯಗ್ರೀವ, ಹದ್ದಿನ ಮುಖ ಲಕ್ಷಣವಿರುವ ಗರುಡ, ಹಾವಿನ ಆಕಾರವನ್ನು ಅಳವಡಿಸಿಕೊಂಡ



ಕೇರಳದ ಜಾನಪದ ದೈವ - ಕುಟ್ಟಿಚಾತ್ತನ್

ನಾಗ–ನಾಗಿನಿಯರು, ಸಿಂಹದ ಮುಖದ ನರಸಿಂಹ, ಎತ್ತಿನ ತಲೆಯ ನಂದಿ ಮೊದಲಾದ ದೈವಗಳು ಸಭ್ಯಸಂಸ್ಕೃತಿಯ ನೆಲೆಗಟ್ಟಿನಲ್ಲೂ ಉಳಿದುಬಂದಿವೆ. ಇವುಗಳು ಮೊದಲಾದುದು ಚೌಕಟ್ಟಿನಲ್ಲಿಯೇ.

ಜಾನಪದ ದೈವಗಳು ಸಭ್ಯಧರ್ಮಕ್ಕೆ ಜಾರಿಕೊಂಡಾಗ ಅವುಗಳ ಆಕಾರ ದಲ್ಲೂ ಗುಣದಲ್ಲೂ ಕರ್ತವ್ಯದಲ್ಲೂ ಮಾರ್ಪಾಟುಗಳು ಒದಗಿದುವು ; ಅವುಗಳ ಸ್ಥಾನಮಾನಗಳೂ ಬದಲಾದುವು. ಜಾನಪದ ಕಲ್ಪನೆಯಲ್ಲಿ ಪ್ರಾಣಿಗಳಿಗೂ ಭೂತಗಳಿಗೂ ಇರುವ ಸಂಬಂಧ ಸರಳವಾದುದು, ನೇರವಾದುದು. ಪ್ರಾಣಿಗಳ ಮತ್ತು ಮನುಷ್ಯರ ಲಕ್ಷಣಗಳು ಕಲೆತುಬಂದುವು. ಹಳ್ಳಿಯ ಇಂಥ

ಭೂತಗಳ ಪ್ರತಿಕೃತಿಗಳನ್ನು ನೋಡಿದಾಗ ಪ್ರಾಣಿಗಳನ್ನೇ ಪೂಜೆಮಾಡುವ ಪದ್ಧತಿಯೆಂಬ ಭ್ರಾಂತಿ ಒದಗುವಂತೆ ನೈಜವಾಗಿ ಸರಳವಾಗಿ ಇರುತ್ತವೆ. ಆದರೆ ಜನರ ಪೂಜೆಗೆ ಪಾತ್ರವಾಗುವುದು ಪ್ರಾಣಿಯಲ್ಲ, ಪ್ರಾಣಿಯ ರೂಪನ್ನು ತಳೆದ ಭೂತ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪಂಜುರ್ಲಿ (ಹಂದಿಯ ಮೈಯನ್ನು ಹೊತ್ತ ಭೂತ), ಮಹಿಸಂದಾಯೆ (ಎಮ್ಮೆಯ ಆಕಾರದ ಭೂತ), ಜರಂದಾಯೆ (ಕುದುರೆಯಂತಿರುವ ಭೂತ), ನಂದಿಗೋಣೆ (ಎತ್ತಿನ ಭೂತ), ನಾಗಕನ್ಯೆ (ಹಾವಿನ ಭೂತ) ಇವೆಲ್ಲ ಪ್ರಾಣಿಪೂಜೆಯೆಂದು ಹೇಳುವುದು ತಪ್ಪಾಗುತ್ತದೆ ; 'ಟೋಟೆಮ್' ಪೂಜೆಯೂ ಅಲ್ಲ. ಇದು ಭೂತಾರಾಧನೆಯ ಒಂದು ವಿವರ ವೆನ್ನುವುದನ್ನು ಮರೆಯಬಾರದು. ಜಾನಪದ ನೆಲೆಯಲ್ಲಿ ಪ್ರೌಢವಾದ, ಸಂಪೂರ್ಣ ಧರ್ಮವೇ.

ಭಾರತೀಯ ಸಂಸ್ಕೃತಿಯು ಚಿಗುರೊಡೆದಂದಿನಿಂದ ಇಂದಿನವರೆಗೂ ಆಯತಪ್ಪದೆ ಉಳಿದುಕೊಂಡು ಬಂದಿರುವ ಧರ್ಮವೆಂದರೆ ಯಕ್ಷರ, ನಾಗಗಳ, ಭೂತಗಳ ಆರಾಧನೆ. ದೇಶದ ಎಲ್ಲ ಪ್ರಾಂತ್ಯಗಳಲ್ಲೂ ಬಳಕೆಯಲ್ಲಿರುವ ಧರ್ಮ ಇದು. ಸಭ್ಯಸಮಾಜದಲ್ಲಿಯೂ ಇದರ ಪ್ರಭಾವ ಸಾಕಷ್ಟು ಮೂಡಿಬಂದಿದೆ. ಆದರೆ ಹಳ್ಳಿಯ ಕಡೆಯೇ ಇದು ಬಹುಮಟ್ಟಿಗೆ ಪ್ರಚಲಿತವಾಗಿದೆಯೆನ್ನುವು ದೇನೋ ದಿಟ. ಒಂದೊಂದು ಹಳ್ಳಿಯಲ್ಲಿಯೂ ಬೇರೆ ಬೇರೆ ಇಂಥ ದೈವಗಳ ಕಲ್ಪನೆಯಿದೆ. ದೇಶದ ಧರ್ಮದಲ್ಲಿ ಪ್ರಮುಖರೆನಿಸಿದ ನಾಗರ, ಸಭ್ಯ ದೇವತೆ ಗಳಿಗೆ ಅಧೀನರಾದಂತೆ, ಪರಿವಾರದಂತೆ ಈ ಜಾನಪದ ದೈವಗಳನ್ನು ಭಾವಿಸಿ ಕೊಂಡಿದ್ದಾರೆ. ಅಸಂಖ್ಯಾತ ದೈವಗಳ ವಿಂಗಡಣೆ, ಒಕ್ಕೂಟ ಹೀಗೆ ನಡೆದಿದೆ.

ಕೆಲವು ದೈವಗಳು ನಾಗರ ನೆಲೆಯಲ್ಲಿಯೂ ಸ್ವತಂತ್ರ ದೇವತೆಗಳಾಗಿಯೇ ಉಳಿದು ಬಂದಿರುವ ಕೆಲವು ನಿದರ್ಶನಗಳಿವೆ. ಗಣೇಶನೊಬ್ಬ ಇಂಥ ದೇವತೆ. ಅವನ ಜಾನಪದ ಹಿನ್ನಲೆಯಂತೂ ಆಕಾರದಿಂದಲೇ ಎದ್ದು ಕಾಣುತ್ತದೆ. ಅವನ ಇತಿಹಾಸ ಯಕ್ಷನಾಗಿ ಆರಂಭವಾಯಿತು. ಇಂದಿಗೂ ಅವನ ಸ್ವರೂಪ, ಸ್ವಭಾವ ಎರಡೂ ಯಕ್ಷನದೇ. ಕಾಲಕ್ರಮದಲ್ಲಿ ಅವನನ್ನು ನಾಗರದೇವತೆಯಾದ ಶಿವನ ಕುಟುಂಬದಲ್ಲಿ ಸೇರಿಸಿದರು, ಶಿವನ ಅಥವಾ ಗೌರಿಯ ಮಗನೆಂದು, ಸುಬ್ರಹ್ಮಣ್ಯನ ಅಣ್ಣನೆಂದು. ಆದರೆ ಗಣೇಶನ ಪೂಜೆ ಸ್ವತಂತ್ರವಾಗಿಯೇ ನಾಡಿನಲ್ಲೆಲ್ಲ ನಡೆಯುತ್ತದೆ. ಕಥೆಯೇನೇ ಇರಲಿ, ಕಟ್ಟಳೆಯಲ್ಲಂತೂ ಅವನು ಸ್ವತಂತ್ರ ದೇವತೆಯೇ. ಒಂದು ಕಾಲಕ್ಕೆ ಗಣೇಶನ ಪ್ರಭಾವದ ಹರವು ಗ್ರಾಮಕ್ಕೋ ಜಾನಪದಕ್ಕೋ ಸೀಮಿತವಾಗಿದ್ದಿತೇನೋ. ಆದರೆ ಈ ಎರಡು



ಕೋಲಾರದ ಕುರುಡುಮಲೆಯ ಗಣೇಶ

ಸಾವಿರ ವರ್ಷಗಳಷ್ಟು ಕಾಲ ವ್ಯಾಪಕವಾಗಿ ಅವನ ಪ್ರಭಾವ ಹರಡಿದೆ. ಮುಂದಿನ ಸಂಪುಟವೊಂದರಲ್ಲಿ ಅವನನ್ನು ಕುರಿತ ವಿಸ್ತೃತ ವಿವೇಚನೆ ಬರುತ್ತದೆ. ಇಲ್ಲಿ ಅವನ ಜಾನಪದ ನೆಲೆಯನ್ನು ಗಮನಿಸಿದರೆ ಸಾಕು.



ಹಳ್ಳಿಯೊಂದರ ಗಣೇಶ ಬಂಡೆ

ಗುಪ್ತವಂಶದ ದೊರೆಗಳ ಕಾಲದಿಂದ ಗಣೇಶನ ಮೂರ್ತಿಶಿಲ್ಪ ಹೆಚ್ಚೂ ಕಡಮೆ ಒಂದೇ ತೆರನಾಗಿ ಉಳಿದಿದೆ : ಆನೆಯ ತಲೆ, ಬೊಜ್ಜುಮೈ, ಬಿಡುವಾಗಿ ಕುಳಿತ ಭಂಗಿ, ಕೈಗಳಲ್ಲಿ ತಿನಿಸುಗಳು. ಬಹುಮಟ್ಟಿಗೆ ಗಂಡಸೆಂದೇ ಅವನ ರೂಪಕಲ್ಪನೆ ; ಆದರೆ ಹೆಣ್ಣು ರೂಪದಲ್ಲಿಯೂ (ಗಣೇಶಾನಿ ಅಥವಾ ವೈನಾಯಕಿ) ಕಾಣಿಸಿಕೊಂಡಿರುವುದುಂಟು. ಪ್ರಾಚೀನ ಶಿಲ್ಪಗಳು ಆನೆಯ ತಲೆಯನ್ನಷ್ಟೇ ಸ್ಪಷ್ಟವಾಗಿ ಕಡೆದು ಉಳಿದಂತೆ ಮೈಯನ್ನು ಹಾಗೆಯೇ ಬಿಟ್ಟಂತೆ ಇವೆ. ಮಣ್ಣಿನಲ್ಲಿ ಒರಟಾಗಿ ಅವನ ಮೂರ್ತಿಯನ್ನು ಮಾಡುವ ವಾಡಿಕೆಯಿದೆ; ಮೈಮೇಲೆ ಕುಂಕುಮವನ್ನೋ ಕೆಂಪು ಬಣ್ಣವನ್ನೋ ಬಳಿಯುವುದುಂಟು. ಮರಗಳ ಅಡಿ, ಅದೂ ತಾಳೆಯ ಮರದಡಿ, ಕೆರೆಗಳ ಬದಿ, ಊರ ಹೊರಗೆ ಗಣೇಶನಿರುವುದು ಹೆಚ್ಚು. ಊರಿನೊಳಗೆ ನಾಲ್ಕು ದಾರಿಗಳು ಸೇರುವೆಡೆಯೂ ಗಣೇಶನನ್ನು ಕೂರಿಸುತ್ತಾರೆ.

ಕೊಲ್ಲೂರು ಮೂಕಾಂಬಿಕೆಯ ಗುಡಿಯಲ್ಲಿ ಅರ್ಕಗಣಪತಿ
(ಎಕ್ಕದ ಗಿಡದ ಬೇರುಗಳು ಗಣಪತಿಯ ಆಕಾರದಲ್ಲಿ)

ಗಣೇಶನ ಮೊದಲಿನ ಗುಡಿಗಳು ಸರಳವಾದುವು ; ಚಪ್ಪಟೆಯ ಸೂರು, ಗೋಡೆಗಳ ಮೇಲೆ ಏನೊಂದು ಅಲಂಕರಣವೂ ಇರದು. ಮುಂದೆ ಆಗಮಗಳ ಚೌಕಟ್ಟಿನಲ್ಲಿ ಗಣೇಶ ಸೇರಿಕೊಂಡುಬಂದಾಗಲೂ ಗಣೇಶನ ಗುಡಿ ಸರಳವಾಗಿಯೇ ಇರಬೇಕೆಂಬ ವಿಧಿಯಿದ್ದಿತು ; ಅವನನ್ನು ಗೂಡಿನಲ್ಲಿ ಕೂಡಿಸಬೇಕೆಂದೇ ಅಲ್ಲಿನ ವಿಧಿ. ಅವನ ಗುಡಿಗೆ ಬಾಗಿಲುಗಳಿರಬಾರದಂತೆ, ಗುಡಿಯ ಮೇಲೆ ಗೋಪುರವಿರಬಾರದಂತೆ. ಶಿವನ ಗುಡಿಯೊಳಗೆ ಗಣೇಶನಿಗೆ ಎಡೆಯನ್ನು ಒದಗಿಸಿದಾಗ



ಗಣೇಶನ ತಲೆಯಷ್ಟೇ ಇರುವ ಬಂಡೆ

ಒಂದು ಗೂಡೇ ಅವನ ಪಾಲಿಗೆ ಬರುವುದು, ಅಥವಾ ತೆರೆದ ಮಂಟಪದಲ್ಲಿ ಅವನನ್ನು ಕೂರಿಸುತ್ತಾರೆ. ಗಣೇಶನಿಗೆ ಭವ್ಯಮಂದಿರಗಳಿರುವುದು ಈಚೆಗೆ ತೋರಿಕೊಂಡಿರುವ ಪದ್ಧತಿ. ಗಣೇಶನಿಗೆಂದೇ ಸಿದ್ಧವಾದ ಸಾಂಪ್ರದಾಯಿಕ, ಆಗಮ-ಶುದ್ಧ ದೇವಾಲಯಗಳು ಅಪುರೂಪ. ಆಗಮದೊಳಗೆ ಗಣೇಶ ಸೇರಿಕೊಂಡುಬಂದಾಗ ಅವನು ಪಾರ್ಶ್ವದೇವತೆಯೇ. ಸ್ಮೃತಿಗಳು ಕೂಡ ಅವನನ್ನು ಯಕ್ಷನೆಂದೇ ವ್ಯವಹರಿಸುತ್ತವೆ.

ಗಣೇಶನು ತನ್ನ ಜಾನಪದ ಲಕ್ಷಣವನ್ನು ಮೀರಿ, ಬುಡಕಟ್ಟಿನ ನಿರ್ಬಂಧದಿಂದ ಹೊರಗೆ ಬಂದು ತನ್ನ ಸ್ವತಂತ್ರವಾದ ಬದುಕನ್ನು ನಡೆಸತೊಡಗಿದನಾದರೆ, ಜಾನಪದನೆಲೆಯವನೇ ಆದ ಇನ್ನೊಬ್ಬ ದೇವತೆ ಮಂಗನ ಮೋರೆಯ

ರಾಜಾಸ್ಥಾನದ ಮೇವಾಡದ ಜಾನಪದ ಚಿತ್ರಪಟದಲ್ಲಿ ಹನುಮಂತ

ಆಂಧ್ರಪ್ರದೇಶದ ವೀರ ಹನುಮಂತ

ಮನುಷ್ಯನ ಮೈಯ ಹನುಮಂತ ನಾಗರದೇವತೆಯೊಬ್ಬನ ಪರಿಚಾರಕನಾಗಿಯೇ ಕಂಡುಕೊಂಡ. ಆದರೆ ಜನಾಂಗವನ್ನು ಕಾಪಾಡುವ ದೈವವಾಗಿ ಉಳಿದ. ನಮ್ಮ ಕಾಲದಲ್ಲಿಯೂ, ನಾಡಿನ ಎಲ್ಲ ಭಾಗಗಳಲ್ಲಿಯೂ ಹನುಮಂತನ ಪೂಜೆ ವಿಶೇಷವಾಗಿಯೇ ನಡೆಯುತ್ತಿದೆ ; ಅವನ ಮಹಿಮೆಯ ಕಥೆಗಳು ಬೇಕಾದಂತೆ ಹರಡಿಕೊಂಡಿವೆ. ಆದರೆ ಅವನು ರಾಮನ ಬಂಟ. ಅವನ ಬಲ, ಸಾಹಸ ಗಳಂತೆಯೇ ಅವನ ಭಕ್ತಿಯೂ ಜನಪ್ರಿಯವಾದ ವಿವರ.

ಹಳ್ಳಿಗಳ ಕಡೆ 'ಊರಬಾಗಿಲ ಹನುಮಂತ', ಪಟ್ಟಣಗಳಲ್ಲಿ 'ಕೋಟೆಯ ಕಾವಲು ಹನುಮಂತ' ; ಹಳ್ಳಿಗಳಲ್ಲಿ ರೋಗರುಜಿನೆಗಳಿಂದ ಪಾರಾಗಲು, ಭೀತಿಯನ್ನು ತೊರೆದುಕೊಳ್ಳಲು, ನಾಡಗಡಿಯನ್ನು ಕಾಪಾಡಲು ಹನುಮಂತ ನನ್ನು ಮೊರೆಹೋಗುತ್ತಾರೆ. ಜಟ್ಟಿಗಳಂತೂ ಇವನನ್ನು ಇಷ್ಟದೈವವೆಂದು ನಂಬುತ್ತಾರೆ. ಮಾಟ–ಮದ್ದು ಮಾಡುವವರಿಗೂ ಹನುಮಂತನ ನೆರವು ಬೇಕು. ಆರೋಗ್ಯಕ್ಕೆ ಅವನು ಅಭಿಮಾನಿ ದೇವತೆ; ಮಕ್ಕಳ ಕಾಯಿಲೆಗಳಿಗಂತೂ ಅವನ ತಾಯಿತವಿರಲೇಬೇಕು. ಹುಡುಗರು ಕಾರಣವಿಲ್ಲದೆ ಹೆದರಿದರೆ, ಕನವರಿಸಿ ಕೊಂಡರೆ, ಗಾಬರಿಗೊಂಡರೆ ಹನುಮಂತನ ಹೆಸರು ರಾಮಬಾಣ. ಹನುಮಂತನ ಭಕ್ತರು ಕೆಚ್ಚೆದೆಯುವರೆಂದು ಪ್ರಖ್ಯಾತಿ.

ರಾಮನ ನೆಂಟು ಬೆಳೆಯುವ ಮೊದಲು ಹನುಮಂತ ಸ್ವತಂತ್ರನಾಗಿದ್ದ ದೇವತೆಯೆನ್ನುವುದರಲ್ಲಿ ಸಂಶಯವಿಲ್ಲ. ಹನುಮಂತನೆಂಬ ಹೆಸರು ಸಂಸ್ಕೃತ ಭಾಷೆಯದಲ್ಲ ; ದ್ರಾವಿಡವರ್ಗಕ್ಕೆ ಸೇರಿದ ಭಾಷೆಯ 'ಆಣ್-ಮಂತಿ' (ಎಂದರೆ ಗಂಡುಕೋತಿ) ಎಂಬ ಮಾತಿನ ಸಂಸ್ಕೃತೀಕರಣ. ಜಾನಪದ ದೈವವನ್ನು ಸಭ್ಯ ಸಂಸ್ಕೃತಿ ತನ್ನಲ್ಲಿ ತುಂಬಿಸಿಕೊಂಡಾಗ ದೈವದ ಹೆಸರನ್ನೂ ಎತ್ತಿಕೊಂಡಿತು. ಹನುಮಂತನ ಹಳೆಯ ಬಿಂಬಗಳು ಘೋರಾಕಾರದವೇ. ಜಾನಪದ ಕಟ್ಟಳೆಗಳಲ್ಲಿ ಹನುಮಂತನ ಮುಖವಾಡವೂ ಮುಖ್ಯವಾದುದು.

ಹನುಮಂತನ ಮೂರ್ತಿಕಲ್ಪನೆಯಲ್ಲಿ ಕೋತಿಯ ಮುಖ ಮಾತ್ರವಲ್ಲದೆ ಕೋತಿಯ ಬಾಲವೂ ಸೇರಿಕೊಂಡಿದೆ. ಆದರೆ ಮೈ-ಕೈ-ಕಾಲುಗಳು ಹೆಚ್ಚೂ ಕಡಮೆ ಮನುಷ್ಯರವೇ. ಆಗಮಶುದ್ಧವಾದ ಶಿಲ್ಪ ಈ ದೈವವನ್ನು ಹೆಚ್ಚು ಹೆಚ್ಚು ಮನುಷ್ಯ ರೂಪದಲ್ಲಿ ನಿಲ್ಲಿಸಲು ತೊಡಗಿತು; ಆದರೆ ಗ್ರಾಮೀಣ ಚಿತ್ರಣ ದಲ್ಲಿ ಯಕ್ಷಾಕಾರವೇ ಎದ್ದು ಕಾಣುತ್ತದೆ. ಕೆಲವೊಮ್ಮೆ ಅವನಿಗೆ ಇತರ ಪ್ರಾಣಿ ಗಳ ಮುಖಗಳನ್ನೂ ಅಳವಡಿಸುವುದುಂಟು. 'ಪಂಚಮುಖಿ ಆಂಜನೇಯ'ನ ಐದು ತಲೆಗಳು ಕಪಿ, ಕುದುರೆ, ಹಂದಿ, ಸಿಂಹ (ಅಥವಾ ಹುಲಿ), ಹದ್ದು



ಮುಳುಬಾಗಿಲಿನ ವೀರಾಂಜನೇಯ

ಗ್ರಾಮ ರಕ್ಷಕ ಹನುಮ

(ಗರುಡ) ಇವುಗಳವು. ಹದ್ದಿಗೆ ಬದಲು ಕೆಲವು ವೇಳೆ ಗಿಳಿಯ (ಶುಕ) ಮುಖ ವನ್ನು ಮೂಡಿಸುವುದುಂಟು. ನರಸಿಂಹ, ವರಾಹ, ಹಯಗ್ರೀವ, ಗರುಡ ಈ ದೇವತೆಗಳನ್ನು ಹನುಮಂತನಲ್ಲಿ ಅಡಗಿಸುವ ಯತ್ನ ಇದು. ಐದು ತಲೆಗಳಿಗೆ ಸರಿಯಾಗಿ ಹತ್ತು ಕೈಗಳನ್ನು ಕಾಣಿಸುತ್ತಾರೆ, ಬಗೆಬಗೆಯ ಆಯುಧಗಳನ್ನು ಹಿಡಿದಂತೆ. ಆಗಮದ ವಿವರಣೆ ಏನೇ ಇರಲಿ, ಈ ಐದು ಬಗೆಯ ಪ್ರಾಣಿಗಳ ಕಾಟದಿಂದ ಕಾಪಾಡುವ ದೈವವೆಂಬುದು ಈ ಸಂಮಿಶ್ರ-ಮೂರ್ತಿಚಿತ್ರದ ತಾತ್ಪರ್ಯ.

ಮೊದಲಿಗೆ ಗಣೇಶನ ಗುಡಿಗಳಂತೆ ಹನುಮಂತನ ಗುಡಿಗಳೂ ಸಣ್ಣವೇ; ದಾರಿಯ ಬದಿಯಲ್ಲಿ ಗೂಡಿನಂತಿರುವ, ಮಾಡದಂತಿರುವ ಎಡೆಗಳೇ. ಕಲ್ಲಿನಲ್ಲಿ ಒರಟು ಒರಟಾಗಿ ಕಡೆದ ಹನುಮಂತನ ಮೂರ್ತಿಗಳನ್ನು ಬಿಡಿಬೀಸಾಗಿ ಬಿಡು ವುದು ವಾಡಿಕೆ. ದೊಡ್ಡ ದೊಡ್ಡ ಬಂಡೆಗಳಲ್ಲಿ ಹನುಮಂತನ ಆಕಾರವನ್ನು



ಪಂಚಮುಖ ಹನುಮಂತನ ಮುಖವಾಡ

ಕಡೆಯುವುದನ್ನು ನಾಡಿನ ಎಲ್ಲೆಡೆಯೂ ಕಾಣಬಹುದು. ಜಾನಪದಕಟ್ಟಿನಲ್ಲಿ ಹನುಮಂತ ಸ್ವತಂತ್ರದೈವವೇ. ರಾಮನ ನೆಂಟು ಒದಗಿಬಂದಾಗಲೂ, ಹನುಮಂತನನ್ನೇ ದೊಡ್ಡದಾಗಿ, ಮುಖ್ಯವಾಗಿ ಕಾಣಿಸಿ ರಾಮನನ್ನು ಸಣ್ಣದಾಗಿ ಸೇರಿಸುತ್ತಾರೆ.

ರಾಜಾಸ್ಥಾನದ ಇನ್ನೊಂದು ಪಂಚಮುಖ ಹನುಮಂತನ ಚಿತ್ರ

ಕೇರಳದ ಭಕ್ತಾಂಜನೇಯ

ಬೆಟ್ಟವನ್ನು ಹೊತ್ತು ತರುತ್ತಿರುವ ಹನುಮಂತ
(ಹಿಮಾಚಲಪ್ರದೇಶದ ಚಿತ್ರ)

ರಾಮನ ಜೊತೆಗಿದ್ದಾಗ ಹನುಮಂತನದು ಕೈಜೋಡಿಸಿರುವ ಭಕ್ತ ವಿಗ್ರಹ. ಸ್ವತಂತ್ರವಾಗಿದ್ದಾಗ ಅವನು 'ವೀರಾಂಜನೇಯ'. ಒಂದು ಕೈಯಲ್ಲಿ ಬೆಟ್ಟವನ್ನೂ ಇನ್ನೊಂದರಲ್ಲಿ ಗದೆಯನ್ನೂ ಹಿಡಿದು ಓಡುತ್ತಿರುವಂತೆ ಚಿತ್ರಿಸುತ್ತಾರೆ. ರಾಮಾಯಣದ ಕಥೆಯಲ್ಲಿ, ಯುದ್ಧ ನಡೆಯುತ್ತಿರುವಾಗ ರಾಕ್ಷಸರ ಪೆಟ್ಟಿಗೆ ಲಕ್ಷ್ಮಣನು ತತ್ತರಿಸಿ ಪ್ರಜ್ಞೆತಪ್ಪಿ ಬಿದ್ದಾಗ, ಅವನ ಪ್ರಾಣವನ್ನು ಉಳಿಸಲು ದೂರದಿಂದ ಸಂಜೀವಿನೀ ಬೆಟ್ಟವನ್ನೇ ಕಿತ್ತು ತಂದ ಸಂದರ್ಭ ಇಲ್ಲಿನದು. ಉತ್ತರದೇಶದ ಕಡೆ ಹನುಮಂತನನ್ನು 'ಬಾಲಾಜಿ'ಯೆಂಬ ಹೆಸರಿನಿಂದ ಕರೆಯುತ್ತಾರೆ. 'ಬಾಲಾಜಿ'ಯೆನ್ನುವುದು ಯಾವುದಾದರೂ ಕ್ಷುದ್ರದೇವತೆಯ ಹೆಸರು; ಜಾನಪದನೆಲೆಯ ನಿರ್ದೇಶನ. ಈ ಹೆಸರಿನಿಂದಲೇ ಯಕ್ಷ, ದೈವ,

ಬಾಲಾಜಿಯಾಗಿ ಹನುಮಂತ (ಹಿಮಾಲಯದ ಗುಡ್ಡಗಾಡಿನಲ್ಲಿ)

ಭೂತಗಳನ್ನೆಲ್ಲ ಕರೆಯುವ ವಾಡಿಕೆ ಅಲ್ಲಿದೆ. ಬಾಲಾಜಿಯ ಕಲ್ಪನೆಯಲ್ಲಿ ಅದ್ಭುತವಾದ ಶಕ್ತಿ, ಮೈನವಿರೇಳಿಸುವ ಸಾಹಸ ಮುಖ್ಯವಾದ ವಿವರ. ಅದು ಹಳ್ಳಿಯನ್ನು ಕಾಪಿಡುವ, ಜನಾಂಗದ ಒಬ್ಬೊಬ್ಬರನ್ನೂ ಸಲಹುವ, ಆತಂಕಗಳಿಂದ ಪಾರುಮಾಡುವ ದೈವ. ಅದನ್ನು ಪೂಜೆಮಾಡುವಾಗ ಆದರದ ಜೊತೆಗೆ ಹೆದರಿಕೆಯೂ ಇರುತ್ತದೆ. ಒಲಿದಾಗ ಅವನ ನೆರವು, ಮುನಿದಾಗ ಕೇಡು.

ಗಣೇಶ, ಹನುಮಂತ ಇಂಥ ಜಾನಪದ ದೈವಗಳು; ಆಗಮದ ಸಂಪ್ರದಾಯಕ್ಕೆ ಸೇರಿಬಂದು ಸಭ್ಯತೆಯ ಕೆಲವು ಲಕ್ಷಣಗಳನ್ನು ಪಡೆದುಕೊಂಡುವು. ಆದರೆ ಈ ದೈವಗಳನ್ನು ಕುರಿತ ಕಟ್ಟಳೆಗಳಲ್ಲಿ ಹಳೆಯ ಕಲ್ಪನೆಗಳೇ ತುಂಬಿಕೊಂಡಿವೆ.